Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 40 | ಸೆಪ್ಟೆಂಬರ್ 26–ಅಕ್ಟೋಬರ್ 2, 2022 | ಪುಟ 16 | ರೂ.10/-
Volume: 16 Issue: 40 September 26-October 2, 2022 Pages: 16 Price: 10/-
https://janashakthi.wordpress.com e-mail : js_weekly@yahoo.com



ಬಾಗೇಪಲ್ಲಿಯಲ್ಲಿ ರಾರಾಜಿಸಿದ ಕೆಂಬಾವುಟಗಳು


ಜನಪರ ಪರ್ಯಾಯಕ್ಕಾಗಿ ಜನಾಂದೋಲನದ ಘೋಷಣೆ



ಬೆಂಗಳೂರು ಪ್ರವಾಹಕ್ಕೆ ಶಕ್ತಿಸೌಧ ಹೊಕ್ಕವರೇ ಹೊಣೆ

ಜನ ಚಳುವಳಿಗಳ ಪ್ರೀತಿಯ ಮೇಷ್ಟ್ರು ಬಿ.ಜಿ.ಎಂ. ಇನ್ನಿಲ್ಲ







ಆಶಾ ಕಾರ್ಯಕರ್ತೆಯರ ಮೊದಲ ರಾಷ್ಟ್ರೀಯ ಒಕ್ಕೂಟದ ರಚನೆ ಡಿಸೆಂಬರ್ 10 ರಂದು ದೇಶಾದ್ಯಂತ ಪ್ರತಿಭಟನೆಗೆ ಎಡಬ್ಲ್ಯುಎಫ್‌ಎಫ್‌ಐ ಕರೆ

17 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಶಾ ಕಾರ್ಯಕರ್ತೆಯರು ಹರ್ಯಾಣದ ಕುರುಕ್ಷೇತ್ರದಲ್ಲಿ ಸೆಪ್ಟೆಂಬರ್ 16ರಿಂದ 18 ರ ವರೆಗೆ ಮೂರು ದಿನಗಳ ಕಾಲ ಚರ್ಚೆಗಳ ನಂತರ ಚಪ್ಪಾಳೆ ಮತ್ತು ಘೋಷಣೆಗಳ ನಡುವೆ ತಮ್ಮ ಮೊಟ್ಟ ಮೊದಲ ಅಖಿಲ ಭಾರತ ಒಕ್ಕೂಟವನ್ನು– ಆಶಾ ವರ್ಕರ್ಸ್ ಅಂಡ್ ಫೆಸಿಲಿಟೇಟರ್ಸ್ ಫೆಡರೇಶನ್ ಆಫ್ ಇಂಡಿಯ(ಎಡಬ್ಲ್ಯುಎಫ್‌ಎಫ್‌ಐ) ರಚಿಸಿಕೊಂಡಿದ್ದಾರೆ. ಈ ಮೊದಲ ಸಮ್ಮೇಳನವು ಡಿಸೆಂಬರ್ 10, 2022 ರಂದು 'ವಿಶ್ವ ಮಾನವ ಹಕ್ಕುಗಳ ದಿನ' ದಂದು, ಬಿಜೆಪಿ ಸರಕಾರದಿಂದ ಆಶಾ ಕಾರ್ಯಕರ್ತೆಯರ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿದೆ.

ಆಶಾ ಕಾರ್ಯಕರ್ತೆಯರ ಅಖಿಲ ಭಾರತ ಸಮನ್ವಯ ಸಮಿತಿಯನ್ನು 2009 ರಲ್ಲಿ ಸಿ.ಐ.ಟಿ.ಯು. ಮುತುವರ್ಜಿಯಿಂದ ರಚಿಸಲಾಗಿದ್ದು, ಇದು ಚಳುವಳಿಯನ್ನು 20 ರಾಜ್ಯಗಳಿಗೆ ವಿಸ್ತರಿಸಿತು. ಆಶಾ ಕಾರ್ಯಕರ್ತೆಯರ ಸಮರ್ಪಿತ ಕೆಲಸ, ವಿಶೇಷವಾಗಿ ಕೋವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಸಲ್ಲಿಸಿದ ಸೇವೆಗಳು ಒಂದೆಡೆಯಲ್ಲಿ ಅವರಿಗೆ ವಿಶ್ವ ಆರೋಗ್ಯ ಸಂಘಟನೆಯ 'ಜಾಗತಿಕ ನಾಯಕರ' ಸ್ಥಾನಮಾನ ತಂದಿದರೆ, ತಮ್ಮ ಹಕ್ಕುಗಳಿಗಾಗಿ ಅವರ ಸಮರಧೀರ ಚಳುವಳಿಗಳು ಮತ್ತು ಹೋರಾಟಗಳ ಸಾಧನೆಗಳೂ ಬಹಳಷ್ಟು. ಈ ಹಿನ್ನೆಲೆಯಲ್ಲಿ ಸಮನ್ವಯ ಸಮಿತಿ ಸಂಘಟನೆಯನ್ನು ಕ್ರೋಡೀಕರಿಸಲು ಮತ್ತು ವಿಸ್ತರಿಸಲು ಒಂದು ಅಖಿಲ ಭಾರತ ಒಕ್ಕೂಟವನ್ನು ರಚಿಸಲು ನಿರ್ಧರಿಸಿತು. ಅತ್ಯಂತ ಸಮರಧೀರ ಹೋರಾಟಗಳನ್ನು ನಡೆಸಿರುವ ರಾಜ್ಯಗಳಲ್ಲಿ ಒಂದಾದ ಹರಿಯಾಣ ಈ ನಿಟ್ಟಿನಲ್ಲಿ ಮೊದಲ ಸಮ್ಮೇಳನವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿತು. ಹರ್ಯಾಣ ಆಶಾ ಕಾರ್ಯಕರ್ತೆಯರ ಸಂಘಟನೆಯ 13,000 ಕ್ಕೂ ಹೆಚ್ಚು ಸದಸ್ಯರು ರಾಜ್ಯದ ಸಿಐಟಿಯು ನೆರವಿನಿಂದ ಸಮ್ಮೇಳನವನ್ನು ನಡೆಸಲು ಅಗತ್ಯವಿದ್ದ ಹಣವನ್ನು ಸಂಗ್ರಹಿಸಿ ಈ ಸಮ್ಮೇಳನವನ್ನು ನಡೆಸಿದ್ದಾರೆ.

ಸಮ್ಮೇಳನದ ಸ್ಥಳಕ್ಕೆ ಆಶಾ ಕಾರ್ಯಕರ್ತೆಯರ ಸಮನ್ವಯ ಸಮಿತಿಯ ಸ್ಥಾಪಕರು ಮತ್ತು ಸಂಯೋಜಕರಾಗಿದ್ದ ರಂಜನಾ ನಿರುಲ ರವರ ಹೆಸರಿಡಲಾಗಿತ್ತು, ಹಾಗೂ ವೇದಿಕೆಗೆ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸುವ ವೇಳೆಯಲ್ಲಿ ನಿಧನರಾದ ಕಾಶ್ಮೀರದ ಆಶಾ ಕಾರ್ಯಕರ್ತೆ ತೆಹ್ಮೀನಾ ಮತ್ತು ರಸ್ತೆ ಅಪಘಾತದಲ್ಲಿ ಅಸು ನೀಗಿದ ಹರ್ಯಾಣ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಪದಾಧಿಕಾರಿ ಉಷಾರವರ ಹೆಸರುಗಳನ್ನಿಡಲಾಗಿತ್ತು. ಸಿಐಟಿಯು ಅಧ್ಯಕ್ಷೆ ಕೆ.ಹೇಮಲತಾ ಸಮ್ಮೇಳನವನ್ನು ಉದ್ಘಾಟಿಸಿದರು. ಆಂಧ್ರ, ಅಸ್ಸಾಂ, ಬಿಹಾರ, ಗುಜರಾತ್, ಹರಿಯಾಣ, ಜಮ್ಮು–ಕಾಶ್ಮೀರ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ, ಪಂಜಾಬ್, ಪಾಂಡಿಚೇರಿ, ರಾಜಸ್ಥಾನ, ತೆಲಂಗಾಣ, ತ್ರಿಪುರಾ, ಉತ್ತರಪ್ರದೇಶ, ಉತ್ತರಾಖಂಡ ಮತ್ತು ಪಶ್ಚಿಮ ಬಂಗಾಳದಿಂದ 285 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಇವರಲ್ಲಿ 10 ಪುರುಷರೂ ಸೇರಿದ್ದಾರೆ. 26 ಆಶಾ ಸಂಚಾಲಕರು ಮತ್ತು 32 ಸಂಘಟಕರು ಸಹ ಭಾಗವಹಿಸಿದರು. 25% ದಷ್ಟು ಪ್ರತಿನಿಧಿಗಳು ಆಶಾ ಕಾರ್ಯಕರ್ತೆಯರಾಗಿ 15 ವರ್ಷಗಳು ಮತ್ತು ಹೆಚ್ಚಿನ ಸೇವೆಯನ್ನು ಹೊಂದಿರುವವರು. ಪ್ರೇಮಾ(ಕೇರಳ), ಧನಲಕ್ಷ್ಮಿ(ಆಂಧ್ರಪ್ರದೇಶ), ಸುನೀತಾ(ಹರ್ಯಾಣ), ಆನಂದಿ (ಮಹಾರಾಷ್ಟ್ರ), ನೋನಿ ಲಿಲಿಸನ್ ಘುಕನ್ (ಅಸ್ಸಾಂ) ಮತ್ತು ದಿಲ್ಷದಾ(ಜಮ್ಮು–ಕಾಶ್ಮೀರ) ರವರಿದ್ದ ಅಧ್ಯಕ್ಷ ಮಂಡಳಿ ಸಮ್ಮೇಳನವನ್ನು ನಡೆಸಿಕೊಟ್ಟಿತು. ವರದಿಯನ್ನು ಮೂರು ಭಾಗಗಳಲ್ಲಿ ಸುರೇಖಾ(ಧೋರಣೆಗಳು ಮತ್ತು ಆಂದೋಲನ), ಮಧುಮಿತಾ ಬ್ಯಾನರ್ಜಿ(ಸಂಘಟನೆ) ಮತ್ತು ಎ. ಆರ್.ಸಿಂಧು(ಮುಂದಿನ ಚಳುವಳಿಗಳು ಮತ್ತು ಕರ್ತವ್ಯಗಳು) ಮಂಡಿಸಿದರು. ಚರ್ಚೆಗಳಲ್ಲಿ 37 ಪ್ರತಿನಿಧಿಗಳು ಭಾಗವಹಿಸಿದರು.

ಒಕ್ಕೂಟದ ಸಂವಿಧಾನವನ್ನು ಅಂಗೀಕರಿಸಿದ ಸಮ್ಮೇಳನವು 45 ಸದಸ್ಯರುಳ್ಳ ಸಮಿತಿಯನ್ನು ಆರಿಸಿತು. ಪಿ.ಪಿ. ಪ್ರೇಮಾರನ್ನು ಅಧ್ಯಕ್ಷರಾಗಿ, ಮಧುಮಿತಾ ಬ್ಯಾನರ್ಜಿಯವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಪುಷ್ಪಾ ಪಾಟೀಲರನ್ನು ಖಜಾಂಚಿಯಾಗಿ ಆಯ್ಕೆ ಮಾಡಲಾಗಿದೆ.

ಡಿಸೆಂಬರ್ 10, 2022, ಮಾನವ ಹಕ್ಕುಗಳ ದಿನದಂದು ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಉಪೇಕ್ಷಿಸಿರುವುದರ ವಿರುದ್ಧ ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಲು ಸಮ್ಮೇಳನ ಕರೆ ನೀಡಿತು.

ಅಲ್ಲದೆ ಡಿಸೆಂಬರ್ 2022 – ಜನವರಿ 2023 ಅವಧಿಯಲ್ಲಿ ಎಲ್ಲ ಸಂಸದೀಯ ಕ್ಷೇತ್ರಗಳಲ್ಲಿ ಸ್ಕಿಂ ಕೆಲಸಗಾರರ 'ಜವಾಬ್ ಮಾಂಗೋ ಅಭಿಯಾನ'ದಲ್ಲಿ ಭಾಗವಹಿಸಲು ಮತ್ತು ಸಂಬಳವಿಲ್ಲದ ಶುಶ್ರೂಷೆ ಕೆಲಸ ಕುರಿತಂತೆ ಬೃಹತ್ ಪ್ರಚಾರಾಂದೋಲನವನ್ನು ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಬಾವುಟದಡಿಯಲ್ಲಿ ಮಾರ್ಚ್ 8, 2023ರ ಅಂತರ್ರಾಷ್ಟ್ರೀಯ ಮಹಿಳಾ ದಿನದಂದು ನಡೆಸಲು ನಿರ್ಧರಿಸಲಾಯಿತು.



ಎಐಕೆಎಸ್‌ನ 35ನೇ ಅಖಿಲ ಭಾರತ ಸಮ್ಮೇಳನದ ಸಂಘಟನಾ ಸಮಿತಿ ರಚನೆ

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ 35 ನೇ ಅಖಿಲ ಭಾರತ ಸಮ್ಮೇಳನವು ಡಿಸೆಂಬರ್ 13 ರಿಂದ 16 ರವರೆಗೆ ಕೇರಳದ ತ್ರಿಶೂರ್‌ನಲ್ಲಿರುವ ಕಾಂ.ಕೆ.ವರದರಾಜನ್ ಸಭಾಂಗಣದಲ್ಲಿ ನಡೆಯಲಿದೆ. ಭಾರತದಾದ್ಯಂತ 1 ಕೋಟಿ 37 ಲಕ್ಷಕ್ಕೂ ಹೆಚ್ಚು ಕಿಸಾನ್ ಸಭಾ ಸದಸ್ಯರನ್ನು ಪ್ರತಿನಿಧಿಸುವ ಸುಮಾರು 800 ಪ್ರತಿನಿಧಿಗಳು ಸಂಘಟನಾ ನಿರ್ಧಾರಗಳನ್ನು ಮತ್ತು ಹೋರಾಟಗಳ ಭವಿಷ್ಯದ ಹಾದಿಯನ್ನು ನಿರ್ಧರಿಸಲಿರುವ ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಇದರ ಸಂಘಟನಾ ಸಮಿತಿಯ ರಚನೆಗೆ ಸಪ್ಟಂಬರ್ 19ರಂದು ತ್ರಿಶೂರ್‌ನ ಕೇರಳ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸಮಾವೇಶದಲ್ಲಿ ಸಮಾಜದ ವಿವಿಧ ಕ್ಷೇತ್ರಗಳ ಜನರು, ಕಲಾವಿದರು, ಸಾಹಿತಿಗಳು, ಕ್ರೀಡಾಪಟುಗಳು, ಚಿತ್ರರಂಗದ ಗಣ್ಯರು, ಸಾಂಸ್ಕೃತಿಕ ಕಾರ್ಯಕರ್ತರು, ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳು, ರೈತರು, ಕೃಷಿ ಕಾರ್ಮಿಕರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು ಮತ್ತು ಯುವಕರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಸಮಾವೇಶಕ್ಕೆ 3000ಕ್ಕೂ ಹೆಚ್ಚು ಮಂದಿ ಆಗಮಿಸಿದ್ದರಿಂದ ಸಭಾಂಗಣ ತುಂಬಿ ತುಳುಕುತ್ತಿತ್ತು.

ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ಮತ್ತು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಂವಿ ಗೋವಿಂದನ್ ಮಾಸ್ತರ್ ಸಮಾವೇಶವನ್ನು ಉದ್ಘಾಟಿಸಿದರು. ಎಐಕೆಎಸ್ ಕೇಂದ್ರವನ್ನು ಪ್ರತಿನಿಧಿಸಿ ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು. ಸಚಿವ ಕೆ.ರಾಧಾಕೃಷ್ಣನ್, ಕೇರಳ ರೈತ ಸಂಘದ ರಾಜ್ಯ ಕಾರ್ಯದರ್ಶಿ ವಲ್ಸನ್ ಪನೋಲಿ, ಸಿಪಿಐ(ಎಂ) ತ್ರಿಶೂರ್ ಜಿಲ್ಲಾ ಕಾರ್ಯದರ್ಶಿ ಎಂ. ಎಂ. ವರ್ಗೀಸ್, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಬೇಬಿ ಜಾನ್, ಶಾಸಕ ಎ.ಸಿ.ಮೊಯ್ದೀನ್, ಕೃಷಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಎನ್.ಆರ್. ಬಾಲನ್, ರಾಜ್ಯ ಕಾರ್ಯದರ್ಶಿ ಎನ್.ಚಂದ್ರನ್, ಸಚಿವೆ ಡಾ.ಆರ್.ಬಿಂದು, ರೈತ ಸಂಘದ ಮುಖಂಡರಾದ ಮುರಳಿ ಪೆರುನೆಲ್ಲಿ ಶಾಸಕ, ತ್ರಿಶೂರ್ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಪಿ.ಕೆ. ಡೇವಿಸ್, ತ್ರಿಶೂರ್ ಮೇಯರ್ ಎಂ.ಕೆ. ವರ್ಗೀಸ್, ಕೇರಳ ಬ್ಯಾಂಕ್ ಅಧ್ಯಕ್ಷ ಗೋಪಿ ಕೋಟಮುರಿಕಲ್, ಉಪಾಧ್ಯಕ್ಷ ಎಂ. ಕೆ. ಕಣ್ಣನ್, ಕೇರಳ ರೈತ ಸಂಘದ ತ್ರಿಶೂರ್ ಜಿಲ್ಲಾ ಕಾರ್ಯದರ್ಶಿ ಎ.ಎಸ್. ಕುಟ್ಟಿ, ಅಧ್ಯಕ್ಷ ಪಿ.ಆರ್. ವರ್ಗೀಸ್, ಖಜಾಂಚಿ ಟಿ.ಎ. ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಮಾವೇಶವು 3000 ಸದಸ್ಯರ ಸಂಘಟನಾ ಸಮಿತಿಯನ್ನು ಹೊಂದಲು ನಿರ್ಧರಿಸಿತು ಮತ್ತು ಎಸ್. ರಾಮಚಂದ್ರನ್ ಪಿಳ್ಳೈ, ಇ.ಪಿ.ಜಯರಾಜನ್, ಮುಖ್ಯ ಪೋಷಕರಾಗಿರುವ ಮತ್ತು ಡಾ.ಆರ್. ಬಿಂದು, ಡಾ.ಪಿ.ಕೆ.ಬಿಜು, ಕೆ.ಸಚ್ಚಿದಾನಂದನ್, ಪದ್ಮಶ್ರೀ ಕಲಾಮಂಡಲಂ ಗೋಪಿ ಆಶನ್, ಎಂ.ಕೆ. ವರ್ಗೀಸ್ (ಮೇಯರ್) ಇನ್ನೋಸೆಂಟ್ ಮಾಜಿ ಸಂಸರು ಪೋಷಕರಾಗಿರುವ 275 ಸದಸ್ಯರ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಎಲ್‌ಡಿಎಫ್ ಸಂಪುಟದಲ್ಲಿ ಸಚಿವರಾಗಿರುವ ಕೆ. ರಾಧಾಕೃಷ್ಣನ್ ಸಂಘಟನಾ ಸಮಿತಿಯ ಅಧ್ಯಕ್ಷರು, ಎ.ಸಿ.ಮೊಯ್ದೀನ್ ಶಾಸಕ, ಪ್ರಧಾನ ಸಂಚಾಲಕರು ಮತ್ತು ಖಜಾಂಚಿ ಎಂ.ಎಂ. ವರ್ಗೀಸ್ ಆಗಿರುತ್ತಾರೆ. ಸಮ್ಮೇಳನದ ನಿರ್ವಹಣೆಗಾಗಿ ವಿವಿಧ ಉಪಸಮಿತಿಗಳನ್ನೂ ಆಯ್ಕೆ ಮಾಡಲಾಯಿತು.

ನವೆಂಬರ್ 15, 2022 ರಂದು ಬ್ರಿಟಿಷ್ ಸಾಮ್ರಾಜ್ಯಶಾಹಿ ಮತ್ತು ಊಳಿಗಮಾನ್ಯ ದಬ್ಬಾಳಿಕೆಯ ವಿರುದ್ಧದ ಚಾರಿತ್ರಿಕ ಹೋರಾಟಗಾರ ಬಿರ್ಸಾ ಮುಂಡಾ ಧ್ವಜ ದಿನವನ್ನು ದೇಶದಾದ್ಯಂತ ಎಲ್ಲಾ ಹಳ್ಳಿಗಳಲ್ಲಿ ಆಚರಿಸಲಾಗುತ್ತದೆ ಮತ್ತು ಎಐಕೆಎಸ್‌ನ ಧ್ವಜಾರೋಹಣ ಮಾಡಲಾಗುತ್ತದೆ. ಸಮ್ಮೇಳನದ ಧ್ವಜವು ಪುನ್ನಪ್ರ ವಯಲಾರ್‌ನಿಂದ ಮೆರವಣಿಗೆಯಲ್ಲಿ ಬರಲಿದೆ ಮತ್ತು ಕಯ್ಯೂರಿನಿಂದ ಧ್ವಜಸ್ತಂಭದ ಮೆರವಣಿಗೆ ಡಿಸೆಂಬರ್ 12 ರಂದು ತ್ರಿಶೂರ್ ತಲುಪಲಿದೆ.

ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿ ಪಿ. ಕೃಷ್ಣಪ್ರಸಾದ್ ನೇತೃತ್ವದ ಒಂದು ಪಂಜಿನ ಜಾಥಾ ತೆಲಂಗಾಣ ಸಶಸ್ತ್ರ ರೈತಹೋರಾಟದ ಸ್ಥಳ ಮತ್ತು ಮೊದಲ ಹುತಾತ್ಮ ದೊಡ್ಡಿ ಕೊಮಾರಯ್ಯನವರ ಊರಾದ ಜನ್‌ಗಾಂವ್ ನಿಂದ ಮತ್ತು ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ನೇತೃತ್ವದ ಮತ್ತೊಂದು ಜಾಥಾ ಮೇಲ್ಜಾತಿಯ ಊಳಿಗಮಾನ್ಯ ಭೂಮಾಲೀಕರು ಮತ್ತು ಅವರ ಗೂಂಡಾಗಳಿಂದ 44 ದಲಿತ ಕೃಷಿ ಕಾರ್ಮಿಕರ ಹತ್ಯಾಕಾಂಡ ನಡೆದ ಕಿಲ್ವನ್ಮಣಿಯಿಂದ ಆರಂಭಗೊಂಡು ಸೇಲಂನಲ್ಲಿ ಸೇರಿ ಸೇಲಂ ಜೈಲು ಹುತಾತ್ಮರಿಗೆ ಗೌರವ ಸಲ್ಲಿಸುತ್ತದೆ. ಅಲ್ಲಿಂದ ಮುಂದುವರೆದು ಡಿಸೆಂಬರ್ 12 ರೊಳಗೆ ವಿವಿಧ ಸ್ಥಳಗಳಲ್ಲಿ ಸಭೆಗಳೊಂದಿಗೆ ಜಾಥಾಗಳು ತ್ರಿಶೂರ್‌ನ ಸಮ್ಮೇಳನದ ಸ್ಥಳಕ್ಕೆ ಬರುತ್ತವೆ. ಡಿಸೆಂಬರ್ 16 ರಂದು ರ‍್ಯಾಲಿ ಮತ್ತು ಸಾರ್ವಜನಿಕ ಸಭೆಯೊಂದಿಗೆ ಸಮ್ಮೇಳನವು ಮುಕ್ತಾಯಗೊಳ್ಳಲಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತ್ರಿಶೂರ್‌ನಲ್ಲಿ ಒಂದು ಲಕ್ಷ ರೈತರ ರ‍್ಯಾಲಿಯನ್ನು ಉದ್ಘಾಟಿಸಲಿದ್ದಾರೆ.

ರಾಷ್ಟ್ರೀಯ ಸೊತ್ತುಗಳ ಅಗದ ಮಾರಾಟಕ್ಕೆ ಲೈಸೆನ್ಸ್ ಶುಲ್ಕ ಇಳಿಕೆ ಲೈಸೆನ್ಸ್ ಅವಧಿ ಏರಿಕೆ–ಸಿಐಟಿಯು ಖಂಡನೆ

ರಾಷ್ಟ್ರೀಯ ಸೊತ್ತುಗಳನ್ನು ಖಾಸಗಿ ಕುಳಗಳಿಗೆ ಅಗ್ಗದಲ್ಲಿ ವಹಿಸಿ ಕೊಡುವ ಪ್ರಯತ್ನದ ಭಾಗವಾಗಿ ಆರೆಸ್ಸೆಸ್–ಬಿಜೆಪಿ ಸರಕಾರ ರೈಲ್ವೆ ಭೂಮಿಯನ್ನು ಖಾಸಗಿಯವರಿಗೆ ಕೊಡಲು ಲೈಸೆನ್ಸ್ ಶುಲ್ಕವನ್ನು 1.5%ಕ್ಕೆ ಇಳಿಸಿದೆ ಮತ್ತು ಪರವಾನಿಗೆ ಅವಧಿಯನ್ನು 35 ವರ್ಷಗಳಿಗೆ ಏರಿಸಿದೆ. ಈ ನಡೆ ಸರಕಾರ 54.8% ಪಾಲು ಹೊಂದಿರುವ ಸಾರ್ವಜನಿಕ ವಲಯದ ಕಂಪನಿ ಕೋನ್‌ಕೋರ್ ನ್ನು ಖಾಸಗಿಯವರಿಗೆ ಒಪ್ಪಿಸಲು ಕೂಡ ದಾರಿ ಮಾಡಿಕೊಡುತ್ತದೆ ಎಂದು ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ.

ಸಂಪಾದಕೀಯ

ಮತೀಯವಾದಿಗಳಿಗೆ ಕುಮ್ಮಕ್ಕು ನೀಡುವ ನಿರ್ಧಾರ

ಹಿಂದೂ ಸಮಾಜೋತ್ಸವ, ಲವ್ ಜಿಹಾದ್ ವಿರುದ್ಧದ ಪ್ರತಿಭಟನೆ, ಮುಂತಾದ ಹಲವು ಸಂದರ್ಭಗಳಲ್ಲಿ ಮತೀಯ ಸಾರಸ್ಯ, ಶಾಂತಿ ಕದಡಿ ಹಿಂಸೆಗೆ ಪ್ರಚೋದಿಸುವ ದ್ವೇಷ ಭಾಷಣಗಳನ್ನು ಮಾಡಿದ 34 ಪ್ರಕರಣಗಳ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಕರ್ನಾಟಕ ಸರ್ಕಾರದ ಸಚಿವ ಸಂಪುಟ ನಿರ್ಧರಿಸಿರುವುದು ಅತ್ಯಂತ ಅಘಾತಕಾರಿ ಮತ್ತು ಅಪಾಯಕಾರಿಯಾಗಿದೆ. ಹಲವು ಪೊಲೀಸ್ ಠಾಣೆಗಳಲ್ಲಿ ಮತ್ತು ನ್ಯಾಯಾಲಯಗಳಲ್ಲಿ ವಿಚಾರಣೆಯ ಹಂತದಲ್ಲಿರುವ ಈ ಪ್ರಕರಣಗಳನ್ನು ಹಿಂಪಡೆಯ ಕೂಡದು ಎಂದು ಪೊಲೀಸ್ ಮಹಾ ನಿರ್ದೇಶಕರು, ಅಭಿಯೋಗ ಹಾಗೂ ಸರ್ಕಾರಿ ವ್ಯಾಜ್ಯಗಳ ಇಲಾಖೆ ಮತ್ತು ಕಾನೂನು ಇಲಾಖೆಗಳು ಖಚಿತ ಅಭಿಪ್ರಾಯವನ್ನು ನೀಡಿದ್ದರೂ ಅವೆಲ್ಲವನ್ನು ಮೂಲೆಗೆ ತಳ್ಳಿ ಸರ್ಕಾರ ನಿರ್ಧರಿಸಿರುವುದರ ಔಚಿತ್ಯ ಪ್ರಶ್ನಾರ್ಹವಾಗಿದೆ. ವಿವಿಧ ಸಂದರ್ಭಗಳಲ್ಲಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ದಂತಹ ಮಹತ್ವದ ಪ್ರಜಾಸತ್ತಾತ್ಮಕ ಚಳುವಳಿಗಳ ಸಂದರ್ಭಗಳಲ್ಲಿ ಸರ್ಕಾರಗಳು ಕ್ರಿಮಿನಲ್ ಕೇಸ್ ಗಳನ್ನು ಹಾಕಿ ದಮನಿಸಲು ಮುಂದಾಗುವುದಿದೆ. ಇಂತಹ ಪ್ರಕರಣಗಳು ಅತ್ಯಂತ ಸಹಜವಾಗಿಯೇ ಜನತೆಯನ್ನು ಮತ್ತು ಅದರ ನಾಯಕರನ್ನು ದಮನಗೊಳಿಸುವ ದುರುದ್ದೇಶದಲ್ಲೇ ಪ್ರಭುತ್ವ ಹೂಡುವ ಪ್ರಕರಣಗಳೆಂಬುದು ಕಂಡು ಬರುತ್ತಿರುತ್ತದೆ. ಆದರೆ ಅಂತಹ ಪ್ರಕರಣಗಳನ್ನು ಹಿಂತೆಗೆದು ನ್ಯಾಯ ಒದಗಿಸುವ ಮತ್ತು ಸಾಂತ್ವನ ನೀಡುವುದಕ್ಕೆ ಚುನಾಯಿತ ಸರ್ಕಾರಕ್ಕೆ ಒಂದು ಮಟ್ಟಿನ ಅಧಿಕಾರ ಇದೆ ನಿಜ. ಆದರೆ ಇಂತಹವುಗಳು ವಾಸ್ತವದಲ್ಲಿ ಸಂವಿಧಾನದ ಆಶಯಗಳಿಗೆ ಮತ್ತು ಕಾನೂನು, ಸುವ್ಯವಸ್ಥೆಯ ದೃಷ್ಟಿಯಲ್ಲಿ ವಿರುದ್ಧ ಆಗಿರುವುದಿಲ್ಲ. ಬದಲಾಗಿ ಆಶಯಕ್ಕೆ ಅನುಗುಣವಾಗಿಯೂ ಇರುತ್ತವೆ. ಜನತೆಯ ಹೋರಾಟಗಳಿಗೆ ಗೌರವ ಕೊಡುವ ಇಂತಹ ಒಂದು ಸದುದ್ದೇಶದ ಅಧಿಕಾರವನ್ನು ಆಡಳಿತ ನಡೆಸುತ್ತಿರುವ ಬಿಜೆಪಿಯು ಸಂಘ ಪರಿವಾರದ ಸಂವಿಧಾನ ವಿರೋಧಿ ಕೃತ್ಯಗಳ ಸಮರ್ಥನೆ ಹಾಗೂ ಸಂರಕ್ಷಣೆಗೆ ದುರ್ಬಳಕೆ ಮಾಡಿರುವುದು ಖಂಡನೀಯ. ಯಾವ ಬಣ್ಣದ ಮತೀಯವಾದಿಗಳಿಗೂ ಇದು ಸಲ್ಲದು.

ವಿವಿಧ ಕಡೆಗಳಲ್ಲಿ ಕೋಮುದ್ವೇಷದ ಪ್ರಚೋದನಾಕಾರಿ ಭಾಷಣ ಮಾಡಿದ, ಕಾನೂನು ಪಾಲನೆಗೆ ಮುಂದಾದ ಪೊಲೀಸರ ಮೇಲೆಯೇ ಹಲ್ಲೆ ನಡೆಸಿದ ಪ್ರಕರಣಗಳು ಇದರಲ್ಲಿವೆ. ಹಿಂದೂ ಜಾಗರಣ ವೇದಿಕೆಯ ರಾಜ್ಯ ಸಂಚಾಲಕ ಜಗದೀಶ ಕಾರಂತರಂತಹ 'ಬೆಂಕಿ ಭಾಷಣ' ದ ಹಿಂದುತ್ವವಾದೀ ನಾಯಕರು, ಕಾರ್ಯಕರ್ತರು ನೇರವಾಗಿ ಭಾಗಿಯಾಗಿರುವ ಪ್ರಕರಣಗಳಿವು. ಕಾರಂತರಂತಹವರು ಭಾಗಿಯಾಗಿ ಮಾತನಾಡಿದ ಬಹುತೇಕ ಕಡೆಗಳಲ್ಲಿ ಕೋಮು ಗಲಭೆಗಳು ಸ್ಫೋಟಗೊಂಡ ಉದಾಹರಣೆಗಳು ಇವೆ. ಇಂತಹ ಕ್ರಿಮಿನಲ್ ಪ್ರಕರಣಗಳನ್ನು ವಾಪಾಸು ತೆಗೆಯಲು ಬೇಡಿಕೆಯನ್ನು ಮಂಡಿಸಿರುವ ಬಹುತೇಕರು ಸಚಿವರು ಮತ್ತು ಆಡಳಿತ ಪಕ್ಷದ ಶಾಸಕರು ಸೇರಿದ್ದಾರೆ ಎನ್ನುವುದು ಮತ್ತಷ್ಟು ಗಂಭೀರವಾದ ವಿಷಯ. ಹಾವೇರಿ ಯ ಹಲಗೇರಿ ಠಾಣೆಯಲ್ಲಿ 2015ರಲ್ಲಿ ಕೋಮು ಗಲಭೆಗೆ ಸಂಬಂಧಿಸಿದ ಪ್ರಕರಣದಲ್ಲಿ ಕರ್ತವ್ಯದಲ್ಲಿದ್ದ ಪೊಲೀಸರ ಮೇಲೆ ಹಲ್ಲೆ ಮಾಡಿರುವ ಮೊಕದ್ದಮೆ ವಾಪಾಸು ತೆಗಿಯಬೇಕೆಂದು ಕೇಳಿರುವವರು ಸ್ವತಃ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು. ನಿಷೇಧಾಜ್ಞೆ ಇದ್ದರೂ ಅದನ್ನು ಉಲ್ಲಂಘಿಸಿ 'ಮಂಗಳೂರು ಚಲೋ' ಬೈಕ್ ರ್ಯಾಲಿ ನಡೆಸಿದ ಮೈಸೂರು ಜಿಲ್ಲೆಯ ಇಲವಾಲ ವ್ಯಾಪ್ತಿಯ ಬಿಜೆಪಿ ಯುವ ಮೋರ್ಚಾದ ಕಾರ್ಯಕರ್ತರ ಮೇಲಿನ ಮೊಕದ್ದಮೆ ಹಿಂಪಡೆಯಲು ಕೇಳಿರುವವರು ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಯವರು. 'ಮುಧೋಳ್ ಚಲೋ' ವೇಳೆ ಪ್ರಚೋದನಕಾರಿ ಭಾಷಣ ಮಾಡಿದ ಜಗದೀಶ ಕಾರಂತ ಮತ್ತು ಇತರೆ ಕಾರ್ಯಕರ್ತರ ವಿರುದ್ಧದ ಮೊಕದ್ದಮೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲುಗುಂಡಿಯ ಹಿಂದೂ ಸಮಾಜೋತ್ಸವದಲ್ಲಿ ಕೋಮು ದ್ವೇಷದ ಭಾಷಣದ ಪ್ರಕರಣ, ದೊಡ್ಡಬಳ್ಳಾಪುರದಲ್ಲಿ 'ಲವ್ ಜಿಹಾದ್' ವಿರುದ್ಧದ ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರನ್ನು ನಿಂದಿಸಿದ ಜಗದೀಶ್ ಕಾರಂತರ ವಿರುದ್ಧದ ಪ್ರಕರಣ, ಶಿರಾದಲ್ಲಿ ಹಿಂದೂ ಜಾಗೃತಿ ಸಮಾವೇಶದಲ್ಲಿ ದ್ವೇಷ ಭಾಷಣ ಮಾಡಿದ ಆರೋಪದಲ್ಲಿ ಜಗದೀಶ್ ಕಾರಂತರ ವಿರುದ್ಧದ ಮೊಕದ್ದಮೆಗಳನ್ನು ವಾಪಸು ತೆಗೆಯಲು ಕೇಳಿರುವವರು ಸಚಿವ ಎಸ್ ಅಂಗಾರ ರವರು. ಸಂವಿಧಾನ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಹೊಣೆಗಾರಿಕೆ ಇರುವ ಸರಕಾರದ ಸಚಿವರೇ ಇಂತಹ ಪ್ರಕರಣಗಳನ್ನು ವಾಪಾಸು ತೆಗೆಯಬೇಕು ಎಂದು ಮನವಿ ಮಾಡುವುದು ಮತ್ತು ಸರ್ಕಾರದ ಭಾಗವಾಗಿ ತೀರ್ಮಾನ ಮಾಡುವುದು ವಿಚಿತ್ರವೇ ಆಗಿದೆ. ಇವು ಸಂವಿಧಾನಾತ್ಮಕ ಆಶಯಗಳ ವಿರುದ್ಧ ಮಾತ್ರವಲ್ಲ, ಇಂತಹ ದ್ವೇಷ ಹುಟ್ಟಿಸುವ ಪ್ರಕರಣಗಳಿಗೆ ಅಧಿಕಾರದಲ್ಲಿರುವವರು ಕುಮ್ಮಕ್ಕು ನೀಡುವ ಕೃತ್ಯವೂ ಆಗಿದೆ. ಹಿಂಪಡೆವ ನಿರ್ಧಾರವನ್ನು ಕೈಗೊಳ್ಳುವ ಮೂಲಕ ಶಾಂತಿ, ಸಾಮರಸ್ಯ ಕದಡುವ, ದ್ವೇಷ ಹೆಚ್ಚಿಸುವಂತಹ ಶಕ್ತಿಗಳಿಗೆ ಸರಕಾರವೇ ಅಭಯ ನೀಡಿದಂತಾಗಿದೆ. ಮುಂದಿನ ದಿನಗಳಲ್ಲಿ ನಿರ್ಭಯವಾಗಿ ಇಂತಹ ಕೃತ್ಯಗಳನ್ನ ಮುಂದುವರಿಸಲು ಮುಕ್ತ ಅವಕಾಶವನ್ನು ಸರಕಾರವೇ ತೆರೆದಿಟ್ಟಿದೆ ಎಂದು ಅಂತಹ ಶಕ್ತಿಗಳು ಭಾವಿಸಬಹುದು. ಇದೇ ಹೊತ್ತಿನಲ್ಲಿ ಕಾನೂನು ಸುವ್ಯವಸ್ಥೆಯನ್ನು ಜಾರಿ ಮಾಡಲು ಹೊರಟ ಅಥವಾ ಹೊರಡಲಿರುವ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರ ಏನನ್ನು ಹೇಳಲು ಬಯಸುತ್ತದೆ? ಶಾಂತಿ ಭಂಗಗೊಳಿಸುವ, ಕಾನೂನು ಸುವ್ಯವಸ್ಥೆಯನ್ನು ಹದಗೆಡಿಸುವ, ಸಮಾಜದ ಸ್ವಾಸ್ಥ್ಯ ಕೆಡಿಸುವ ಶಕ್ತಿಗಳನ್ನು, ಅವರು ನಡೆಸುವ ಧಾಳಿಯಂತಹ ಕೃತ್ಯಗಳನ್ನು ತಡೆಯಲು ಹೋದರೆ ಇಂತಹ ಕಪಾಳ ಮೋಕ್ಷ ಮಾಡಲಾಗುವುದು ಎಂದೇ? ಇಂತಹ ಶಕ್ತಿಗಳ ಅಟ್ಟಹಾಸಗಳಿಗೆ ನಿಯಂತ್ರಣಕ್ಕೆ ಮುಂದಾಗಬಾರದು ಎಂದೇ? ಇಂತಹ ನಿರ್ಧಾರದ ದೂರಗಾಮಿ ಘೋರ ಪರಿಣಾಮಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಚಿಂತಿಸಬೇಕು. ಸಂವಿಧಾನ ರಕ್ಷಣೆಯ ಹೊಣೆಗಾರಿಕೆಯಿಂದ ಅವರು ವರ್ತಿಸದೇ ಸಂಘ ಪರಿವಾರದ ಕಟ್ಟಾಳುವಿನಂತೆ ವರ್ತಿಸಿರುವುದು ಅತ್ಯಂತ ನಾಚಿಕೆಗೇಡಿನದ್ದಾಗಿದೆ.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದ ನಂತರದಲ್ಲಿ ಕೋಮು ದ್ವೇಷದ ಕೃತ್ಯಗಳನ್ನು ಎಸಗುವ ಶಕ್ತಿಗಳಿಗೆ ಕುಮಕ್ಕು ನೀಡುವ ಪರಿಪಾಠವನ್ನು ಯಾವ ಅಳುಕೂ ಇಲ್ಲದೇ ನಡೆಸಿಕೊಂಡು ಬರಲಾಗುತ್ತಿದೆ. ಕರಾವಳಿಯಲ್ಲಿ ಸಂಘ ಪರಿವಾರದ ಪುಂಡರು ಅಲ್ಪಸಂಖ್ಯಾತರ ಧಾರ್ಮಿಕ ಕೇಂದ್ರಗಳ ಮೇಲೆ ದಾಳಿ ಮಾಡಿದಾಗ 'ಕ್ರಿಯೆಗೆ ಪ್ರತಿಕ್ರಿಯೆ ಇದ್ದೇ ಇರುತ್ತದೆ' ಎಂದು ಗೃಹ ಸಚಿವರಾಗಿದ್ದ ಬೊಮ್ಮಾಯಿಯವರು ಸಮರ್ಥಿಸಿಕೊಂಡಿದ್ದರು. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಕೋಮು ದ್ವೇಷದ ಪರಿಣಾಮವಾಗಿ ಸಂಘ ಪರಿವಾರದ ಕಾರ್ಯಕರ್ತರು ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹತ್ಯೆಯಾದಾಗ ಸರ್ಕಾರದ ಬೊಕ್ಕಸದಿಂದ ಪರಿಹಾರ ಘೋಷಿಸಿದ ಮುಖ್ಯಮಂತ್ರಿಗಳು ಅಂತಹುದೇ ಪ್ರಕರಣದಲ್ಲಿ ಅಲ್ಪಸಂಖ್ಯಾತ ಯುವಕರು ಹತ್ಯೆಗೀಡಾದಾಗ ಯಾವುದೇ ಪರಿಹಾರವನ್ನು ನೀಡದಿರುವುದು, ಸಂತ್ರಸ್ತರ ಮನೆಗೆ ಭೇಟಿಯನ್ನೂ ಮಾಡಲಾಗದಿರುವ ತಾರತಮ್ಯದ ನಡತೆಯನ್ನು ನಾಡು ಕಂಡಿದೆ. ಸರಕಾರ ಎನ್ನುವುದು ಸಂಘ ಪರಿವಾರದ ದರ್ಬಾರು ಎನ್ನುವ ಪ್ರತಿಪಾದನೆಯನ್ನು ಮುಖ್ಯಮಂತ್ರಿ ಮತ್ತು ಸಚಿವರಾದಿಯಾಗಿ ಪದೇಪದೇ ಮಾಡುತ್ತಿದ್ದಾರೆ. ಮುಖ್ಯಮಂತ್ರಿಗಳು, ಸಚಿವರು ಕೆಲವು ಶಾಸಕರ ಇಂತಹ ನಡೆಗಳು ಕರ್ನಾಟಕ ಹಿಂದೆಂದೂ ಕಾಣದಂತಹ ವರ್ತನೆಗಳಾಗಿವೆ. ಇದು ತೆರಿಗೆದಾರರ, ಸಾಮಾನ್ಯ ಪ್ರಜೆಗಳ ಹಣ ಎನ್ನುವ ಲವಲೇಶ ಅಳುಕೂ ಸಹ ಇಲ್ಲದಿರುವುದು ನೈತಿಕ ಅದಃಪತನವೇ ಆಗಿದೆ.

ಇಂತಹ ವರ್ತನೆಗಳ ಮೂಲಕ ಅಧಿಕಾರದಲ್ಲಿರುವ ಬಿಜೆಪಿ ಸರಕಾರ ಹೊರಡಿಸುತ್ತಿರುವ ಸಂದೇಶ ಅತ್ಯಂತ ಅಪಾಯಕಾರಿಯಾಗಿದೆ. ರಾಜ್ಯದಲ್ಲಿನ ಶಾಂತಿ, ಸಾಮಾಜಿಕ ಸ್ವಾಸ್ಥ್ಯ, ಸೌಹಾರ್ದತೆಯನ್ನು ಹಾಳಾಗಡುವ ಶಕ್ತಿಗಳು ಆಟಾಟೋಪಗಳು ಮತ್ತಷ್ಟು ಹೆಚ್ಚಿದರೆ ಆಶ್ಚರ್ಯವಿಲ್ಲ. ಬೊಮ್ಮಾಯಿಯವರ ಸರ್ಕಾರ ಸಂವಿಧಾನಾತ್ಮಕ ಹೊಣೆಗಾರಿಕೆ ನಿರ್ವಹಿಸುವಲ್ಲಿ ಪ್ರತಿ ಹಂತದಲ್ಲೂ ವಿಫಲವಾಗುತ್ತಿದೆ. ವ್ಯಾಪಕ ಭ್ರಷ್ಟಾಚಾರ ಹಗರಣಗಳು, ಕಾರ್ಪೊರೇಟ್ ಕಂಪನಿಗಳ ನಿಷ್ಠ ಸೇವೆ ಮತ್ತು ವಿಭಜನಕಾರೀ ಕೋಮು ದ್ವೇಷದ ವಿಸ್ತರಣೆ ಇವುಗಳನ್ನೇ ತನ್ನ ಅಜೆಂಡವನ್ನಾಗಿ ಮಾಡಿಕೊಂಡಲ್ಲಿ ನಾಡಿಗೆ ಆಪತ್ತು ಎದುರಾಗಲಿದೆ. ಈಗಲಾದರೂ ಸರ್ಕಾರ ಕೋಮು ದ್ವೇಷದ ಪ್ರಕರಣಗಳನ್ನು ವಾಪಾಸು ಪಡೆಯುವ ನಿರ್ಧಾರದಿಂದ ಹಿಂದೆ ಸರಿಯಬೇಕು. ಸಂವಿಧಾನ ಮತ್ತು ಕಾನೂನನ್ನು ಗೌರವಿಸಿ ಪಾಲಿಸಬೇಕು. ಇಲ್ಲವಾದಲ್ಲಿ ಇಂತಹ ದುರ್ನಡತೆಗಳನ್ನು ಜನತೆ ಸಹಿಸುವುದಿಲ್ಲ ಸೂಕ್ತ ಸಮಯದಲ್ಲಿ ಉತ್ತರ ನೀಡುತ್ತಾರೆ ಎನ್ನುವ ಎಚ್ಚರ ಇರಲಿ.

ಜೋಡೋ ಪಾದಯಾತ್ರೆ: ಹಲವು ಪ್ರಶ್ನೆಗಳು

ಈ ವಾರ

ಎಸ್.ವೈ. ಗುರುಶಾಂತ್

ತಿರುವನಂತಪುರಂನಿಂದ ಕೊಲ್ಲಂಗೆ ಇರುವ ಅಂತರ 65ಕಿ.ಮೀ. ಕೇರಳದಲ್ಲಿನ ಭೌಗೋಳಿಕ ಅಂಶಗಳನ್ನು ಪರಿಗಣಿಸಿದರೆ ತಲುಪಲು ಒಂದೂವರೆ ಅಥವಾ ಎರಡು ಗಂಟೆ ಸಾಕು. ಆದರೆ ಸಮಯ ಹಿಡಿದಿದ್ದು ಐದೂವರೆ ಗಂಟೆ. ಕಾರಣ ಆ ರಸ್ತೆಯಲ್ಲಿ ರಾಹುಲಗಾಂಧಿಯವರ ಪಾದಯಾತ್ರೆ ನಡೆದಿತ್ತು. ರಸ್ತೆಯ ತುಂಬಾ ಹರಡಿಕೊಂಡಿದ್ದ ಜನ, ಪಾದಯಾತ್ರೆ ಕಾಂಗ್ರೆಸ್ ಪಕ್ಷದ ಸಂಘಟನಾ ವ್ಯವಸ್ಥೆಯ ಪ್ರತಿಫಲನವಾಗಿತ್ತು. 'ಭಾರತ್ ಜೋಡೋ' ಪಾದಯಾತ್ರೆಯ ಪ್ರಚಾರ, ಸ್ವಾಗತ ಕಮಾನುಗಳು ಹಾದಿಯುದ್ದಕ್ಕೂ ಜೋರಾಗಿಯೇ ಇದ್ದವು. ಎಲ್ಲಾ ವಯಸ್ಸಿನವರು, ವಿವಿಧ ದರ್ಮಗಳಿಗೆ ಸೇರಿದವರು ನಡೆದಿದ್ದರು, ಅವರಲ್ಲಿ ಉತ್ಸಾಹವೂ ಇತ್ತು. ಸಹಜವಾಗಿ ಈ ಯಾತ್ರೆ ಕೇರಳದಲ್ಲಿ ವರ್ತಮಾನದ ಘಟನೆಯಾಗಿ ಸುದ್ದಿಯ ಕೇಂದ್ರ ಸ್ಥಾನವನ್ನು ಪಡೆದಿತ್ತು. ಆದರೆ ಜಾತೀಯ, ಮತೀಯ ಶಕ್ತಿಗಳ ಅಟ್ಟಹಾಸವನ್ನು ಅಡಗಿಸಲು ಎಲ್ಲಾ ಶಕ್ತಿಗಳನ್ನು ಬೆಸೆಯುವ ಸ್ವರೂಪ ಪಡೆದದ್ದಾಗಲೀ, ಅದಕ್ಕೆ ಅಗತ್ಯವಾದ ಮನೋಭೂಮಿಕೆಯನ್ನು ನಿರ್ಮಿಸುವ ಮುತುವರ್ಜಿಯಾಗಲೀ ಅಲ್ಲಿ ಕಂಡು ಬರಲಿರಲಿಲ್ಲ. ಬದಲಾಗಿ ರಾಹುಲಗಾಂಧಿಯವರ ಪಾದಯಾತ್ರೆಯ ಮೂಲ ಉದ್ದೇಶವನ್ನೇ ಗಂಭೀರವಾಗಿ ಪ್ರಶ್ನಿಸಲಾಗಿತ್ತು. 'ನಿತ್ಯವೂ ವಿಭಜನಕಾರೀ ಧಾಳಿಗಳು, ಕೊಮುವಾದಿಗಳ ಅಟ್ಟಹಾಸ ಇರುವ ಉತ್ತರ ಪ್ರದೇಶದಲ್ಲಿ ಎರಡು ದಿನಗಳು, ಎಡ ಶಕ್ತಿಗಳ ನೇತೃತ್ವವಿರುವ ಕೇರಳದಲ್ಲಿ ಯಾಕೆ ಹದಿನೆಂಟು ದಿನಗಳು?'. ಇಂತಹದೊಂದು ಪ್ರಶ್ನೆ ಹುಟ್ಟಲು ಬೀಜ ಹಾಕಿದವರು ಕಾಂಗ್ರೆಸ್ಸಿನವರೇ. ಪಾದಯಾತ್ರೆಯ ಘನೋದ್ದೇಶವನ್ನು ಪಕ್ಕಕ್ಕೆ ಇಟ್ಟ ಕಾಂಗ್ರೆಸ್ಸಿಗರು ಕಮ್ಯೂನಿಸ್ಟ್ ಪಕ್ಷಗಳನ್ನು ಅದರಲ್ಲೂ ಸಿಪಿಐ(ಎಂ) ನ್ನು ಬಿಜೆಪಿಯ 'ಎ ಟೀಮ್' ಎನ್ನುವ ಮೂಲಕ ಗಾಜಿನ ಮನೆಯ ಒಳಗಿನಿಂದ ಕಲ್ಲು ತೂರಿ ತಮ್ಮ ಗುಪ್ತ ಅಜೆಂಡಾವನ್ನು ಅನಾವರಣಗೊಳಿಸಿದ್ದರು. ಇಂತಹ ಹಗುರ ಟೀಕೆ ಮಾಡುವುದರಲ್ಲಿ, ಕಡು ಕಮ್ಯೂನಿಸ್ಟ್ ವಿರೋಧ ಕ್ರೋಢೀಕರಿಸುವಲ್ಲಿ ರಾಹುಲಗಾಂಧಿ ಯವರೂ ಹಿಂದೆ ಬೀಳದಿರುವುದು ಕಾಂಗ್ರೆಸ್ ನಾಯಕರ ವರ್ತನೆಗಳಿಗೆ ಪೂರ್ವ ಭೂಮಿಕೆಯಾಗಿತ್ತು.



ಹೀಗಾಗಿ ಭಾರತವನ್ನು ಜೋಡಿಸುವ ರಾಹುಲರ ಸದುದ್ದೇಶವೂ ಆ ಪರಿಧಿಯಲ್ಲಿಯೇ ಅಲ್ಲಿ ಬಿಂಬಿತವಾದದುದು ಆಶ್ಚರ್ಯಕರವಲ್ಲ, ಅಂತೂ ಈ ಯಾತ್ರೆ ಕೇರಳದಲ್ಲಿ ರೋಮಾಂಚನವನ್ನೇನೂ ಹುಟ್ಟಿಸಿರಲಿಲ್ಲ. ರಾಜಕೀಯ ಜಾಗೃತಿ ಇರುವ ಕೇರಳದಲ್ಲಿ ಇಂತಹ ಪ್ರತಿಕ್ರಿಯೆ ಸಹಜವಾಗಿತ್ತು.

ಕೇರಳದ ಇತಿಹಾಸದಲ್ಲಿ ಪುರೋಗಮನದ ಶಕ್ತಿಗಳನ್ನು, ಶ್ರಮಜೀವಿಗಳನ್ನು ಕಮ್ಯೂನಿಸ್ಟ್ ಆಂದೋಲನ ನೆಲೆಯಾಗಿಸಿಕೊಂಡಿದ್ದರೆ, ಪಾಳೇಗಾರಿ, ಜಾತೀಯ, ಮತೀಯ ಪ್ರತಿಗಾಮಿ ಶಕ್ತಿಗಳ ನಾಯಕತ್ವವನ್ನೇ ಕಾಂಗ್ರೆಸ್ ಪಕ್ಷ ಆಧರಿಸಿಕೊಂಡೇ ಬಂದಿದೆ. ಈ ವರ್ಗ ಸಂಘರ್ಷದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ– ಸಂಘಪರಿವಾರದ ಜೊತೆ ಪ್ರತಿ ಚುನಾವಣೆಗಳಲ್ಲಿ ಎಡ ಪಕ್ಷಗಳ ವಿರುದ್ಧ ಒಳ ಮೈತ್ರಿಯಲ್ಲಿ ಸಾಕಾರಗೊಳ್ಳತ್ತಲೇ ಇರುತ್ತದೆ.

ಕೇರಳದಲ್ಲಿ ರಾಜಕೀಯ ಹೋರಾಟ ಅನ್ನುವುದು ಅಷ್ಟು ಸುಲಭವಲ್ಲ, ತಮ್ಮ ಪಕ್ಷದ ಆಚೆಗೆ ಬಹುತೇಕ ಯಾರೂ ನ್ಯೂಟ್ರಲ್ ಇರುವುದೂ ಇಲ್ಲ. ಇನ್ನೊಂದು ರಾಜಕೀಯ ಒಲವಿನವರನ್ನು ತಮ್ಮತ್ತ ಸೆಳೆಯುವುದೂ ಅಷ್ಟು ಸಲೀಸೂ ಅಲ್ಲ.

ಸೆಳೆಯ ಬೇಕಾದರೆ ಜನರ ವಿಶ್ವಾಸಾರ್ಹತೆ ಗಳಿಸಬೇಕಾದರೆ ಯಾವುದೇ ಪಕ್ಷವೂ ಏದುಸಿರು ಬಿಡಬೇಕಾಗುತ್ತದೆ. ರಾಜಕೀಯ ಜಿದ್ದಾ ಜಿದ್ದಿ ಹೋರಾಟ ಕೂದಲೆಯ ಅಂತರದಲ್ಲಿಯೂ ನಡೆಯುತ್ತದೆ.

ಮತೀಯ ವಿಷ ವರ್ತುಲಗಳ ವಿಭಜನೆಯಿಂದ ಜನತೆಯನ್ನು ಹೊರ ತಂದು ಒಂದುಗೂಡಿಸುವ ಕೆಲಸ ಅತೀ ತುರ್ತಿನದು. ಇಂತಹ ಒಂದುಗೂಡಿಕೆಗೆ ಕಾರಣವಾಗಬಲ್ಲ ವಿಷಯಗಳ ಆಯ್ಕೆ ಮತ್ತು ಕೂಡಿಕೆಯೂ ಮುಖ್ಯ. ಕೇರಳವನ್ನೂ ಒಳಗೊಂಡು ಜಾತಿ ಮತ್ತು ಮತೀಯ ರಾಜಕಾರಣದ ನಂಜು ಕಳೆಯುವ ಪ್ರಯತ್ನ ಬಹು ಮುಖ್ಯ.

ಹಿ ಂ ದ ' ು ತ ' ್ವ ದ '

ಪುಟ 4 ಕ್ಕೆ

ವಿಚಾರವಾದಿ ಐ.ಎ. ಪ್ರಸನ್ನ ನಿಧನ ವೈದ್ಯಕೀಯ ಸಂಶೋಧನೆಗೆ ದೇಹದಾನ

ವಿಚಾರವಾದಿ ಮತ್ತು ಸಾಂಸ್ಕೃತಿಕ ಚಿಂತಕರಾದ ಐ.ಎ.ಪ್ರಸನ್ನ ಅವರು ಸಪ್ಟೆಂಬರ್ 21 ರಂದು ಅಲ್ಪಕಾಲದ ಅಸೌಖ್ಯದಿಂದ ಮಂಗಳೂರಿನಲ್ಲಿ ನಿಧನ ಹೊಂದಿದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿದ್ದ ವಿರಾಜಪೇಟೆಯ ಡಾ।ಐ.ಎ.ಅಸ್ರಣ್ಣನವರ ಪುತ್ರರಾದ ಐ.ಎ.ಪ್ರಸನ್ನ ಅವರು ಎಳೆ ವಯಸ್ಸಿನಲ್ಲಿ ಕೌಟುಂಬಿಕ ಪ್ರಭಾವದಿಂದ ಮಾರ್ಕ್ಸ್‌ವಾದಿ ಹಾಗೂ ವಿಚಾರವಾದಿ ಚಳುವಳಿಯತ್ತ ಆಕರ್ಷಿತರಾದರು. ಹಾಸನದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಪಡೆದಿದ್ದರು. ಪ್ರಸನ್ನ ರವರು ಮೂಲತಃ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನವರು. ಅವರ ತಂದೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಕಾರ್ಮಿಕ ಮುಂದಾಳು ಆಗಿದ್ದ ಡಾ. ಐ.ಆರ್.ಅಸ್ರಣ್ಣ ಅವರು. ತಾಯಿ ಲೀಲಾವತಿಯವರು. ಸಾಮಾಜಿಕವಾಗಿ ವಿಶೇಷವಾಗಿ ಮಹಿಳೆಯರ ನಡುವೆ (ಮಹಿಳಾ ಸಮಾಜದ ಅದ್ಯಕ್ಷರಾಗಿ) ತೊಡಗಿಸಿಕೊಂಡವರು. ಡಾ. ಐ. ಆರ್. ದುರ್ಗಾಪ್ರಸಾದ್ ಅವರ ಹಿರಿಯ ಅಣ್ಣ. ಹಾಗೆ ಹಿರಿಯ ವಕೀಲರಾದ ಐ.ಆರ್. ಪ್ರಮೋದ್ ಮತ್ತು ಐ.ಆರ್.ಪ್ರದೀಪ್ ರವರು ಸಹೋದರರು.

ಪ್ರಸನ್ನರವರ ನಿಧನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ CPIM, CITU, DYFI, SFI, JMS ಸಂಘಟನೆಗಳೂ ಕೂಡ ತೀವ್ರ ಸಂತಾಪವನ್ನು ವ್ಯಕ್ತಪಡಿಸಿವೆ. ವಿದ್ಯಾರ್ಥಿ ಚಳುವಳಿ, ಸಮುದಾಯ ಹಾಗೂ ಬಂಡಾಯ ಚಳುವಳಿಗೆ ಅವರು ಉದ್ಯೋಗದಲ್ಲಿದ್ದ ಊರಲ್ಲಿ ಪ್ರೋತ್ಸಾಹ ನೀಡಿದರು.


ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮದಲ್ಲಿ ಹಿರಿಯ ಎಂಜಿನಿಯರ್ ಆಗಿ ವೃತ್ತಿ ಜೀವನ ನಡೆಸಿದ್ದ ಅವರು ದಕ್ಷತೆಗೂ ಪ್ರಾಮಾಣಿಕತೆಗೂ ಹೆಸರಾಗಿದ್ದರು. ಇದಕ್ಕಾಗಿ ಭ್ರಷ್ಟರ ಕಿರುಕುಳಕ್ಕೆ ಗುರಿಯಾಗಿ ಆಗೀಗ ವರ್ಗಾವಣೆಗೂ ಒಳಗಾಗಿದ್ದರು. ಹೆಚ್ಚಿನ ಸೇವೆಯನ್ನು ಮಂಗಳೂರು ವಲಯದಲ್ಲೇ ಮಾಡಿದರು.

ಮಂಗಳೂರಿನಲ್ಲಿ ಪ್ರೊ.ನರೇಂದ್ರ ನಾಯಕರೊಂದಿಗೆ ವಿಚಾರವಾದೀ ಚಳುವಳಿಯಲ್ಲಿ ಕಾರ್ಯಕರ್ತನಾಗಿಯೂ ದುಡಿದರು. ಸಿಪಿಐ(ಎಂ), ಸಮುದಾಯ, ಬಂಡಾಯ ಸಾಹಿತ್ಯ ಚಳುವಳಿಗೆ ಕೊಡುಗೈ ದೇಣಿಗೆ ನೀಡಿದರು.

ನಿವೃತ್ತಿಯ ಅನಂತರ ಮಂಗಳೂರಿನಲ್ಲಿ ಸಿಪಿಐ(ಎಂ) ಹಾಗೂ ಎಡ ಸಂಯುಕ್ತ ಚಳುವಳಿಗಳ ಬಹಿರಂಗ ಪ್ರದರ್ಶನಗಳಲ್ಲಿ ಅವರು ಭಾಗವಹಿಸದ ಕಾರ್ಯಕ್ರಮಗಳೇ ಇರಲಿಲ್ಲ. ಕಳೆದ 5 ವರ್ಷಗಳಿಂದ ಅವರು ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಅವರ ಅಂತ್ಯಕ್ರಿಯೆಯು ಕೂಡಾ ಅವರು ಒಪ್ಪಿಕೊಂಡ ವಿಚಾರವಾದೀ ತತ್ವಗಳಿಗನುಗುಣವಾಗಿ ಯಾವ ಧಾರ್ಮಿಕ ವಿಧಿಗಳಿಲ್ಲದೆ ನಡೆಯಿತು. ಅವರ ದೇಹವನ್ನು ಆಸ್ಪತ್ರೆಗೆ ದಾನ ನೀಡಲಾಯಿತು.

ಅವರ ಅಂತ್ಯ ವಿದಾಯದ ಶ್ರದ್ಧಾಂಜಲಿ ಸಭೆಯಲ್ಲಿ ಪ್ರೊ.ನರೇಂದ್ರ ನಾಯಕ್, ವಾಸುದೇವ ಉಚ್ಚಿಲ್, ಡಾ.ಕೃಷ್ಣಪ್ಪ ಕೊಂಚಾಡಿ, ವಸಂತ ಆಚಾರಿ ಮತ್ತು ಅವರ ಸೋದರ ಡಾ।ದುರ್ಗಾಪ್ರಸಾದ್ ನುಡಿನಮನ ಸಲ್ಲಿಸಿದರು. ಯಶವಂತ ಮರೋಳಿ, ಶಾಮಸುಂದರ್ ರಾವ್, ಸಿಪಿಐ(ಎಂ) ಮುಖಂಡರಾದ ಯಾದವ ಶೆಟ್ಟಿ, ಜೆ.ಬಾಲಕೃಷ್ಣ ಶೆಟ್ಟಿ, ಮುನೀರ್ ಕಾಟಿಪಳ್ಳ, ಸೋದರ ಐ.ಎ.ಪ್ರಮೋದ್, ಡಾ. ಸುಭಾಷಿಣಿ ಪ್ರಸಾಸ್, ಮುಂತಾದವರು ಉಪಸ್ಥಿತರಿದ್ದು ವಿದಾಯ ಸಲ್ಲಿಸಿದರು.



ವರದಿ:ವಾ.ಉ.

ಭೂಸ್ವಾಧೀನ ವಿರೋಧಿಸಿ ವಿಧಾನಸೌಧದೆದುರು ರೈತರ ಹೋರಾಟ

ತಮ್ಮ ಕೃಷಿಯ ಜಮೀನನ್ನೂ ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸಿ ದೇವನಹಳ್ಳಿ ತಾಲೂಕಿನ ರೈತರು ತಮ್ಮ ಹೋರಾಟವನ್ನು ವಿಧಾನಸಭಾ ಅಧಿವೇಶನ ಆರಂಭಗೊಂಡ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಸ್ಥಳಾಂತರಿದ್ದಾರೆ ತಮ್ಮ ಬೇಡಿಕೆಗಾಗಿ ಸೆಪ್ಟೆಂಬರ್ 13, 2022ರಿಂದ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ದೇವನಹಳ್ಳಿ ತಾಲ್ಲೂಕು & ದೊಡ್ಡಬಳ್ಳಾಪುರ ತಾಲ್ಲೂಕಿನ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯು, ರೈತರು ಅನಿರ್ದಿಷ್ಟಾವಧಿ ಧರಣಿಯನ್ನು ಪ್ರಾರಂಭಿಸಿದ್ದಾರೆ. ನಾಡಿನ ಖ್ಯಾತ ಸಾಹಿತಿಗಳು ಹಿರಿಯ ಚಿಂತಕರಾದ ಡಾ॥ ಕೆ.ಮರುಳಸಿದ್ಧಪ್ಪರವರು ಧರಣಿಯನ್ನು ಉದ್ಘಾಟಿಸಿ ಮಾತನಾಡುತ್ತಾ ರೈತರ ಕೃಷಿ ಯೋಗ್ಯ ಭೂಮಿಯನ್ನು ಕಸಿದು ಕೊಳ್ಳುವವರು ಧರಣಿಯನ್ನು ಉದ್ಘಾಟಿಸಿ ಮಾತನಾಡುತ್ತಾ "ರೈತರ ಕೃಷಿ ಭೂಮಿಯನ್ನು ಕಸಿದುಕೊಳ್ಳುವವರು ನಿಜವಾದ ದೇಶದ್ರೋಹಿಗಳು" ಎಂದು ಹೇಳಿದರು. ರೈತರ ಬದುಕಿನ ಆಧಾರವಾಗಿರುವ ಭೂಮಿಯನ್ನು ಏಕಾಏಕಿ ಕೆಐಎಡಿಬಿ ಯವರು ರೈತರ ಒಪ್ಪಿಗೆ ಇಲ್ಲದೆ ಕಬಳಿಸಲು ಹೊರಟಿರುವುದನ್ನು ಖಂಡಿಸಿರರು.

ದೀರ್ಘಕಾಲದ ಹಲವು ಹಂತದ ಹೋರಾಟಗಳಿಂದ ಸರ್ಕಾರ ಮಣಿಯದಿರುವಾಗ, ವಿಧಾನಸಭಾ ಅಧಿವೇಶನ ನಡೆಯುವ ಸಂಧರ್ಭದಲ್ಲಿ ಸರ್ಕಾರದ ಗಮನ ಸೆಳೆಯಲು ಕಳೆದ 163 ದಿನಗಳಿಂದ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದ ಉಪ ತಹಸಿಲ್ದಾರ್ ಕಚೇರಿ ಮುಂದೆ ನಡೆಯುತ್ತಿದ್ದ ಈ ಅನಿರ್ಧಿಷ್ಟ ಕಾಲದ ಧರಣಿಯನ್ನು ಫ್ರೀಡಂಪಾರ್ಕ್‌ಗೆ ವರ್ಗಾಯಿಸಿ ವಿರೋಧ ಪಕ್ಷದ ಮುಖಂಡರು ಹಾಗೂ ಮಾಜಿಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರನ್ನು & ಮತ್ತೊಬ್ಬ ಮುಖಂಡರಾದ ಶ್ರೀ ಕುಮಾರಸ್ವಾಮಿಯವರನ್ನು ಭೇಟಿ ಮಾಡಿ ಹೋರಾಟ ಸಮಿತಿಯಿಂದ ಮನವಿ ಅರ್ಪಿಸಿ, ರಾಜ್ಯ ಸರ್ಕಾರದ ಮೇಲೆ ಈ ಭೂ ಸ್ವಾಧೀನ ಪ್ರಕ್ರಿಯೆನ್ನು ಕೈ ಬಿಡಲು ಒತ್ತಡ ಹಾಕಲು ಕೋರಲಾಗಿದೆ.

ಆದರೆ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಶ್ರೀ ಬಯ್ಯರೆಡ್ಡಿಯವರು ವಿರೋಧ ಪಕ್ಷಗಳ ದೋರಣೆ ಎಂದು ಕಟುವಾಗಿ ವಿಮರ್ಶಿಸಿದ್ದಾರೆ.

ಅತ್ಯಂತ ಕೃಷಿಯೋಗ್ಯ ಭೂಮಿಯನ್ನು ಉಳಿಸಿಕೊಳ್ಳಲು ಈ ಭಾಗದ ರೈತರು ಕಳೆದ ಆರು ತಿಂಗಳಿನಿಂದ ಹಲವು ಹಂತಗಳ ಹೋರಾಟಗಳನ್ನು ನಡೆಸಿದ್ದಾರೆ. ಕರ್ನಾಟಕ ರಾಜ್ಯದ ರೈತ ಚಳುವಳಿಯ ಇತಿಹಾಸದಲ್ಲಿಯೇ ಭೂ ಸ್ವಾದೀನ ವಿರೋಧಿಸಿ ಇಷ್ಟು ದೀರ್ಘಕಾಲದ ಹೋರಾಟ ನಡೆದ ಇನ್ನೊಂದು ಉದಾಹರಣೆಯನ್ನು ನಾವು ಕಾರಣಲಾರೆವು.

ಈ ಐತಿಹಾಸಿಕ ಹೋರಾಟದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಸೇರಿದಂತೆ, ಇತರ ಹಲವು ರೈತ ಸಂಘಟನೆಗಳು, ದಲಿತ ಸಂಘಟನೆಗಳು ಹಾಗೂ ಕನ್ನಡಪರ ಸಂಘಟನೆಗಳ ಬೆಂಬಲ ನೀಡುತ್ತಿವೆ. ಸಂಪೂರ್ಣವಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈ ಬಿಡದೆ, ಭೂಮಿ ನೀಡಲು ಸಿದ್ಧರಿರುವ ರೈತರಿಂದ ಮಾತ್ರ ಭೂಮಿ ಸ್ವಾಧೀನ ಪಡಿಸಿಕೊಳ್ಳುತ್ತೇವೆ. ಎಂದು ಹೇಳಿ ರೈತರ ಒಗ್ಗಟ್ಟನ್ನು ಒಡೆಯಲು ವಿವಿಧ ರೀತಿಯ ಪುಟ 7 ಕ್ಕೆ

ಪಾದಯಾತ್ರೆ: ಹಲವು ಆಯಾಮದ ಪ್ರಶ್ನೆಗಳು

ಪುಟ 3 ರಿಂದ

ಕೋಮುವಾದಿಗಳನ್ನು, ಮುಸ್ಲಿಂ ಮೂಲಭೂತವಾದಿಗಳ ತೆಕ್ಕೆಯಿಂದ ಜನರನ್ನು ಅಂದರೆ ಭಾರತದ ವಿಭಜನೆಗೆ ಅವರದ್ದೇ ವಿಭಿನ್ನ ಸ್ವರೂಪದಲ್ಲಿ ಯುದ್ಧ ಸಾರಿರುವ ಶಕ್ತಿಗಳನ್ನು ಎದುರಿಸುವುದೂ ಅಗತ್ಯ. ಆದರೆ ರಾಹುಲಗಾಂಧಿಯವರ ಪಾದಯಾತ್ರೆ ಅಂತಹ ಭಾವನೆಯನ್ನು ಸೃಷ್ಟಿಸುವಲ್ಲಿ ವಿಫಲವಾದಂತೆ ಕಂಡಿತು. ಕೋಮುವಾದ, ಮತೀಯವಾದದ ವಿರುದ್ಧ ದೇಶ ಉಳಿಸುವ ವಿಶಾಲ ನೆಲೆಯ ಹೋರಾಟ ಬೆಸೆಯುವ ಮುತುವರ್ಜಿಗಿಂತ ಮತ ಕ್ರೋಢೀಕರಣದ, ಎಡ ಶಕ್ತಿಗಳನ್ನು ಹಣಿಯುವ ರಾಜಕೀಯ ಲೆಕ್ಕಾಚಾರವೇ ಮುನ್ನೆಲೆಯಲ್ಲಿತ್ತು. ಪ್ರತಿ ಚುನಾವಣೆಯಲ್ಲೂ ಎಡ ಪಕ್ಷಗಳ ವಿರುದ್ಧ ಬಿಜೆಪಿ ಸಂಘಪರಿವಾರದೊಂದಿಗೆ ಒಳ ಒಪ್ಪಂದ ಮಾಡಿಕೊಳ್ಳುವ ಕಾಂಗ್ರೆಸ್ ಕೋಮುವಾದದ ವಿರುದ್ದ ಭಾರತದ ಐಕ್ಯತೆಗೆ ಪ್ರಾಣ ಪಣವಿಟ್ಟು ಹೋರಾಡುವ ಎಡಶಕ್ತಿಗಳ ವಿರುದ್ಧ ಜನರನ್ನು ಎತ್ತಿ ಕಟ್ಟುವುದನ್ನೆ ಪ್ರಮುಖ ಗುರಿಯಾಗಿಸಿತ್ತು ಅನಿಸುತ್ತದೆ.

ಈ ಕಾರಣದಿಂದಲೇ ಎಡ ಶಕ್ತಿಗಳ ಮೇಲೆ ಕಾಂಗ್ರೆಸ್ ಎರಗುತ್ತದೆ. ಕಾರ್ಪೊರೇಟ್ ಲೂಟಿಕೋರರು ತನ್ನ ಪರವಾದ ಎರಡು ಪ್ರಮುಖ ಪಕ್ಷಗಳು ಇರಬೇಕೆಂದು ಬಯಸುತ್ತವೆ. ಬಿಜೆಪಿ ಹಾಗೂ ಕೋಮುವಾದಿ ಶಕ್ತಿಗಳು ಕೋಮು ಧೃವೀಕರಣ ಮತ್ತು ವಿಭಜನೆ ತರುವ ಉದ್ದೇಶವಾದರೂ ಏನು? ಕಾರ್ಪೊರೇಟ್ ಲೂಟಿ ಮುಂದುವರೆಸುವುದೇ ಆಗಿದೆ. ಕಾರ್ಪೊರೇಟ್ ಲೂಟಿಗೆ ನೆರವು ನೀಡುವ ವಿಚಾರದಲ್ಲಿ ಬಿಜೆಪಿಗಿಂತ ಕಾಂಗ್ರೆಸ್ ಗೆ ಭಾರಿ ಭಿನ್ನ ವಾದ ವಿಚಾರಗಳೇನು ಇಲ್ಲವಾಗಿದೆ. ಹೀಗಾಗಿ ಜನರ ಸಂರಕ್ಷಣೆಯ ಆರ್ಥಿಕ ಅಜೆಂಡಾಗಳು ಇಲ್ಲವಾಗಿದೆ. ಲೂಟಿಕೋರರಿಂದ ಜನತೆಯನ್ನು ರಕ್ಷಿಸುವ ಉದ್ದೇಶ ಕಾಂಗ್ರೆಸ್ ಗೆ ಇದೆಯೇ?! ಆದ್ದರಿಂದ ಜನರ ರಕ್ಷಕರ ವಿರುದ್ದ ನಿಲ್ಲುತ್ತದೆ.

ಕೋಮುವಾದದ ವಿರುದ್ಧ ನಡೆಯುವ ಜಾಗೃತಿ ಮತ್ತು ಹೋರಾಟಮೂಲಭೂತವಾದಿಗಳಲ್ಲದ ಯಾವುದೇ ಮೂಲೆಯಿಂದ ನಡೆದರೂ ಅದು ಸ್ವಾಗತಾರ್ಹ. ಅಂತಹ ಹೋರಾಟ ನೈಜತೆಯನ್ನು ಪಡೆದಿರಬೇಕು. ಆದರೆ ಬಿಜೆಪಿ ಇಷ್ಟು ಪ್ರಮಾಣದಲ್ಲಿ ಬೆಳೆಯಲು ಕಾಂಗ್ರೆಸ್ ನ ವೈಫಲ್ಯಗಳು, ಅದರ ರಾಜಿ ರಾಜಕಾರಣದ ಕೊಡುಗೆ ಅಪಾರ ಮತ್ತು ಅಪಾಯದ ಮಟ್ಟವನ್ನು ಮೀರಿದ್ದು ಎನ್ನುವುದಕ್ಕೆ ಹಲವು ಜೀವಂತ ನಿದರ್ಶನಗಳಿವೆ. ಬಿಜೆಪಿಯ ಭೂತವನ್ನು ತೋರಿಸುತ್ತಾ ರಾಜಕೀಯ ಲಾಭ ಮಾಡಿಕೊಳ್ಳಲು ಕಾಂಗ್ರೆಸ್ ಬಯಸುತ್ತದೆ. ಅಧಿಕಾರಕ್ಕೆ ಬಂದಾಗ ಅವೆಲ್ಲವನ್ನೂ ಮರೆಯುತ್ತದೆ. ಅದರ ಶಾಸಕರು, ಮಂತ್ರಿಗಳು ಸಂದರ್ಭಸಾಧಕ ರಾಜಕಾರಣಕ್ಕೆ ಅತಿ ಸುಲಭವಾಗಿ ಸೆಕ್ಯುಲರ್ ನಿಷ್ಠೆಯನ್ನು ಕಮ್ಯುನಲ್ ನಿಷ್ಠೆಯಾಗಿ ಬದಲಾಯಿಸಿಕೊಳ್ಳುತ್ತಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ರಾಜಕಾರಣದ ನಡುವಿನ ಅಂತರ ಅಷ್ಟು ತೆಳುವಾಗಿದೆ ಎನ್ನುವುದಕ್ಕೆ ಈ ಮಾತು ಹೇಳುತ್ತಿರುವೆ. ಈ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಸ್ವವಿಮರ್ಶೆ ಹಾಗೂ ಅದರ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿ, ನಡೆಗಳಲ್ಲಿ ಬದಲಾವಣೆ ಮಾಡಿಕೊಳ್ಳಲು ಸಿದ್ದವಿದೆಯೇ? ಕೇವಲ ರಾಜಕೀಯ ಅಧಿಕಾರ ಹಿಡಿಯುವುದೇ ಅಂತಿಮ ಗುರಿಯಾದರೆ ಅಷ್ಟು ಫಲಕಾರಿಯಲ್ಲ. ಕೇವಲ ಬಿಜೆಪಿಯ ದುರಾಡಳಿತಕ್ಕೆ ರೋಸಿ ಹೋದ ಜನರ ಮತ ಬೆಂಬಲದ ಉದ್ದೇಶವೇ ಪ್ರಧಾನವಾದರೆ ಅಧಿಕಾರ ಪಡೆದರೂ ಬಿಜೆಪಿ ಸಂಘಪರಿವಾರದ ಫ್ಯಾಸಿಸ್ಟ್ ಆಕ್ರಮಣ, ರಾಜಕೀಯ ತಂತ್ರಗಾರಿಕೆ, ಸಂಘಟನಾ ಸಾಮರ್ಥ್ಯದ ಎದುರು ಪತನವಾಗದೇ ಉಳಿದೀತೇ ಎನ್ನುವ ಪ್ರಶ್ನೆ ಇದ್ದೇ ಇದೆ. (ಕಾಂಗ್ರೆಸ್ ಶಾಸಕರು ತಂಡ, ತಂಡವಾಗಿ ಬಿಜೆಪಿ ಸೇರುತ್ತಾರಲ್ಲ!?). ಪಾದಯಾತ್ರೆಯುದ್ದಕ್ಕೂ ರಾಹುಲಗಾಂಧಿ ಇವನ್ನೆಲ್ಲಾ ಗ್ರಹಿಸಬೇಕು. ಕೇವಲ ಎಡ ಬಲದಲ್ಲಿ ಠಳಾಯಿಸುವ ನಾಯಕರ ನಡುವೆ ಕಳೆದು ಹೋಗುವುದರಿಂದ ಹೊಸತನ್ನು ಕಲಿತಂತೆ ಆಗುವುದಿಲ್ಲ. ಅಷ್ಟಕ್ಕೂ ಜನರೊಂದಿಗೆ ಬೆರೆತು ಅರಿಯುವ ಅವಕಾಶಗಳಾದರೂ ಇಲ್ಲಿ ಎಷ್ಟಿವೆ?

ಇದೇ ಹೊತ್ತಿನಲ್ಲಿ ವಂಶಾಡಳಿತದ ಆರೋಪಕ್ಕೆ ಗುರಿಯಾಗಿರುವ ರಾಹುಲಗಾಂಧಿ ಭಾರತವನ್ನು ಅರಿಯುವ, ಜನರ ನಡುವೆ ಬೆರೆಯುವ ಇಚ್ಛೆ ವ್ಯಕ್ತ ಪಡಿಸುವುದೂ ಸ್ವಾಗತಾರ್ಹ. ಆದರೆ ಬದಲಾದ ರಾಹುಲಗಾಂಧಿಯನ್ನು ಒಪ್ಪಿಕೊಳ್ಳುವ ಸ್ಥಿತಿ ಕಾಂಗ್ರೆಸ್ ನಲ್ಲಿದೆಯೇ ಎನ್ನುವುದು ಬಹು ದೊಡ್ಡ ಪ್ರಶ್ನೆ.

ರಾಹುಲರ ಪಾದಯಾತ್ರೆ ಕೇರಳದಿಂದ ಗುಂಡ್ಲುಪೇಟೆ ಮೂಲಕ ಕರ್ನಾಟಕವನ್ನು ಪ್ರವೇಶಿಸಿ ಇಪ್ಪತ್ತೊಂದು ದಿನಗಳು ನಡೆಯಲಿದೆ. ಅದರ ಸ್ವಾಗತಕ್ಕೆ ಸಿದ್ಧತೆ ಆರಂಭಗೊಂಡಿವೆ. ರಾಜ್ಯದಲ್ಲಿ ಬುದ್ದಿಜೀವಿಗಳ, ಸಂಘ ಸಂಸ್ಥೆಗಳ ಹಾಗೂ ಪ್ರಮುಖ ವ್ಯಕ್ತಿಗಳ ಬೆಂಬಲ ಕ್ರೋಢಿಕರಿಸುವ ಪ್ರಯತ್ನಗಳೂ ನಡೆದಿವೆ. ಇದೇ ಸೆಪ್ಟಂಬರ್ 20 ರಂದಿನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಏನನ್ನು ನಿರಿಕ್ಷಿಸುತ್ತಿದ್ದೇವೆ ಎನ್ನುವುದನ್ನು ಹಲವು ಪ್ರಮುಖರು ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್‌ನೊಂದಿಗೆ ರಾಜಕೀಯ ಮೈತ್ರಿಯ ಮಾತುಗಳೂ ಬಂದಿವೆ. ಫ್ಯಾಸಿಸ್ಟ್ ಸ್ವರೂಪದ ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸುವ ಶಕ್ತಿಗಳ ಒಗ್ಗೂಡುವಿಕೆಗೂ, ಕಾಂಗ್ರೆಸ್ ನೊಂದಿಗೆ ಕಮ್ಯೂನಿಸ್ಟರು ರಾಜಕೀಯ ಮೈತ್ರಿ ಮಾಡಿಕೊಳ್ಳುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ವರ್ಗ ಪ್ರಶ್ನೆಗಳ ಆಧಾರದಲ್ಲಿ ನಡೆಯುವ ಜನಾಂದೋಲನ, ಅಲ್ಲಿ ಮೂಡಿ ಬರುವ ವರ್ಗ ಐಕ್ಯತೆ ಮೈತ್ರಿಯನ್ನು ತರಬಲ್ಲದು. ಚುನಾವಣಾ ಸಂದರ್ಭದ ಇಂತಹ ಮೈತ್ರಿ ಮುತುವರ್ಜಿಗಳನ್ನು ಕಾಂಗ್ರೆಸ್ ಎಂದೂ ಪರಿಗಣಿಸಿಯೇ ಇಲ್ಲ. ಈಗಲೂ ಕೂಡ. ಮೇಲಾಗಿ ಕರ್ನಾಟಕದಲ್ಲಿ ಬಿಜೆಪಿಯನ್ನು ಎದುರಿಸುವುದು ಕೇವಲ ಕಾಂಗ್ರೆಸ್ ಮಾತ್ರ ಅಲ್ಲ. ಹಲವಾರು ಮಿತಿ, ಚಂಚಲತೆಗಳ ನಡುವೆಯೂ ಜೆ.ಡಿ.ಎಸ್. ಪಕ್ಷದಂತಹ ಶಕ್ತಿಗಳೂ ಇವೆ. ಕರ್ನಾಟಕದಲ್ಲಿ ಅತೀ ಸೀಮಿತವಾದರೂ ಹೊಸ ಶಕ್ತಿಗಳ ಬೆಳವಣಿಗೆಗಳೂ ಕಾಣಿಸಿಕೊಳ್ಳುತ್ತಿವೆ. ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ವಿರೋಧಿಸುವ ಮೂರನೆಯ ಶಕ್ತಿಗಳಿಗೂ ನೆಲೆ ಇರುವ ವಾಸ್ತವವನ್ನು ನಿರಾಕರಿಸಲಾಗದು.

ಹೀಗಾಗಿ ವಿಶಾಲ ನೆಲೆಯಲ್ಲಿ ಬಿಜೆಪಿಯನ್ನು ಸೋಲಿಸುವ ಸಾಧ್ಯತೆಗಳನ್ನು ಕೈ ಬಿಟ್ಟು ಮೈತ್ರಿಯ ಸ್ವಬಂಧಿಗಳಾಗುವುದು ಅಗತ್ಯವೇ? ಇಂದು ಕೋಮುವಾದಕ್ಕೆ ವಿಶಾಲ ನೆಲೆಯ ಪ್ರತಿರೋಧ ಬೆಳೆಸುವುದು ಆದ್ಯತೆ ಆಗಬೇಕು.

ಕೊನೆ ಮಾತು.

'ಭಾರತ್ ಜೋಡೋ' ಕಾರ್ಯಕ್ರಮದ ಸಿದ್ಧತೆಯಲ್ಲಿರುವ ಕಾಂಗ್ರೆಸ್ ಪಕ್ಷದೊಳಗೆ ಗುಂಪುಗಳ ಕದನ, ಮುನಿಸು ಕಾಣಿಸಿಕೊಂಡ ವರದಿಗಳಿವೆ. ಈ ಕಾರ್ಯಕ್ರಮದ ಬಳಿಕವಾದರೂ ಕಾಂಗ್ರೆಸ್ ಜೋಡೋ ಆದೀತೇ?!



ಬೆಂಗಳೂರು ಪ್ರವಾಹಕ್ಕೆ ಶಕ್ತಿಸೌಧ ಹೊಕ್ಕವರೇ ಹೊಣೆ

ಲಿಂಗರಾಜು

ಈ ಸಲ ಸುರಿದ ಬಾರಿ ಮಳೆ ಇಡೀ ಬೆಂಗಳೂರನ್ನು ಪ್ರವಾಹಕ್ಕೆ ಸಿಲುಕಿಸಿತ್ತು. ಅದರಲ್ಲೂ ಬೆಂಗಳೂರಿನ ಪೂರ್ವ ಭಾಗ ಸಂಪೂರ್ಣವಾಗಿ ಮಳುಗಡೆ ಆಗಿತ್ತು. ಮನೆಗಳಿಗೆ ನೀರು ನುಗ್ಗಿ ಆಸ್ತಿಪಾಸ್ತಿ ನಷ್ಟ, ಅನ್ನ, ನೀರಿಗೂ ಪರದಾಟ, ಮನೆಗಳ ಬಿರುಕು – ಕುಸಿತ. ಕೆಲವಡೆ ಇಡೀ ಪ್ರದೇಶ ನೀರಿನಿಂದ ದ್ವೀಪದಂತಾಗಿತ್ತು. 13 ಕೋಟಿ ರೂಪಾಯಿ ಬೆಲೆಬಾಳುವ ಐಷಾರಾಮಿ ವಿಲ್ಲಾಗಳೂ ಪ್ರವಾಹಕ್ಕೆ ತುತ್ತಾದವು! ಮನೆಗಳ ನೀರಿನ ಸಂಪುಗಳಿಗೆ ಕೊಳಚೆ ನೀರು ನುಗ್ಗಿದ್ದರಿಂದ ರೋಗರುಜಿನಗಳು ಹರಡಿದವು. ಮನೆ, ಅಪಾರ್ಟ್‌ಮೆಂಟ್ ಸಮುಚ್ಚಯದೊಳಗೆ ನುಗ್ಗಿದ ನೀರನ್ನು ಹೊರಹಾಕಲು ನಿವಾಸಿಗಳ ಪಟ್ಟ ಪರಿಪಾಟಲು ಹೇಳತೀರದು. ಕಾವೇರಿ ನೀರು ನಿಂತು ಕುಡಿಯುವ ನೀರಿಗೂ ತತ್ವಾರ ಎದುರಾಗಿತ್ತು.

ಹಲವರಿಗೆ ಹಾವು ಕಚ್ಚಿ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಕಾಳಿನದಿಯಲ್ಲಿ ಕಾಣಸಿಗುವ ಮೊಸಳೆಯೂ ಇಲ್ಲಿ ಕಾಣಿಸಿಕೊಂಡಿತ್ತು! ಯುವತಿಯೊಬ್ಬರು ವಿದ್ಯುತ್ ಪ್ರವಹಿಸಿ ಸಾವಿಗೀಡಾದರು. ವಲಸೆ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹಾಗೂ ಕಟ್ಟಡ ಕಾರ್ಮಿಕರು ವಾಸವಿರುವ ಜೋಪಡಿಗಳು, ಸ್ಲಂಗಳು ಸಂಪೂರ್ಣವಾಗಿ ನೆರೆಗೆ ಸಿಲುಕಿದವು. ಇವರದು ಅರಣ್ಯರೋದನವಾದರೆ, ಐಟಿಬಿಟಿ ಮಂದಿ ಮೀಡಿಯಾಗಳೆದುರು ಬೆಂಗಳೂರನ್ನು ತೊರೆಯುವ ಆಕ್ರೋಶದ ಮಾತನ್ನಾಡಿ, ಆ ಕ್ಷಣದ ಶಾಸ್ತ್ರ ಮುಗಿಸಿದರು.

ಉದ್ಯಮಿ ಮೋಹನ್ ದಾಸ್ ಪೈ ಸರ್ಕಾರಕ್ಕೆ ಛೀಮಾರಿ ಹಾಕಿದರು. 'ಛೀಮಾರಿ ಹಾಕಿದ ಉದ್ಯಮಿಯ ಬಂಗಲೆಯ ಕೆಳಗೆ ರಾಜಕಾಲುವೆ ಹಾದುಹೋಗಿದೆ' ಎಂದು ಮುಖ್ಯಮಂತ್ರಿಯೇ ಮುಂದೆನಿಂತು ಬಾಯಿಮುಚ್ಚಿಸಲೆತ್ನಿಸಿದರು! ಐಟಿ–ಬಿಟಿ ಕಂಪನಿಗಳೇ ಹೆಚ್ಚಿರುವ ಪೂರ್ವಭಾಗದ ಬೆಳ್ಳಂದೂರು, ಕಾಡಬಿಸನಹಳ್ಳಿ, ವೈಟ್ ಫೀಲ್ಡ್, ರಿಂಗ್ ರಸ್ತೆ ಪೂರ್ತಿಯಾಗಿ ಮುಳುಗಡೆ ಆಗಿದ್ದವು. ಇಲ್ಲಿನ ಶಾಸಕ ಅರವಿಂದ ಲಿಂಬಾವಳಿ 'ಹೆಚ್ಚಿಗೆ ಮಳೆ ಬಂದ್ರೆ ನಾನೇನು ಮಾಡೋಕೆ ಆಗುತ್ತೆ' ಎಂದು ಬೇಜವಾಬ್ದಾರಿ ಉತ್ತರ ಕೊಟ್ಟರು. ಜನ ಪ್ರವಾಹದಲ್ಲಿ ಮುಳುಗಿರುವಾಗ ಮಸಾಲೆ ದೋಸೆ ಸವಿಯಲು ಎಳಸು ಸಂಸದ ತೇಜಸ್ವಿಸೂರ್ಯ ಕರೆಕೊಟ್ಟಿದ್ದು ವೈರಲ್ ಆಗಿತ್ತು. ಬೆಂಗಳೂರಿನ ಉಸ್ತುವಾರಿಗಿರಿಗೆ ಕಚ್ಚಾಡಿಕೊಂಡು ಸದಾ ಸುದ್ದಿಯಲ್ಲಿರುತ್ತಿದ್ದ ಪ್ರಭಾವಿ ಮಂತ್ರಿಗಳಿಬ್ಬರು ದಿವ್ಯ ಮೌನಕ್ಕೆ ಶರಣಾಗಿದ್ದರು.

ಬೆಂಗಳೂರು ನಗರದ ನೈಸರ್ಗಿಕ ರಚನೆ

ಬೆಂಗಳೂರು ನಗರ ಸಮುದ್ರಮಟ್ಟದಿಂದ ಮೂರು ಸಾವಿರ ಅಡಿ ಎತ್ತರದಲ್ಲಿರುವ ನಗರ. ಇದರ ರಕ್ಷಣೆಗೆ ಬನ್ನೇರುಘಟ್ಟ ದಟ್ಟ ಅರಣ್ಯವೂ ಇದೆ. ಪ್ರವಾಹಕ್ಕೆ ಸಿಲುಕಲು ಅಕ್ಕಪಕ್ಕದಲ್ಲಿ ಯಾವ ನದಿಯೂ ಇಲ್ಲ. ಹೀಗಿದ್ದೂ ಬೆಂಗಳೂರು ಪ್ರವಾಹಕ್ಕೆ ಸಿಲುಕಿದ್ದು ಯಾಕೆ? ಎನ್ನುವ ಪ್ರಶ್ನೆಗೆ ದಂಡಿ ಉತ್ತರ ಇವೆಯಾದರೂ, ಕಾರ್ಯಗತಗೊಳಿಸಲು ಯಾರಿಗೂ ಇಚ್ಛಾಸಕ್ತಿ ಇಲ್ಲ.

ಬೆಂಗಳೂರು ಎತ್ತರದ ಪ್ರದೇಶವಾದ್ದರಿಂದ ಇಲ್ಲಿ ಮಳೆಯೂ ಹೆಚ್ಚಾಗಿ ಬೀಳುತ್ತದೆ. ಆದರೆ ಬಿದ್ದ ನೀರು ಬಹುಬೇಗನೆ ಇಳಿದು ಹೋಗುತ್ತಿತ್ತು. ಈ ಮಳೆ ನೀರು ಹೆಚ್.ಎನ್. ವ್ಯಾಲಿ (ಹೆಬ್ಬಾಳ–ನಾಗವಾರ ಕಣಿವೆ) ಮತ್ತು ಕೆ.ಸಿ.ವ್ಯಾಲಿ (ಕೋರಮಂಗಲ–ಚಲ್ಲಘಟ್ಟ ಕಣಿವೆ) ಮೂಲಕ ಹಾದು ಹೋಗಿ ಮುಂದೆ ದಕ್ಷಿಣ ಪಿನಾಕಿನಿ ನದಿಯಾಗಿ ರೂಪ ತಳೆದು, ತಮಿಳುನಾಡಿನ ಹೊಸೂರು, ಕೃಷ್ಣಗಿರಿ ಮುಟ್ಟಿ ಕೊನೆಗೆ ಅರಬ್ಬೀ ಸಮುದ್ರವನ್ನು ಸೇರುತ್ತಿತ್ತು.

ಬೆಂಗಳೂರು ನಗರದಲ್ಲಿ ಬೀಳುವ ಮಳೆ ನೀರನ್ನು ಹಿಡಿದಿಡಲು ಸುಮಾರು 1700ಕ್ಕೂ ಹೆಚ್ಚು ಕೆರೆಗಳು ಇದ್ದವು. ಈಗಿನ ಮೆಜೆಸ್ಟಿಕ್ ಬಸ್ ನಿಲ್ದಾಣವೂ ಹಿಂದೆ ಕೆರೆಯೇ ಆಗಿತ್ತು! ಕೆರೆಗಳಿಂದಾಗಿ ತೋಟ ಕೃಷಿಗೆ (ಸೊಪ್ಪು, ತರಕಾರಿ, ಹಣ್ಣು ಇತ್ಯಾದಿ) ಹೆಸರುವಾಸಿಯಾಗಿತ್ತು. ಮಾತ್ರವಲ್ಲದೇ ನಗರವನ್ನು ಸದಾ ತಂಪಾಗಿಡುತ್ತಿತ್ತು. ಹೀಗಾಗಿ ಬೆಂಗಳೂರು ಏರ್ ಕಂಡೀಷನ್ಡ್ ಸಿಟಿ ಅಂತಲೂ ಕರೆಸಿಕೊಂಡು ಪೆನ್ಷನರ್ಸ್ ಪ್ಯಾರಡೈಸ್ ಆಗಿತ್ತು ಎಂಬುದೀಗ ಇತಿಹಾಸ.

ಕೆರೆ ತುಂಬಿ ಹೆಚ್ಚಾದ ನೀರು ಕೋಡಿ ಬಿದ್ದು ರಾಜಕಾಲುವೆಗಳ ಮೂಲಕ ಮತ್ತೊಂದು ಕೆರೆಯನ್ನು ಸೇರುತ್ತಿತ್ತು. ಕಂದಾಯ ದಾಖಲೆಗಳ ಪ್ರಕಾರ ಈ ರಾಜಕಾಲುವೆಗಳು 30 ಮೀಟರ್ ಅಗಲ ಇದ್ದವು. ಇವು ಗ್ರಾವಿಟಿ ಆಧರಿಸಿ ತಮ್ಮ ದಿಕ್ಕನ್ನು ಕಂಡುಕೊಂಡು ಮತ್ತೊಂದು ಕೆರೆಯನ್ನು ಸೇರುತ್ತಿದ್ದವು. ಕೆರೆಯಿಂದ ಕೆರೆಗೆ ನೀರು ಹರಿದು, ಹೆಚ್ಚಾದ ನೀರು ದಕ್ಷಿಣ ಪಿನಾಕಿನಿ ಸೇರುತ್ತಿತ್ತು. ಇದರಿಂದ ಬೆಂಗಳೂರು ನೆರೆ–ಪ್ರವಾಹಕ್ಕೆ ಸಿಲುಕಲು ಸಾಧ್ಯವೇ ಇರಲಿಲ್ಲ.

> "ಬೆಂಗಳೂರಿನಲ್ಲಿ 28 ಶಾಸಕರಿದ್ದಾರೆ. ಇವರಲ್ಲಿ ಬಹುತೇಕರು ಪಕ್ಷಭೇದವಿಲ್ಲದೇ ರಿಯಲ್ ಎಸ್ಟೇಟ್ ಉದ್ಯಮ ನಡೆಸುವವರೇ ಆಗಿದ್ದಾರೆ. ಕೆಲವರು ಘೋಷಿಸಿಕೊಂಡಿದ್ದರೆ, ಮತ್ತೆ ಕೆಲವರು ಬೇನಾಮಿ ಪಾಲುದಾರರು. ಪಾಲಿಕೆ ಸದಸ್ಯರೂ ಇದಕ್ಕೆ ಹೊರತಲ್ಲ. ಬೇಲಿಯೇ ಎದ್ದು ಹೊಲ ಮೇಯ್ದಂತೆ ಒತ್ತುವರಿ, ಕಬಳಿಕೆಯ ಹಿಂದೆ ಇವರೇ ಇರುವಾಗ, ಕೇಳುವವರು ಯಾರು? ಕಾನೂನು ನಿಯಮಾವಳಿಗಳು ಇವೆಯಾದರೂ ಅವು ಬಡವರು, ಅಸಹಾಯಕರ ಮೇಲೆ ಪ್ರಯೋಗಿಸಲಷ್ಟೇ!

ಆದರೂ ಪ್ರವಾಹಕ್ಕೆ ಯಾಕಾಯ್ತು?

ಕೆರೆಗಳ ನಗರ ಬೆಂಗಳೂರಿನಲ್ಲೀಗ ಕೆಲವೇ ಕೆಲವು ಕೆರೆ ಉಳಿದಿವೆ. ಕೆರೆಗಳು ಲೇಔಟ್, ಐಷಾರಾಮಿ ವಿಲ್ಲಾಗಳು, ಗಗನಚುಂಬಿ ಕಟ್ಟಡಗಳು ತಲೆ ಎತ್ತಿ ನಿಂತಿವೆ. ಕೆರೆ ಕಬಳಿಸಿದ್ದು ಸಾಕಾಗದೇ ರಾಜಕಾಲುವೆಗಳನ್ನು ಒತ್ತುವರಿ ಮಾಡಲಾಗಿದೆ; ಕೆಲವೆಡೆ ಪೂರ್ತಿಯಾಗಿ ಮುಚ್ಚಲಾಗಿದೆ. ಮತ್ತೆ ಕೆಲವೆಡೆ ಗ್ರಾವಿಟಿಗೆ ವಿರುದ್ಧವಾಗಿ ಕಾಲುವೆಯ ದಿಕ್ಕನ್ನೇ ಬದಲಾಗಿಸಲಾಗಿದೆ. ಮಳೆನೀರು ಕಾಲುವೆ ಎಂದು ದಾಖಲೆಗಳಲ್ಲಿದೆ. ಆದರೆ ಇವು ಎಲ್ಲಿಯೂ ಕಾಣುವುದಿಲ್ಲ! ಕೆರೆ, ರಾಜಕಾಲುವೆ ಮತ್ತು ಇವುಗಳ ಬಫೋರ್ ಜೋನ್ (ಸುರಕ್ಷಿತ ವಲಯ), ರಸ್ತೆ, ಗೋಮಾಳ ಹೀಗೆ ಎಲ್ಲವನ್ನೂ ಒಂದಿಂಚೂ ಬಿಡದೇ ನುಂಗಿದ ಮೇಲೆ ಮಳೆ ನೀರು ಹರಿದು ಹೋಗುವುದಾದರೂ ಎಲ್ಲಿಗೆ?



ನೆರೆಗೆ ಭ್ರಷ್ಟಾಚಾರವೂ ಕಾರಣ!

ನಗರಕ್ಕೆ ಮೂಲ ಸೌಕರ್ಯದ ಬಹಳ ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಜಾರಿ ಆಗುತ್ತಲೇ ಇವೆ. ಇದಕ್ಕಾಗಿ ಬಜೆಟ್ ಇಲ್ಲದಿದ್ದರೂ ಸಾಲ ತಂದು ಸುರಿಯಲಾಗುತ್ತಿದೆ. ಆದರೆ ಇವುಗಳಿಂದ ನಗರದ ನೆರೆ ತಪ್ಪಿಸಲು ಸಾಧ್ಯವಾಗಿಲ್ಲ. ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಗಳು, ಇದರ ಹಿಂದಿರುವ 40% ಕಮಿಷನ್ ದಂಧೆಯೂ ಇದಕ್ಕೆ ಕಾರಣ ಎಂಬುದನ್ನು ಬೇರೆಯಾಗಿ ಹೇಳಬೇಕಿಲ್ಲ. ಕಿಮೀಗೆ 10 ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಿಸಿದ ವೈಟ್ ಟಾಪಿಂಗ್ ರಸ್ತೆಗಳಲ್ಲೂ ನಾಲ್ಕು ಅಡಿ ನೀರು ನಿಂತಿರುವುದು ಆಡಳಿತದಲ್ಲಿನ ಭ್ರಷ್ಟಾಚಾರವನ್ನು ಬೆತ್ತಲು ಮಾಡಿದೆ. ನಗರ ಯೋಜನೆಯಲ್ಲಿ ತಜ್ಞರು ಹಾಗು ಸ್ಥಳೀಯರ ಅಭಿಪ್ರಾಯ ಪಡೆಯದೇ ಅಥವಾ ಪರಿಗಣಿಸದೇ, ತಮ್ಮ ಮೂಗಿನ ನೇರಕ್ಕೆ ಅಥವಾ ದೊಡ್ಡವರ ಹಿತಾಸಕ್ತಿಗೆ ಅನುಗುಣವಾಗಿ ಯೋಜನೆ ರೂಪಿಸುವುದೂ ಪ್ರವಾಹಕ್ಕೆ ಕಾರಣ.

ಮಳೆಗಾಲವನ್ನು ಎದುರಿಸಲು ಬಿಬಿಎಂಪಿ ಸರಿಯಾದ ಪೂರ್ವಸಿದ್ಧತೆ ಮಾಡಿಕೊಂಡಿರಲಿಲ್ಲ. ಮಳೆಗಾಲ ಆರಂಭಕ್ಕೂ ಮುನ್ನವೇ ಚರಂಡಿ, ರಾಜಕಾಲುವೆ ಮತ್ತು ಮಳೆ ನೀರು ಕಾಲುವೆಗಳ ಹೂಳು ಎತ್ತದಿರುವುದು ನೆರೆಯನ್ನು ಪ್ರವಾಹವಾಗಿಸಿತು. ನೆರೆಗೆ ಸಿಲುಕಬಹುದಾದ ತಗ್ಗು ಪ್ರದೇಶಗಳಲ್ಲಿಯಾದರೂ ಆದ್ಯತೆ ಮೇರೆಗೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬಹುದಿತ್ತು. ಅದೂ ಆಗಲಿಲ್ಲ. ಕಾರಣ, ಅಧಿಕಾರಿಗಳಲ್ಲಿ ಪ್ರಾಮಾಣಿಕತೆಯಿಂದ, ಕಾಳಜಿ, ಕರ್ತವ್ಯಪ್ರಜ್ಞೆಯಿಂದ ಕೆಲಸ ಮಾಡುವವರ ಸಂಖ್ಯೆ ವಿರಳಾತಿ ವಿರಳ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂಬ ಹುಲ್ಲುಗಾವಲಿನಲ್ಲಿ ಹೆಚ್ಚಿನವರು ಮೇಯಲು ಬಂದವರೇ ಆಗಿದ್ದಾರೆ. ಬಹುಪಾಲು ಮಂದಿ ಅಧಿಕಾರಿಗಳು ಮಂತ್ರಿ–ಶಾಸಕರ ಕೈಕಾಲು ಹಿಡಿದು ಅಥವಾ ಲಕ್ಷ ಲಕ್ಷ ಲಂಚ ನೀಡಿ ನಿಯೋಜನೆ ಮೇಲೆ ಪೋಸ್ಟಿಂಗ್ ಪಡೆದವರೇ. ಹೀಗಿರುವಾಗ ಹೂಡಿದ ಬಂಡವಾಳಕ್ಕೆ ಲಾಭ ತೆಗೆಯಬೇಡವೇ?

ಮಳೆ ನಿಂತ ಮೇಲೆ?

ಸರ್ಕಾರ ನೆರೆ ತಡೆಯುವಲ್ಲಿ ವಿಫಲವಾಗಿದೆ ಎಂಬ ಪ್ರತಿಪಕ್ಷಗಳ ಮಾತಿಗೆ, 'ಪ್ರತಿಪಕ್ಷಗಳ ಇಂತಹ ಹೇಳಿಕೆಗಳಿಂದ ಬ್ರ್ಯಾಂಡ್ ಬೆಂಗಳೂರಿಗೆ ಧಕ್ಕೆಯಾಗಿದೆ' ಎಂಬ ಸರ್ಕಾರದ ನಾಚಿಕೆಗೆಟ್ಟ ಹೇಳಿಕೆ ಹೊರಬಂತು. ಎಷ್ಟೇ ಪ್ರಭಾವಿ ಆಗಿದ್ದರೂ ಒತ್ತುವರಿ ತೆರವುಗೊಳಿಸಿ ಎಂದು ಯಥಾಪ್ರಕಾರ ಕೋರ್ಟ್ ಹೇಳಿತು. ಪೊಲೀಸರ ರಕ್ಷಣೆಯೊಂದಿಗೆ ಘರ್ಜಿಸಿದ ಜೆಸಿಬಿಗಳು, ಬಡವರ ಮನೆಗಳ ನೆಲಸಮ ಮಾಡಿದವೇ ಹೊರತು, ಬಂಗಲೆ, ಕಮರ್ಷಿಯಲ್ ಕಾಂಪ್ಲೆಕ್ಸ್, ವಿಲ್ಲಾಗಳ ಹತ್ತಿರವೂ ಸುಳಿಯಲಿಲ್ಲ! ಪ್ರತಿ ನೆರೆ ಬಂದಾಗಲೂ ನಡೆಯುವ ಬೃಹನ್ನಳೆ ನಾಟಕ ಈಗಲೂ ನಡೆಯುತ್ತಿದೆ.

ನೆರೆ–ಪ್ರವಾಹ ತಡೆಯಲು ಮಾಡಬೇಕಾದ ಕಾರ್ಯಗಳು

1. ಕೆರೆ, ರಾಜಕಾಲುವೆ, ಚರಂಡಿ, ರಸ್ತೆ ಹಾಗೂ ಸರ್ಕಾರಿ ಜಮೀನು ಕಬಳಿಕೆ ಹಾಗೂ ಒತ್ತುವರಿ ಮಾಡಿರುವುದನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಬೇಕು.
2. ಚರಂಡಿ, ರಾಜಕಾಲುವೆ ಮತ್ತು ಮಳೆನೀರು ಕಾಲುವೆಗಳ ಹೂಳು ಎತ್ತಬೇಕು, ನಿರ್ವಹಣೆ ಮೇಲೆ ನಿಗಾ ಇಡಬೇಕು.
3. ಕಾಮಗಾರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು.
4. ಅಪಾರ್ಟ್‌ಮೆಂಟ್ ಸಮುಚ್ಚಯ, ವಾಣಿಜ್ಯ ಸಂಕೀರ್ಣ ನಿರ್ಮಾಣದಲ್ಲಿ ಆಗುತ್ತಿರುವ ನಿಯಮಾವಳಿಗಳ ಉಲ್ಲಂಘನೆಯನ್ನು ತಡೆಗಟ್ಟಬೇಕು. ಓ.ಸಿ ಮತ್ತು ಸಿ.ಸಿ ನೀಡಿಕೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು.
5. ಖಾಸಗಿ ಬಡಾವಣೆಗಳ ನಿರ್ಮಾಣದಲ್ಲಿ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6. ನೆರೆಗೆ ತುತ್ತಾಗುವುದನ್ನು ಶಾಶ್ವತವಾಗಿ ತಪ್ಪಿಸಲು ನಗರ ಯೋಜನೆ ತಜ್ಞರ ಸಲಹೆ ಪಡೆದು ಸಮಗ್ರ ಯೋಜನೆ ರೂಪಿಸಬೇಕು. ಯೋಜನೆ ರೂಪಿಸುವ ಮತ್ತು ಯೋಜನೆ ಜಾರಿ ಹಂತದಲ್ಲಿ ಸ್ಥಳೀಯ ನಿವಾಸಿಗಳನ್ನು ಒಳಗೊಳ್ಳಬೇಕು.
7. ವಾರ್ಡ್ ಸಮಿತಿಗಳನ್ನು ಪುನರ್ ರಚಿಸಬೇಕು. ಸಮಿತಿಗಳಲ್ಲಿ ನೈಜ ನಿವಾಸಿಗಳಿಗೆ ಪ್ರಾತಿನಿಧ್ಯ ನೀಡಬೇಕು ಹಾಗು ಮಾಸಿಕ ಸಭೆ ಕಡ್ಡಾಯವಾಗಿ ನಡೆಯುವಂತೆ ಕ್ರಮವಹಿಸಬೇಕು.
8. ನಗರ ಯೋಜನೆಯಲ್ಲಿ ಬೆಸ್ಕಾಂ, ಜಲಮಂಡಳಿ ಜತೆಗೆ ಸಮನ್ವಯತೆ ಸಾಧಿಸಿ ಕಾಮಗಾರಿಗಳನ್ನು ನಡೆಸಬೇಕು.
9. ಕಾಮಗಾರಿಗಳು ಕಾಲಮಿತಿಯಲ್ಲಿ ಮುಗಿಯುವಂತೆ ಕ್ರಮವಹಿಸಬೇಕು.

ಇಂತಹ ಸಾವಿರ ಸಲಹೆಗಳನ್ನು ನಗರ ಯೋಜನೆ ತಜ್ಞರು, ಸಂಸ್ಥೆಗಳು ಸರ್ಕಾರಕ್ಕೆ ನೀಡಿವೆ ಮತ್ತು ಜಾರಿಗೆ ಒತ್ತಾಯವೂ ನಡೆದಿದೆ. ರಿಯಲ್ ಎಸ್ಟೇಟ್ ಕುಳಗಳು, ದಲ್ಲಾಳಿಗಳು, ಭೂಮಾಫಿಯಾ ಶಕ್ತಿಸೌಧ ಹೊಕ್ಕು ನೀತಿ–ನಿಯಮ ರೂಪಿಸುತ್ತಿರುವಾಗ, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂಬುದೇ ಪ್ರಶ್ನೆ? ಮತ್ತೊಮ್ಮೆ ನೆರೆ ಬಂದಾಗ ದಿನಾಂಕ ಬದಲಾಯಿಸಿ ಇದೇ ಲೇಖನ ಮರುಪ್ರಕಟಿಸಬಹುದು ಅಷ್ಟೇ!

ಇಂದು ಯಾವುದನ್ನು ತಪ್ಪಾಗಿ ಫ್ರೀಬೀಸ್ ಎಂದು ಕರೆಯಲಾಗುತ್ತಿದೆಯೋ ಅವುಗಳ ಕಾರ್ಯಕ್ರಮಗಳ ಮೂಲಕವೇ ಇಂದು ದೇಶದ ಅಭಿವೃದ್ಧಿ ಭೂಪಟದಲ್ಲಿ ದಕ್ಷಿಣ ಭಾರತದ ರಾಜ್ಯಗಳು ಮುಂಚೂಣಿಯಲ್ಲಿವೆ. ಸಾಮಾಜಿಕ ನ್ಯಾಯ ಎಂಬ ನುಡಿಯನ್ನು ಬಳಸಿ ಈ ರಾಜ್ಯಗಳನ್ನು ಹಣಿಯಲು ಸಾಧ್ಯವಾಗದ ಪ್ರಧಾನಿ 'ಫ್ರೀಬೀಸ್' ಹೆಸರಿನಲ್ಲಿ ಹಳಿಯುತ್ತಿದ್ದಾರೆ. ಅಭಿವೃದ್ಧಿ ನೀತಿಗಳನ್ನು ರೂಪಿಸಿಕೊಳ್ಳುವ ಅಧಿಕಾರ ರಾಜ್ಯಗಳಿಗಿದೆ. ಪ್ರಧಾನಿ ಯಾವುದನ್ನು ಫ್ರೀಬೀಸ್ ಎಂದು ಕರೆಯುತ್ತಿದ್ದರೋ ಅವುಗಳ ಬಗ್ಗೆ ನೀತಿ ರೂಪಿಸಿಕೊಳ್ಳುವ ಅಧಿಕಾರ ರಾಜ್ಯಗಳಿಗಿದೆ. ಇದನ್ನು ಸಂಸತ್ತಾಗಲಿ, ನ್ಯಾಯಾಲಯಗಳಾಗಲಿ ಅಥವಾ ರಿಸರ್ವ್ ಬ್ಯಾಂಕಾಗಲಿ ರದ್ದುಪಡಿಸುವುದು ಸಾಧ್ಯವಿಲ್ಲ. ಮತದಾರರು ಅಂತಿಮವಾಗಿ ಯಾವುದು ಫ್ರೀಬೀಸ್ ಯಾವುದು ಕಲ್ಯಾಣ ಕಾರ್ಯಕ್ರಮ ಎಂಬುದನ್ನು ನಿರ್ದರಿಸುತ್ತಾರೆ. ಅವರ ಆಯ್ಕೆಯ ಸ್ವಾತಂತ್ರವನ್ನು ಫ್ರೀಬೀಸ್ ಎಂದು ಬಲಿಕೊಡುವುದು ಅವರಿಗೆ ಮಾಡುವ ಅವಮಾನ.



ಡಾ.ಟಿ.ಆರ್. ಚಂದ್ರಶೇಖರ

'ಉಚಿತ ಕಾಣಿಕೆ'ಯ ಸಂಸ್ಕೃತಿ ರಾಜಕಾರಣ

ಸದಾ ಜನರ ಮನಸ್ಸನ್ನು ನಿಜವಾಗಿ ಅವರನ್ನು ಕಾಡುತ್ತಿರುವ ಕ್ರೂರ ಸಮಸ್ಯೆಗಳಾದ ಬೆಲೆ ಏರಿಕೆ, ಅಪೌಷ್ಟಿಕತೆ, ನಿರುದ್ಯೋಗ, ಅಸಮಾನತೆ, ಧಾರ್ಮಿಕ ದೌರ್ಜನ್ಯ –– ಮುಂತಾದವುಗಳಿಂದ ಬೇರೆಡೆಗೆ ಸೆಳೆಯುವುದು ನಮ್ಮ ಪ್ರಧಾನಮಂತ್ರಿ ಅವರ ಬಹುದೊಡ್ಡ ಗುಣವಾಗಿದೆ. ಏಕೆಂದರೆ ಅವರಿಗೆ ರೆಟೆರಿಕ್‌ನಲ್ಲಿ ಹೆಚ್ಚು ನಂಬಿಕೆಯಿದೆ. ಸಮಸ್ಯೆಯ ಆಳ–ಅಗಲಗಳನ್ನು ಪರಿಶೀಲಿಸುವ ವ್ಯವಧಾನ ಅವರಿಗಿಲ್ಲ. ಇಂದು ದೇಶದಲ್ಲಿನ ರಾಜಕಾರಣಿಗಳು ನಡೆಸುತ್ತಿರುವ ಮತ್ತು 'ಸುಳ್ಳುಬುರುಕ' ಮಾಧ್ಯಮಗಳಲ್ಲಿ ನಡೆಯುತ್ತಿರುವ ಫ್ರೀಬೀಸ್ ಅಥವಾ ಪುಕ್ಕಟೆ – ಬಿಟ್ಟಿ ಅಥವಾ ಪ್ರಧಾನಮಂತ್ರಿಗಳ ಪರಿಭಾಷೆಯ 'ರೆವ್ಡಿ ಸಂಸ್ಕೃತಿ' ಕುರಿತ ಚರ್ಚೆಯನ್ನು ಇದಕ್ಕೆ ಸಾಕ್ಷಿಯಾಗಿ ನೋಡಬಹುದು. ಅವರಿಗಾಗಲಿ ಅಥವಾ ಇದರ ಬಗ್ಗೆ ವಿಚಾರಣೆ ನಡೆಸುತ್ತಿರುವ ಸರ್ವೋಚ್ಚ ನ್ಯಾಯಾಲಯಕ್ಕಾಗಲಿ, ಇದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಿರುವ ರಿಸರ್ವ್ ಬ್ಯಾಂಕಿಗಾಗಲಿ 'ಫ್ರೀಬೀಸ್' ಎಂದರೇನು ಮತ್ತು ಇವು ಜನಕಲ್ಯಾಣ ಕಾರ್ಯಕ್ರಮಗಳಿಂದ ಹೇಗೆ ಭಿನ್ನ ಎಂಬುದನ್ನು ವಿವರಿಸುವುದು ಸಾಧ್ಯವಾಗಿಲ್ಲ. ಈ ಬಗ್ಗೆ ಪ್ರಧಾನಮಂತ್ರಿ ಏನು ಹೇಳಿದ್ದಾರೆ ಎಂಬುದನ್ನು ಮೊದಲು ನೋಡೋಣ. ಅವರು ಹೇಳುತ್ತಾರೆ 'ಮತಗಳನ್ನು ಪಡೆಯುವುದಕ್ಕಾಗಿ ಕೆಲವು ರಾಜ್ಯ ಸರ್ಕಾರಗಳು ರೇವ್ಡಿ ಸಂಸ್ಕೃತಿಯಲ್ಲಿ ಮುಳುಗಿಹೋಗಿವೆ. ಆದರೆ ಡಬಲ್‌ಎಂಜಿನ್ ಸರ್ಕಾರ ಎಕ್ಸ್‌ಪ್ರೆಸ್ ಹೈವೇಗಳು, ರೈಲು ಮಾರ್ಗಗಳ ನಿರ್ಮಾಣದಲ್ಲಿ ನಿರತವಾಗಿದೆ' ಎಂದು ಹೇಳಿ ಮುಂದುವರಿದು ಅವರು 'ಉಚಿತವಾಗಿ ನೀಡುವ ಕಾಣಿಕೆ ಸಂಸ್ಕೃತಿಯು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ' ಎಂದು ನಾಡಿನ ಯುವಜನರಿಗೆ ಎಚ್ಚರಿಕೆ ನೀಡಿದ್ದಾರೆ.

ನ್ಯಾಯಾಲಯದ ಕಟಕಟೆಯಲ್ಲಿ ಚರ್ಚೆ:

ಬಿಜೆಪಿಯ ಮುಖಂಡರೊಬ್ಬರು ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ 'ಅವೈಚಾರಿಕ ಉಚಿತ ಕೊಡುಗೆ'ಗಳ ಅಪಾಯದ ಬಗ್ಗೆ ನ್ಯಾಯಾಲಯದ ಗಮನ ಸೆಳೆದು, ಇದು ಒಂದು ರೀತಿಯಲ್ಲಿ ಚುನಾವಣೆಗಳಲ್ಲಿ ಮತ ಪಡೆಯಲು ನಡೆಸುವ 'ಭ್ರಷ್ಟಾಚಾರ' ಎಂದು ಬಣ್ಣಿಸಿದ್ದಾರೆ. ಇದರಲ್ಲಿ ನಾನೇನು ಕಡಿಮೆಯೆಂದು ರಿಸರ್ವ್ ಬ್ಯಾಂಕು 'ಉಚಿತವಾಗಿ ವಿದ್ಯುತ್, ಸೈಕಲ್ಲುಗಳು, ಕುಡಿಯುವ ನೀರು, ಸಾರ್ವಜನಿಕ ಸಾರಿಗೆ ಮುಂತಾದವುಗಳನ್ನು ನೀಡುವ ಕಾರ್ಯಕ್ರಮಗಳು ಖಾಸಗಿ ಬಂಡವಾಳ ಹೂಡಿಕೆಗೆ ಕಂಟಕವಾಗಿ ಪರಿಣಮಿಸಿವೆ' ಎಂದು ಫ್ರೀಬೀಸ್ ವಿರುದ್ಧದ ತನ್ನ ಆತಂಕವನ್ನು ವ್ಯಕ್ತಪಡಿಸಿದೆ. ಅನೇಕರು ಉಚಿತ ಕೊಡುಗೆಗಳು 'ಕಾರ್ಮಿಕರನ್ನು ಸೋಮಾರಿಗಳನ್ನಾಗಿ ಮಾಡಿಬಿಡುತ್ತವೆ' ಎಂದು ತಮ್ಮ ಘನವಾದ ವಿಚಾರವನ್ನು ಮಂಡಿಸುತ್ತಿದ್ದಾರೆ. ಅನ್ನ ಭಾಗ್ಯ ಕಾರ್ಯಕ್ರಮ 2014ರಲ್ಲಿ ಜಾರಿಗೆ ಬಂದಾಗ ಕರ್ನಾಟಕದ ಒಬ್ಬ ಉದ್ಯಮಿ 'ತೆರಿಗೆದಾರರ ಹಣದ ಲೂಟಿ' ಎಮದು ಹೇಳಿದ್ದರು. ಪ್ರಧಾನಮಂತ್ರಿ ಅವರನ್ನು ಸೇರಿಸಿಕೊಂಡು ಇವರೆಲ್ಲರ ಪ್ರಕಾರ 'ಫ್ರೀಬೀಸ್' ಕಾರ್ಯಕ್ರಮವನ್ನು ನಿಲ್ಲಿಸಬೇಕು. ಫ್ರಿಬೀಸ್‌ಗಳು ಅಭಿವೃದ್ಧಿ ಸಾಧನಗಳಲ್ಲ ಎಂಬುದೇ ಇಂದು ದಟ್ಟವಾಗಿ ಕೇಳಿಬರುತ್ತಿರುವ ಅಭಿಪ್ರಾಯವಾಗಿದೆ.

ಫ್ರೀಬಿಸ್‌ಗಳಲ್ಲಿ ಕೆಲವರು ಭಿನ್ನತೆಯನ್ನು ಮಾಡುತ್ತಾರೆ. ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಕುಡಿಯುವ ನೀರು ಮುಂತಾದವುಗಳು 'ಜನಕಲ್ಯಾಣ ಕಾರ್ಯಕ್ರಮ'ಗಳಾದರೆ ಟಿ ವಿ, ಲ್ಯಾಪ್‌ಟಾಪುಗಳು, ಗ್ರೈಡರ್ ಗಳು, ವಿದ್ಯುತ್, ಮಹಿಳೆಯರಗೆ ಸಾರ್ವಜನಿಕ ಸಾರಿಗೆ, ಅಡುಗೆ ಅನಿಲ ಮುಂತಾದವುಗಳನ್ನು ಉಚಿತವಾಗಿ, ಅಂದರೆ ಪುಕ್ಕಟೆಯಾಗಿ ನೀಡುವುದನ್ನು ಫ್ರೀಬೀಸ್ ಎಂದು ವರ್ಗೀಕರಣ ಮಾಡುತ್ತಾರೆ. ನಿಜವಾಗಿ ಜನಕಲ್ಯಾಣ ಕಾರ್ಯಕ್ರಮಗಳಾವುವು ಮತ್ತು ಫ್ರೀಬಿಸ್‌ಗಳು ಯಾವುದು ಎಂಬುದನ್ನು ಗುರುತಿಸುವುದು ಸುಲಭವಲ್ಲ. ಉದಾ: ವಿದ್ಯುತ್ತು. ಕರ್ನಾಟಕದಲ್ಲಿ ಪ. ಜಾ. ಮತ್ತು ಪ. ಪಂ.ಗಳ ಬಿಪಿಎಲ್ ಕುಟುಂಬಗಳಿಗೆ ಮಾಸಿಕ 75 ಯುನಿಟ್ ವಿದ್ಯುತ್ತ ಉಚಿತವಾಗಿ ನೀಡಲಾಗುತ್ತಿದೆ. ಪಿ.ಎಮ್‌ಕಿಸಾನ್ ಕಾರ್ಯಕ್ರಮಕ್ಕೆ (ಇದು ಪ್ರಧಾನಮಂತ್ರಿಗಳ ಕಾರ್ಯಕ್ರಮ) 2022–23ರಲ್ಲಿ ಕರ್ನಾಟಕ ಸರ್ಕಾರನೀಡಲಾಗುತ್ತಿರುವ ಅನುದಾನ ರೂ.2000 ಕೋಟಿ. ಈ ಕಾರ್ಯಕ್ರಮಗಳನ್ನು ಯಾವ ಆಧಾರದಲ್ಲಿ 'ಫ್ರೀಬೀಸ್' ಕರೆಯುವುದು? ಗ್ರಾಮೀಣ ಪ್ರದೇಶದ ಗುಡಿಸಲು ವಾಸಿಗಳಿಗೆ ಉಚಿತವಾಗಿ ವಿದ್ಯುತ್ತ್ ನೀಡುವುದಕ್ಕೂ ಮತ್ತು ಜನಸಂಖ್ಯೆಯ ಭೆಳವಣಿಗೆಯ ನಿಯಂತ್ರಣಕ್ಕೂ ನಡುವೆ ಸಂಬಂದವಿದೆ ಎನ್ನುವ ಒಂದು ಲಘುಹಾಸ್ಯ ಒಂದು ಕಾಲಕ್ಕೆ ಕೇಳಿಬರುತ್ತಿತ್ತು. ಇದರಲ್ಲಿ ಸತ್ಯಾಂಶವಿಲ್ಲ ಎಂದು ಹೇಳಲು ಬರುವುದಿಲ್ಲ. ಕರ್ನಾಟಕ ಸರ್ಕಾರ ಆಹಾರ ಭದ್ರತೆಗಾಗಿ 2022–23ರಲ್ಲಿ ನೀಡಿರುವ ಅನುದಾನ ರೂ. 2801 ಕೋಟಿ. ಒಟ್ಟು ಬಜೆಟ್ ವೆಚ್ಚದಲ್ಲಿ ಇದರ ಪ್ರಮಾಣ ಶೇ. 1.12. ಇದಕ್ಕೂ ದಿನಗೂಲಿ ಕಾರ್ಮಿಕರ ದ ು ಡಿ ವ ು ಂ ು ು ಕಾರ್ಯಕ್ಷಮತೆಗೂ ನಡುವೆ ಸಂಬಂಧವಿದೆ. ದಿನಗೂಲಿ ದುಡಿಮೆಗಾರರ ಆಹಾರ ಭದ್ರತೆಯು ಅವರ ಉ ತ್ಪಾ ದ ಕ ತೆ ೦ು ನ್ನು ಹೆಚ್ಚಿಸಿದರೆ ಅದರಿಂದ ಅವರಿಗೆ ಹಾಗೂ ಆರ್ಥಿಕತೆಗೆ ಉಪಯೋಗವಾಗುತ್ತದೆ. ಇದನ್ನು 'ರೇವ್ಡಿ ಸಂಸ್ಕೃತಿ' ಎಂದು ಕರೆಯುವುದು ಎಷ್ಟರ ಮಟ್ಟಿಗೆ ಸರಿ!

ಉಚಿತ ಕಾಣಿಕೆ ಸಂಸ್ಕೃತಿ(ರೇವ್ಡಿ)ಬಗ್ಗೆ ಮಾತನಾಡುವ ಮನುಷ್ಯ ಕರ್ನಾಟಕದ ಶಾಸಕರುಗಳಿಗೆ ನೀಡುವ ಸಂಬಳ ಮತ್ತು ಭತ್ಯೆಗಳು ಬಗ್ಗೆ ಮಾತನಾಡುವುದಿಲ್ಲ. ಇದು ಫ್ರೀಬಿಸುಗಳಲ್ಲವೆ?

ಮಾಸಿಕ ಸಂಬಳ; ರೂ.25000, ಮಾಸಿಕ ಸಾದಿಲ್ವಾರು; ರೂ.40000 ಅಂಚೆ ವೆಚ್ಚ; ರೂ.5000. ಆಪ್ತ ಸಹಾಯಕ ಸಂಬಳ: ರೂ.10000. ಸಾರಿಗೆ ವೆಚ್ಚ: ರೂ.40000. ದಿನವಹಿ ಸಭಾ ಭತ್ಯೆ; ರೂ. 2000. ವಾಹನ ಖರೀದಿಗೆ ಶೇ. 7 ರ ಬಡ್ಡಿಯಲ್ಲಿ ರೂ.15 ಲಕ್ಷ ಸಾಲ –– ಇತ್ಯಾದಿ ಇತ್ಯಾದಿ.

ಈ ಪಾವತಿಗಳು ಜನಕಲ್ಯಾಣ ಕಾರ್ಯಕ್ರಮಗಳಲ್ಲ. ಇವುಗಳು ಫ್ರಿಬೀಸ್ ಅಲ್ಲವೆ! ರಾಜ್ಯದ 224 ಶಾಸಕರಿಗೆ ಇಷ್ಟೆಲ್ಲ ಸವಲತ್ತುಗಳನ್ನು ನೀಡಲಾಗುತ್ತಿದೆ. ಅದೇ ಮನ್‌ರೇಗದಲ್ಲಿ ಕೂಲಿಕಾರರಿಗೆ ದಿನಗೂಲಿ ರೂ280. ಅದೂ ಕೂಡ ವಾರ್ಷಿಕ ನೂರು ದಿನಗಳ ಮಿತಿ 100 ದಿನಗಳು. ಕನಾಟಕದಲ್ಲಿ 2011ರ ಜನಗಣತಿ ಪ್ರಕಾರ 71 ಲಕ್ಷ ಭೂರಹಿತ ದಿನಗೂಲಿ ಕಾರ್ಮಿಕರಿದ್ದಾರೆ. ಅರ್ಥಶಾಸ್ತ್ರದ ಒಂದು ನಿಯಮದ ಪ್ರಕಾರ ದುಡಿಮೆಗಾರರೊಬ್ಬರು ಉತ್ಪಾದನೆಗೆ ಎಷ್ಟು ಕಾಣಿಕೆ ಸಲ್ಲಿಸುತ್ತಾರೋ ಅದಕ್ಕೆ ಸಮನಾಗಿ ಅವರಿಗೆ ಕೂಲಿಯಿರಬೇಕು. ಆದರೆ ನಮ್ಮ ಸಮಾಜದ ಸಂದರ್ಭದಲ್ಲಿ ಸರ್ಕಾರವೇ ಇದನ್ನು ಪಾಲಿಸುತ್ತಿಲ್ಲ. ಉದಾ: ಸರ್ಕಾರಿ ಇಲಾಖೆಯಲ್ಲಿ ಖಾಯಮಾಗಿ ಕೆಲಸ ಮಾಡುವ ಒಬ್ಬರು ಕಚೇರಿ ಸಹಾಯಕರಿಗೆ ಎಷ್ಟು ಸಂಬಳ ನೀಡಲಾಗುತ್ತಿದೆಯೋ ಅದಕ್ಕಿಂತ ಕಡಿಮೆ ಸಂಬಳವನ್ನು ಅದೇ ಕೆಲಸವನ್ನು ಹೊರ ಗುತ್ತಿಗೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನೀಡುತ್ತಿಲ್ಲ. ಇದರಿಂದ ಕಾರ್ಮಿಕರ ದುಡಿಮೆಗೆ ಸಮನಾದ ಪ್ರತಿಫಲ(ಕೂಲಿ/ಸಂಬಳ)ದೊರೆಯುತ್ತಿಲ್ಲ. ಈ ಕೊರತೆಯನ್ನು ಅನ್ನಭಾಗ್ಯದ ಮೂಲಕ, ಉಚಿತ ವಿದ್ಯುತ್ತಿನ ಮೂಲಕ, ಉಚಿತ ಕುಡಿಯುವ ನೀರಿನ ಮೂಲಕ ನೀಡ ಬೇಕಾದುದು ಸಾಮಾಜಿಕ ನ್ಯಾಯ.

ರಾಜ್ಯ ಸರ್ಕಾರಗಳ ಅಧಿಕಾರದ ಹಗರಣ

ಫ್ರಿಬೀಸ್ ಕುರಿತಂತೆ ನಡೆಯುತ್ತಿರುವ ಚರ್ಚೆಯ ಮೂಲದಲ್ಲಿನ ಕಾರ್ಯತಂತ್ರವೆಂದರೆ ಅಭಿವೃದ್ಧಿ ನೀತಿ–ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವ ರಾಜ್ಯ ಸರ್ಕಾರಗಳ ಸಂವಿಧಾನದತ್ತ ಅಧಿಕಾರವನ್ನು ಕಬಳಿಸುವುದಾಗಿದೆ. ಅದು ಕಲ್ಯಾಣ ಕಾರ್ಯಕ್ರಮವಾಗಿರಲಿ ಅಥವಾ ಪ್ರಧಾನಮಂತ್ರಿ ಹೇಳುತ್ತಿರುವ ಫ್ರೀಬೀಸುಗಳಾಗಿರಲಿ ಅವುಗಳ ಬಗ್ಗೆ ನೀತಿ ರೂಪಿಸಿಕೊಳ್ಳುವುದು ರಾಜ್ಯ ಸರ್ಕಾರಗಳ ಸ್ವಾಯತ್ತ ಅಧಿಕಾರ. ಇದನ್ನು ಸಂವಿಧಾನ ಅವುಗಳಿಗೆ ನೀಡಿದೆ. ಈಗಾಗಲೆ ವೈದ್ಯಕೀಯ ಪರೀಕ್ಷಗೆ ರಾಷ್ಟ್ರಮಟ್ಟದ ನೀಟ್ ಪರೀಕ್ಷೆ,ಜಿಎಸ್‌ಟಿ,ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಗೆ ರಾಷ್ಟ್ರಮಟ್ಟದ ಸಿ.ಯು.ಈ.ಟಿ, ರಾಜ್ಯಪಟ್ಟಿಯಲ್ಲಿರುವ ಕೃಷಿ ಬಗ್ಗೆ ಕಾಯಿದೆಗಳನ್ನು ರೂಪಿಸುವುದು ಮುಂತಾದ ವಿಷಯಗಳಲ್ಲಿ ರಾಜ್ಯಗಳ ಸಂವಿಧಾನದತ್ತ ಅಧಿಕಾರದ ಮೇಲೆ ಒಕ್ಕೂಟ ಸರ್ಕಾರದ ದಾಳಿ ನಡೆದಿದೆ. ಈ ಎಲ್ಲ ದಾಳಿಯ ಮೂಲದಲ್ಲಿರುವುದು ರಾಜ್ಯ ಸರ್ಕಾರಗಳ ಸಾಮಾಜಿಕ ನ್ಯಾಯ ಪ್ರಣೀತ ಕಾರ್ಯಕ್ರಮಗಳನ್ನು ಹಣಿಯುವುದು, ರಾಜ್ಯಮಟ್ಟದ ಭಾಷೆ ಮತ್ತು ಪಠ್ಯಕ್ರಮದಲ್ಲಿ ಕಲಿತ ಪ.ಜಾ, ಪ.ಪಂ. ಒಬಿಸಿ ಮತ್ತು ಅಲ್ಪಸಂಖ್ಯಾತ ಮಕ್ಕಳ ಭವಿಷ್ಯವನ್ನು ಶಿಥಿಲಗೊಳಿಸುವುದು ಮುಂತಾದ ಒಕ್ಕೂಟ ತತ್ವ ವಿರೋಧಿ ಪ್ರಣಾಳಿಕೆಯಾಗಿದೆ.

ದಕ್ಷಿಣ ಭಾರತದ ರಾಜ್ಯಗಳ ಸಾಮಾಜಿಕ ನ್ಯಾಯ ಪ್ರಣಾಳಿಕೆಯನ್ನು ಹಳಿಯುವುದು – ಹಣಿಯುವುದು ಪ್ರಧಾನಮಂತ್ರಿ ಅವರ ಪ್ರೀಬೀಸ್ ರಾಜಕಾರಣದ ಮೂಲದಲ್ಲಿರುವ ಕುತಂತ್ರವಾಗಿದೆ. ಪ್ರಧಾನಮಂತ್ರಿ ಅವರು ಗಮನಿಸಬೇಕಾದ ಸಂಗತಿಯೆಂದರೆ ದೇಶದ ಒಟ್ಟು ಜನಸಂಖ್ಯೆಯಲ್ಲಿ ದಕ್ಷಿಣ ಭಾರತದ ಆರು ರಾಜ್ಯಗಳ ಪ್ರಮಾಣ ಶೇ. 20.72. ಈ ರಾಜ್ಯಗಳು ದೇಶದ ವರಮಾನಕ್ಕೆ 2019–20ರಲ್ಲಿ ನೀಡಿದ ಕಾಣಿಕೆ ರೂ.56.12 ಲಕ್ಷ ಕೋಟಿ. ಆದರೆ ದೇಶದ ಜನಸಂಖ್ಯೆಯಲ್ಲಿ ಶೇ.39.46 ಪಾಲು ಪಡೆದಿರುವ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ರಾಜಸ್ಥಾನ, ಜಾರ್ಖಂಡ್ ರಾಜ್ಯಗಳು ದೇಶದ ವರಮಾನಕ್ಕೆ 2019–20ರಲ್ಲಿ ನೀಡಿದ ಕಾಣಿಕೆ ರೂ.48.86 ಲಕ್ಷ ಕೋಟಿ. ಇಂದು ಯಾವುದನ್ನು ತಪ್ಪಾಗಿ ಫ್ರೀಬಿಸ್ ಎಂದು ಕರೆಯಲಾಗುತ್ತಿದೆಯೋ ಅವುಗಳ ಕಾರ್ಯಕ್ರಮಗಳ ಮೂಲಕವೇ ಇಂದು ದೇಶದ ಅಭಿವೃದ್ಧಿ ಭೂಪಟದಲ್ಲಿ ದಕ್ಷಿಣ ಭಾರತದ ರಾಜ್ಯಗಳು ಮುಂಚೂಣಿಯಲ್ಲಿವೆ. ಸಾಮಾಜಿಕ ನ್ಯಾಯ ಎಂಬ ನುಡಿಯನ್ನು ಬಳಸಿ ಈ ರಾಜ್ಯಗಳನ್ನು ಹಣಿಯಲು ಸಾಧ್ಯವಾಗದ ಪ್ರಧಾನಿ 'ಫ್ರಿಬೀಸ್' ಹೆಸರಿನಲ್ಲಿ ಹಳಿಯುತ್ತಿದ್ದಾರೆ.

ಅಭಿವೃದ್ಧಿ ನೀತಿಗಳನ್ನು ರೂಪಿಸಿಕೊಳ್ಳುವ ಅಧಿಕಾರ ರಾಜ್ಯಗಳಿಗಿದೆ. ಪ್ರಧಾನಿ ಯಾವುದನ್ನು ಫ್ರೀಬಿಸ್ ಎಂದು ಕರೆಯುತ್ತಿದ್ದರೋ ಅವುಗಳ ಬಗ್ಗೆ ನೀತಿ ರೂಪಿಸಿಕೊಳ್ಳುವ ಅಧಿಕಾರ ರಾಜ್ಯಗಳಿಗಿದೆ. ಇದನ್ನು ಸಂಸತ್ತಾಗಲಿ, ನ್ಯಾಯಾಲಯಗಳಾಗಲಿ ಅಥವಾ ರಿಸರ್ವ್ ಬ್ಯಾಂಕಾಗಲಿ ರದ್ದುಪಡಿಸುವುದು ಸಾಧ್ಯವಿಲ್ಲ. ಮತದಾರರು ಅಂತಿಮವಾಗಿ ಯಾವುದು ಫ್ರಿಬೀಸ್ ಯಾವುದು ಕಲ್ಯಣ ಕಾರ್ಯಕ್ರಮ ಎಂಬುದನ್ನು ನಿರ್ದರಿಸುತ್ತಾರೆ. ಅವರ ಆಯ್ಕೆಯ ಸ್ವಾತಂತ್ರವನ್ನು ಫ್ರೀಬೀಸ್ ಎಂದು ಬಲಿಕೊಡುವುದು ಅವರಿಗೆ ಮಾಡುವ ಅವಮಾನ. ಈ ಬಗ್ಗೆ ನಾವು ಪ್ರಾಂಜಲ ಮನಸ್ಸಿನಿಂತ ಯೋಚಿಸುವ ಅಗತ್ಯವಿದೆ.



ಕೃಪೆ: ಸತೀಶ್ ಆಚಾರ್ಯ



ಕೃಪೆ: ಅ.ಕುಮಾರ್

ಜಮ್ಮು ಮತ್ತು ಕಾಶ್ಮೀರದಲ್ಲಿ ಕುತ್ಸಿತ ಕ್ರಮಗಳು



ಪ್ರಕಾಶ್ ಕಾರತ್

ಕಾಶ್ಮೀರಿ ಜನತೆಯ ಪರಂಪರೆ ಹಾಗೂ ಅಸ್ಮಿತೆಯನ್ನು ತೆರೆಮರೆಗೆ ಸರಿಸುವ ಕ್ರಮಗಳನ್ನು ಜಮ್ಮು ಮತ್ತು ಕಾಶ್ಮೀರ ಆಡಳಿತ ಕೈಗೊಳ್ಳುತ್ತಿದೆ. ಜಮ್ಮು ಮತ್ತು ಕಾಶ್ಮೀರ ಕಣಿವೆ ನಡುವೆ ಕೋಮುವಾದಿ ವಿಭಜನೆ ಹೆಚ್ಚಲೂ ಅದು ಉತ್ತೇಜನ ನೀಡುತ್ತಿದೆ. 1931ರಲ್ಲಿ ಪಾಳೇಗಾರಿ ಸರ್ವಾಧಿಕಾರಿ ಆಡಳಿತದ ವಿರುದ್ಧ ಪ್ರತಿಭಟಿಸುತ್ತಿದ್ದ ಜನರ ಮೇಲೆ ಅಂದಿನ ಮಹಾರಾಜರ ಪೊಲೀಸ್ ಪಡೆ ನಡೆಸಿದ ಗೋಲಿಬಾರಿನಲ್ಲಿ ಮೃತಪಟ್ಟ 22 ಜನರ ಸ್ಮರಣೆಗಾಗಿ ಪ್ರತಿ ವರ್ಷ ಜನವರಿ 13ನ್ನು ಹುತಾತ್ಮರ ದಿನವಾಗಿ ಆಚರಿಸಲಾಗುತ್ತದೆ.

ಸತತ ಎರಡನೇ ವರ್ಷವಾದ ಈ ವರ್ಷವೂ ಅಧಿಕೃತ ಸ್ಮರಣೆ ದಿನ ನಡೆಯಲಿಲ್ಲ. 2020ರಲ್ಲಿ, ಕೇಂದ್ರಾಡಳಿತ ಪ್ರದೇಶದ ಆಡಳಿತವು ಹುತಾತ್ಮ ದಿನಾಚರಣೆಗೆ ಅಧಿಕೃತ ಸ್ಥಾನಮಾನ ಕಿತ್ತುಕೊಂಡಿತು. ಸಾಮಾನ್ಯವಾಗಿ ಆ ದಿನ ರಾಜ್ಯ ಸರ್ಕಾರದ ಮುಖ್ಯಸ್ಥರು ಹುತಾತ್ಮರ ಗೌರವಾರ್ಥ ಅವರ ಸಮಾಧಿಗಳ ಮೇಲೆ ಪುಷ್ಪಗುಚ್ಛ ಇರಿಸುತ್ತಾರೆ. ಹಿಂದೆ ಅದು ಸರ್ಕಾರಿ ರಜಾ ದಿನವಾಗಿದ್ದು ಈಗ ಅದನ್ನೂ ರದ್ದುಪಡಿಸಲಾಗಿದೆ. ಹುತಾತ್ಮರ ಸಮಾಧಿಗಳಿರುವ ಸ್ಮಶಾನಕ್ಕೆ ಬೀಗ ಹಾಕಲಾಗಿದ್ದು ಬ್ಯಾರಿಕೇಡ್ ಇರಿಸಲಾಗಿದೆ. ಕಾಶ್ಮೀರ ಜನರ ಬದುಕಿನೊಂದಿಗೆ ಅನುರಣಗೊಳ್ಳುವ ಒಂದು ಐತಿಹಾಸಿಕ ದಿನಾಂಕವನ್ನು ನಿರಾಕರಿಸುವುದು ಕಣಿವೆಯ ಜನರ ಅಧಿಕಾರ ಕಿತ್ತುಕೊಳ್ಳುವ ಇನ್ನೊಂದು ಪ್ರಯತ್ನವಾಗಿದೆ. ಅದಾದ ಮೇಲೆ, ಮಾಜಿ ಮಹಾರಾಜ ಹರಿಸಿಂಗ್ ಜನ್ಮದಿನವಾದ ಸೆಪ್ಟೆಂಬರ್ 23ನ್ನು ಸಾರ್ವಜನಿಕ ರಜಾ ದಿನವಾಗಿ ಆಚರಿಸಲಾಗುವುದೆಂದು ಆಡಳಿತ ಘೋಷಿಸಿದೆ. ಜಮ್ಮುವಿನ ಹಲವು ಸಂಘಟನೆಗಳು ಮನವಿ ಮಾಡಿದ ಮೇಲೆ ಇದಕ್ಕೆ ನಿರ್ಧರಿಸಲಾಗಿದೆ. ಮಹಾರಾಜ ಬ್ರಿಟಿಷ್ ಆಡಳಿತದ ಆಶ್ರಯದಲ್ಲಿ ಪಾಳೇಗಾರಿ ಸಂಸ್ಥಾನಗಳ ವ್ಯವಸ್ಥೆಯ ಸರ್ವಾಧಿಕಾರಿ ಪಾಳೇಗಾರಿ ಆಡಳಿತದ ಸಂಕೇತವಾಗಿದ್ದಾರೆ. ಶೇಖ್ ಅಬ್ದುಲ್ಲಾ ನಾಯಕರಾಗಿದ್ದ ನ್ಯಾಷನಲ್ ಕಾನ್ಫರೆನ್ಸ್, ಪಾಳೇಗಾರಿ ಆಡಳಿತ ಮತ್ತು ಬ್ರಿಟಿಷ್ ಪ್ರಭುತ್ವದ ವಿರುದ್ಧ ಜನತಾ ಆಂದೋಲನದ ನೇತೃತ್ವ ವಹಿಸಿತ್ತು. ಆ ಹೋರಾಟದ ಮುಂದುವರಿದ ಭಾಗವಾಗಿ 1931ರಲ್ಲಿ 22 ಜನರು ಹುತಾತ್ಮರಾದರು.

ಕಾಶ್ಮೀರ ಜನರ ಬದುಕಿನೊಂದಿಗೆ ಅನುರಣಗೊಳ್ಳುವ ಒಂದು ಐತಿಹಾಸಿಕ ದಿನಾಂಕವನ್ನು ನಿರಾಕರಿಸುವುದು ಕಣಿವೆಯ ಜನರ ಅಧಿಕಾರ ಕಿತ್ತುಕೊಳ್ಳುವ ಇನ್ನೊಂದು ಪ್ರಯತ್ನವಾಗಿದೆ. ಅದಾದ ಮೇಲೆ, ಮಾಜಿ ಮಹಾರಾಜ ಹರಿಸಿಂಗ್ ಜನ್ಮದಿನವಾದ ಸೆಪ್ಟೆಂಬರ್ 23ನ್ನು ಸಾರ್ವಜನಿಕ ರಜಾ ದಿನವಾಗಿ ಆಚರಿಸಲಾಗುವುದೆಂದು ಆಡಳಿತ ಘೋಷಿಸಿದೆ. ಜಮ್ಮುವಿನ ಹಲವು ಸಂಘಟನೆಗಳು ಮನವಿ ಮಾಡಿದ ಮೇಲೆ ಇದಕ್ಕೆ ನಿರ್ಧರಿಸಲಾಗಿದೆ. ಮಹಾರಾಜ ಬ್ರಿಟಿಷ್ ಆಡಳಿತದ ಆಶ್ರಯದಲ್ಲಿ ಪಾಳೇಗಾರಿ ಸಂಸ್ಥಾನಗಳ ವ್ಯವಸ್ಥೆಯ ಸರ್ವಾಧಿಕಾರಿ ಪಾಳೇಗಾರಿ ಆಡಳಿತದ ಸಂಕೇತವಾಗಿದ್ದಾರೆ. ಶೇಖ್ ಅಬ್ದುಲ್ಲಾ ನಾಯಕರಾಗಿದ್ದ ನ್ಯಾಷನಲ್ ಕಾನ್ಫರೆನ್ಸ್, ಪಾಳೇಗಾರಿ ಆಡಳಿತ ಮತ್ತು ಬ್ರಿಟಿಷ್ ಪ್ರಭುತ್ವದ ವಿರುದ್ಧ ಜನತಾ ಆಂದೋಲನದ ನೇತೃತ್ವ ವಹಿಸಿತ್ತು. ಆ ಹೋರಾಟದ ಮುಂದುವರಿದ ಭಾಗವಾಗಿ 1931ರಲ್ಲಿ 22 ಜನರು ಹುತಾತ್ಮರಾದರು.

ಮಹಾರಾಜರ ಜನ್ಮದಿನವನ್ನು ಸರ್ಕಾರಿ ರಜೆ ಎಂದು ಘೋಷಿಸಿದ ಆಡಳಿತವು 2019ರ ಡಿಸೆಂಬರ್‌ನಿಂದ ಶೇಖ್ ಅಬ್ದುಲ್ಲಾರ ಜನ್ಮದಿನಾಚರಣೆಯನ್ನು ಸ್ಥಗಿತಗೊಳಿಸಿದೆ. ಸ್ವಾತಂತ್ರ್ಯದ ಸಂದರ್ಭದಲ್ಲಿ ಮಹಾರಾಜರ ಪಾತ್ರ ಸಂಶಯಾಸ್ಪದವಾಗಿತ್ತು. ರಾಜಪ್ರಭುತ್ವದ ರಾಜ್ಯಗಳು ಎರಡು ಸ್ವತಂತ್ರ ದೇಶಗಳಾದ ಭಾರತ ಅಥವಾ ಪಾಕಿಸ್ತಾನಕ್ಕೆ ಸೇರಲು ಮೌಂಟ್‌ಬ್ಯಾಟನ್ ಒಪ್ಪಂದ ಅವಕಾಶ ಕಲ್ಪಿಸಿತ್ತು. ರಾಜಪ್ರಭುತ್ವ ಆಡಳಿತದ ಅಂತ್ಯ ಹಾಗೂ ಪ್ರಜಾಸತ್ತಾತ್ಮಕ ಆಡಳಿತಕ್ಕಾಗಿ ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ನಡೆದ ಜನತಾ ಚಳವಳಿಯನ್ನು ದಮನಿಸಲು ದಬ್ಬಾಳಿಕೆ ಹರಿಬಿಟ್ಟ ಮಹಾರಾಜ, ಜಮ್ಮು ಮತ್ತು ಕಾಶ್ಮೀರ ಒಂದು ಸ್ವತಂತ್ರ ರಾಜ್ಯವಾಗಿ ಉಳಿಯಬೇಕೆಂದು ಬಯಸಿದ್ದರು; ಹೊಸ ಎರಡು ದೇಶಗಳ ಪೈಕಿ ಯಾವುದಕ್ಕೂ ಸೇರುವುದು ಬೇಡ ಎನ್ನುವುದು ಅವರ ನಿಲುವಾಗಿತ್ತು. 1947 ಅಕ್ಟೋಬರ್ 26ರಂದು ಮೌಂಟ್‌ಬ್ಯಾಟನ್‌ಗೆ ಬರೆದ ಪತ್ರದಲ್ಲಿ ಸ್ವತಃ ಮಹಾರಾಜ ಈ ಅಂಶವನ್ನು ಒಪ್ಪಿಕೊಂಡಿದ್ದಾರೆ. ಕಾಶ್ಮೀರವನ್ನು ಬಲವಂತದಿಂದ ವಶಪಡಿಸಿಕೊಳ್ಳಲು ಪಾಕಿಸ್ತಾನವು ಸಶಸ್ತ್ರ 'ಬುಡಕಟ್ಟು ಆಕ್ರಮಣಕೋರರನ್ನು' ಕಳಿಸಿದ ನಂತರ ಬರೆದ ಈ ಪತ್ರದ ಜೊತೆ ಮಹಾರಾಜ ಸೇರ್ಪಡೆ ಒಪ್ಪಿಗೆ ದಾಖಲೆಪತ್ರ (ಇನ್ಸ್ಟ್ರುಮೆಂಟ್ ಆಫ್ ಅಕ್ಸೆಶನ್) ವನ್ನೂ ಲಗತ್ತಿಸಿದ್ದರು. ಮಹಾರಾಜ ಶ್ರೀನಗರದಿಂದ ಜಮ್ಮುಗೆ ಓಡಿ ಹೋದಾಗ, ಆಕ್ರಮಣಕೋರರನ್ನು ಹೊಡೆದೋಡಿಸಲು ಭಾರತೀಯ ಸೇನೆಗೆ ನೆರವಾಗಿದ್ದು ಇದೇ ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದ ಜನತಾ ಪ್ರತಿರೋಧ. ಸ್ವತಂತ್ರ ರಾಜ್ಯದ ಬಗ್ಗೆ ಚಿಂತಿಸಿದ್ದ ಮಹಾರಾಜರಿಗೆ ಆರ್‌ಎಸ್‌ಎಸ್ ಮತ್ತು ನಂತರ, ಆರ್‌ಎಸ್‌ಎಸ್ ಕಾರ್ಯಕರ್ತರೇ ನಡೆಸುತ್ತಿದ್ದ ಪ್ರಜಾಪರಿಷದ್ ಬೆಂಬಲ ನೀಡಿತ್ತು. ಅವುಗಳು ಸ್ವತಂತ್ರ ರಾಜ್ಯ ನಿಲುವಿಗೆ ಬೆಂಬಲ ನೀಡಿದ್ದವು; ಹಾಗೂ ಭಾರತಕ್ಕೆ ಸೇರ್ಪಡೆಗೊಂಡ ನಂತರ ಕಾಶ್ಮೀರದಿಂದ ಜಮ್ಮುವನ್ನು ಬೇರ್ಪಡಿಸುವುದಕ್ಕೂ ಬೆಂಬಲ ಕೊಟ್ಟಿದ್ದವು. ಹಿಂದೆ ಬ್ರಿಟಿಷರ ಮಿತ್ರನಾಗಿದ್ದ ಈ ಮಹಾರಾಜನ ಜನ್ಮದಿನವನ್ನು ಸಾರ್ವಜನಿಕ ರಜೆಯಾಗಿ ಘೋಷಿಸಲಾಗಿದೆ. ಹಾಗೂ ಸರ್ವಾಧಿಕಾರಿ ರಾಜಪ್ರಭುತ್ವದ ವಿರುದ್ಧ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಹೋರಾಡಿದವರನ್ನು ಅಗೌರವಿಸಲಾಗುತ್ತಿದೆ. ಬಹುಸಂಖ್ಯಾತ ಮುಸ್ಲಿಮರ ಮೇಲೆ ಆಡಳಿತ ನಡೆಸಿದ್ದ ಎನ್ನುವುದು ಮಹಾರಾಜರನ್ನು ಗೌರವಿಸುವಲ್ಲಿ ಇರುವ ಒಂದು ನಿರ್ಣಾಯಕ ಅಂಶವಾಗಿ ಕಾಣಿಸುತ್ತದೆ. ಬ್ರಿಟಿಷರೊಂದಿಗೆ ಶಾಮೀಲಾದ ಮತ್ತು ಜಮ್ಮು ಮತ್ತು ಕಾಶ್ಮೀರ ಸ್ವತಂತ್ರ ರಾಜ್ಯವಾಗಬೇಕೆಂದು ಹೇಳಿದ ಹರಿ ಸಿಂಗ್ ಪರವಾಗಿ ಬಿಜೆಪಿ ವಕಾಲತ್ತು ವಹಿಸುತ್ತಿರುವುದಕ್ಕೂ ಹೈದರಾಬಾದ್‌ನ ನಿಜಾಮನ ಬಗ್ಗೆ ಅದು ತಳೆದಿರುವ ನಿಲುವಿಗೂ ಎದ್ದು ಕಾಣುವ ವಿರೋಧಾಭಾಸವಿದೆ. ಸೆಪ್ಟೆಂಬರ್ 17ರಂದು ತೆಲಂಗಾಣದಲ್ಲಿ ಬಿಜೆಪಿ 'ವಿಮೋಚನಾ ದಿನ' ಆಚರಿಸಿ ನಿಜಾಮನನ್ನು ಹೊರಗಟ್ಟಿದ ಸೇನಾ ಮಧ್ಯಪ್ರವೇಶವನ್ನು ಶ್ಲಾಘಿಸಿದೆ. ನಿಜಾಮ ಕೂಡ ಭಾರತಕ್ಕೆ ಸೇರಲು ನಿರಾಕರಿಸಿ ಸ್ವತಂತ್ರವಾಗಿ ಇರಬಯಸಿದ್ದ. ಇಬ್ಬರ ನಿಲುವುಗಳು (ಹರಿಸಿಂಗ್ ಮತ್ತು ನಿಜಾಮ) ಒಂದೇ ಬಗೆಯದ್ದಾದರೂ ಅದಕ್ಕೆ ಸಂಬಂಧಪಟ್ಟಂತೆ ಬಿಜೆಪಿ ತಾರತಮ್ಯದ ನಿಲುಮೆ ತಾಳಲು ಧರ್ಮವೇ ಕಾರಣವಾಗಿದೆ. ಮೊದಲನೆಯವರು ಹಿಂದು ಹಾಗೂ ಎರಡನೆಯವರು ಮುಸ್ಲಿಂ–ಆದರೆ ಇಬ್ಬರೂ ಬ್ರಿಟಿಷರ ಗುಲಾಮರೇ. ಸ್ವಾತಂತ್ರ್ಯದ ಸಂದರ್ಭದಲ್ಲಿ ರಾಜಪ್ರಭುತ್ವದ ಸಂಸ್ಥಾನಳಿಗೆ ಸಂಬಂಧಿಸಿ ಆರ್‌ಎಸ್‌ಎಸ್ ಮತ್ತು ಹಿಂದು ಮಹಾಸಭಾ ತಳೆದ ಧೋರಣೆ ಎದ್ದು ಕಾಣುವಂತಿದೆ. ಅವೆರಡೂ ಹಿಂದೂ ರಾಜಕುಮಾರರು ಮತ್ತು ಆಡಳಿತಗಾರರ ಕಟ್ಟಾ ಬೆಂಬಲಿಗರಾಗಿದ್ದವು. ರಾಜಪ್ರಭುತ್ವದ ಸಂಸ್ಥಾನಗಳಲ್ಲಿ ಸರ್ವಾಧಿಕಾರ ಹಾಗೂ ಬ್ರಿಟಿಷರ ವಿರುದ್ಧದ ಜನತಾ ಚಳವಳಿಗಳನ್ನು ಅವು ವಿರೋಧಿಸಿದ್ದವು. ಅವುಗಳು ಸ್ವತಂತ್ರ ಭಾರತದ ಹಿತಕ್ಕಿಂತ ಪಾಳೇಗಾರಿ ಆಡಳಿತಗಾರರ ಹಿತಾಸಕ್ತಿಗಳಿಗೆ ಆದ್ಯತೆ ನೀಡಿದ್ದವು. ತಿರುವಾಂಕೂರಿನ ಮಹಾರಾಜ ಸ್ವಾತಂತ್ರ್ಯ ಘೋಷಿಸಿಕೊಂಡಾಗ ಅದನ್ನು ಬೆಂಬಲಿಸಿ ವಿ.ಡಿ. ಸಾವರ್ಕರ್ ಟೆಲಿಗ್ರಾಂ ಕಳಿಸಿದ್ದು ವಾಸ್ತವ ಸಂಗತಿಯಾಗಿದೆ. 'ತಿರುವಾಂಕೂರಿನ ನಮ್ಮ ಹಿಂದೂ ರಾಜ್ಯವನ್ನು ಘೋಷಿಸುವಲ್ಲಿ ಕೈಗೊಳ್ಳಲಾದ ಕೆಚ್ಚೆದೆಯ ಸಂಕಲ್ಪ'ವನ್ನು ಅವರು ಬೆಂಬಲಿಸಿದ್ದರು. ಹೈದರಾಬಾದ್‌ನ ಮುಸ್ಲಿಂ ಆಡಳಿತಗಾರನು ಸ್ವತಂತ್ರ ರಾಜ್ಯ ಘೋಷಣೆ ಮಾಡಿದ್ದಕ್ಕೆ ಪ್ರತಿಯಾಗಿ ಇದೊಂದು ದಿಟ್ಟತನದ ಕ್ರಮ ಎಂಬುದು ಸಾವರ್ಕರ್ ಅಭಿಪ್ರಾಯವಾಗಿತ್ತು. ಬಿಜೆಪಿ ಆಡಳಿತಗಾರರಲ್ಲಿ ಪಾಳೇಗಾರಿ–ಪರ, ಸಾಮ್ರಾಜ್ಯಶಾಹಿ ಪರವಾದ ಈ ನಿಲುವೇ ಇನ್ನೂ ಇದೆ. ಐತಿಹಾಸಿಕವಾಗಿ ಮಹತ್ವದ ದಿನಗಳನ್ನು ಮತ್ತು ಸರ್ವಾಧಿಕಾರದ ವಿರುದ್ಧ, ಪ್ರಜಾಪ್ರಭುತ್ವಕ್ಕಾಗಿ ಕಾಶ್ಮೀರಿ ಜನರು ನಡೆಸಿದ ಹೋರಾಟಗಳನ್ನು ದಮನಿಸುವುದು ಕಣಿವೆಯ ಜನರ ಮತದಾನದ ಹಕ್ಕನ್ನು ವಂಚಿಸುವುದು ಹಾಗೂ ರಾಜಕೀಯವಾಗಿ ಮೂಲೆಗುಂಪು ಮಾಡುವ ಹುನ್ನಾರದ ಒಟ್ಟಾರೆ ಯೋಜನೆಯ ಭಾಗವಾಗಿದೆ. ಅಸೆಂಬ್ಲಿ ಸ್ಥಾನಗಳ ಪುನರ್‌ವಿಂಗಡಣೆ ಮತ್ತು ವಾಸಸ್ಥಳ ಸ್ಥಾನಮಾನ (ಡೊಮಿಸೈಲ್ ಸ್ಟೇಟಸ್) ಅಂಶಗಳನ್ನು ಗಮನಿಸುವಾಗ ಇದು ಸ್ಪಷ್ಟವಾಗುತ್ತದೆ. ಏಕೀಕೃತ ಜಮ್ಮು ಮತ್ತು ಕಾಶ್ಮೀರವನ್ನು ಮೂರು ಭಾಗವಾಗಿ ಮಾಡುವ ಆರ್‌ಎಸ್‌ಎಸ್‌ನ ಹಳೆಯ ಯೋಜನೆ ಈಗ ಸುಧಾರಿತ ರೀತಿಯಲ್ಲಿ ಜಾರಿಗೆ ಬಂದಿದೆ. ಇವೆಲ್ಲವೂ ಮುಂದಿನ ದಿನಗಳಲ್ಲಿ ವ್ಯಾಪಕ ಸಂಘರ್ಷ ಮತ್ತು ಆಳವಾದ ಸಮಸ್ಯೆಗಳ ಬೀಜಗಳನ್ನು ಬಿತ್ತಲಿದೆ.

ಅನು: ವಿಶ್ವ

ಭೂಸ್ವಾಧೀನ ವಿರೋಧಿಸಿ ವಿಧಾನಸೌಧದೆದುರು ರೈತರ ಹೋರಾಟ

ಪುಟ 4 ರಿಂದ

ಕುತಂತ್ರಗಳನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ರಾಜ್ಯ ಸರ್ಕಾರವನ್ನು ಮಣಿಸಲು ದೀರ್ಘ ಹೋರಾಟವನ್ನು ನಡೆಸಲು ಸಿದ್ಧರಾಗಿದ್ದಾರೆ.

ಹಕ್ಕೊತ್ತಾಯಗಳು:

1. ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1777 ಎಕರೆ ಐಟಿಐಆರ್‌ಗಾಗಿ ಯೋಜಿಸಿರುವ ಕುಂದಾಣ ಹೋಬಳಿಯ 4 ಹಳ್ಳಿಗಳ 867 ಎಕರೆ, ದೊಡ್ಡಬಳ್ಳಾಪುರ, ಕಸಬಾ ಹೋಬಳಿ, 4 ಹಳ್ಳಿಗಳ 1031 ಎಕರೆ ಭೂಸ್ವಾಧೀನ ಪ್ರಕ್ರಿಯೆಯನ್ನು ಕೂಡಲೇ ರದ್ದು ಪಡಿಸಬೇಕು.
2. ರೈತರ ಮೇಲೆ ಆಗಸ್ಟ್15ರ ಸ್ವತಂತ್ರ್ಯ ದಿನಾಚರಣೆಯಂದು ನಡೆದಿರುವ ಅಮಾನವೀಯ ಪೋಲಿಸ್ ದೌರ್ಜನ್ಯಕ್ಕೆ ನೈತಿಕ ಹೊಣೆ ಹೊತ್ತು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸುಧಾಕರ್ ರಾಜೀನಾಮೆ ನೀಡಬೇಕು.
3. ಕೆಐಎಡಿಬಿ ಸಂಸ್ಥೆಯನ್ನು ರಿಯಲ್ ಎಸ್ಟೇಟ್ ಸಂಸ್ಥೆಯನ್ನಾಗಿ ಮಾರ್ಪಡಿಸಿ ರೈತರಿಗೆ ದ್ರೋಹ ಮಾಡುತ್ತಿರುವ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯನ್ನು ಮಂತ್ರಿಮಂಡಲದಿಂದ ಕೈ ಬಿಡಬೇಕು.
4. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭೂ ಸ್ವಾಧೀನ ಮಾಡಿರುವ ಭೂಮಿಯ ಬಳಕೆ, ಕೈಗಾರಿಕೆಗಳ ಸ್ಥಾಪನೆ, ಉದ್ಯೋಗಗಳ ನೀಡಿಕೆ ಇತ್ಯಾದಿ ವಿವರಗಳನ್ನು ಒಳಗೊಂಡ ಶ್ವೇತಪತ್ರವನ್ನು ರಾಜ್ಯ ಸರ್ಕಾರ ಕೂಡಲೇ ಬಿಡುಗಡೆ ಮಾಡಬೇಕು ಮತ್ತು ಅಲ್ಲಿಯವರೆಗೆ ರಾಜ್ಯದಲ್ಲಿ ಯಾವುದೇ ಸ್ವಾದೀನ ಪ್ರಕ್ರಿಯೆಗೆ ಕೈ ಹಾಕಬಾರದು.
5. ಆಗಸ್ಟ್ 15 ರ ಪೊಲೀಸರ ದೌರ್ಜನ್ಯಕ್ಕೊಳಗಾದ ರೈತರನ್ನು ಬಹಿರಂಗವಾಗಿ ಸರ್ಕಾರ ಕ್ಷಮೆಯಾಚಿಸಬೇಕು ಮತ್ತು 71 ಜನ ರೈತರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ತಕ್ಷಣ ಹಿಂಪಡೆಯಬೇಕು.
6. ರೈತರ ಮೇಲೆ ದೌರ್ಜನ್ಯಕ್ಕೊಳಗಾದ ರೈತರನ್ನು ಬಹಿರಂಗವಾಗಿ ಸರ್ಕಾರ ಕ್ಷಮೆಯಾಚಿಸಬೇಕು ಮತ್ತು 71 ಜನ ರೈತರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ತಕ್ಷಣ ಹಿಂಪಡೆಯಬೇಕು.
7. ರೈತರ ಮೇಲೆ ದೌರ್ಜನ್ಯ ನಡೆಸಿದ ಚನ್ನರಾಯಪಟ್ಟಣ ಮತ್ತು ದೇವನಹಳ್ಳಿ ಪೋಲಿಸರನ್ನು ಅಮಾನತ್ತುಗೊಳಿಸಬೇಕು.
8. ಮೇಲಿನ ಎಲ್ಲ ಒತ್ತಾಯಗಳನ್ನು ಕೂಡಲೇ ಮುಖ್ಯಮಂತ್ರಿಗಳು ಮಧ್ಯಪ್ರವೇಶ ಮಾಡಿ ಇತ್ಯರ್ಥ ಪಡಿಸಬೇಕು.

ಚಂದ್ರತೇಜಸ್ವಿ, ದೊಡ್ಡಬಳ್ಳಾಪುರ

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯ ದುರ್ಬಳಕೆ ವಿರುದ್ಧ ಕರಾವಳಿ ಜಿಲ್ಲೆಗಳಲ್ಲಿ ಪ್ರತಿಭಟನೆ:

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯನ್ನು ನಿಜವಾದ ಕಟ್ಟಡ ಕಾರ್ಮಿಕರ ಪ್ರಯೋಜನಕ್ಕಾಗಿ ಬಳಸುವ ಬದಲು ಕೊಳಚೆ ನಿರ್ಮಾಲನ ಮಂಡಳಿ ಸೇರಿ ಇತರ ವಸತಿ ಯೋಜನೆಗಳ ಫಲಾನುಭವಿಗಳಿಗೆ ವರ್ಗಾಯಿಸುವ ರಾಜ್ಯ ಸರಕಾರದ ಪ್ರಸ್ತಾವವನ್ನು ಖಂಡಿಸಿ ಹಾಗೂ ಕಟ್ಟಡ ಕಾರ್ಮಿಕ ಇತರ ಬೇಡಿಕೆಗಳನ್ನು ಆಗ್ರಹಿಸಿ, ರಾಜ್ಯ ಸಂಘಟನೆಯ ಕರೆಯ ಮೇರೆಗೆ ಕಟ್ಟಡ ಕಾರ್ಮಿಕರು ಸಪ್ಟೆಂಬರ್ 22 ರಂದು ಪ್ರತಿಭಟನೆ ನಡೆಸಿದರು.

ಮಂಗಳೂರಿನ ಕಾರ್ಮಿಕ ಆಯುಕ್ತರ ಕಚೇರಿ ಮುಂದೆ ದ.ಕ.ಜಿಲ್ಲಾ ಕಟ್ಟಡ ಕಾರ್ಮಿಕರ ಫೆಡರೇಶನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಫೆಡರೇಶನ್ನಿನ ಜಿಲ್ಲಾಧ್ಯಕ್ಷ ವಸಂತ ಆಚಾರಿ, ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಕಾರ್ಮಿಕ ಮುಖಂಡರಾದ ಸುಕುಮಾರ್, ಕೆ.ಪಿ.ಜಾನಿ ಮಾತನಾಡಿದರು.

ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಉಡುಪಿ ಜಿಲ್ಲಾ ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಂಘದ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಸಂಘದ ಅಧ್ಯಕ್ಷ ಶೇಖರ ಬಂಗೇರ, ಮುಖಂಡರಾದ ಶಶಿಧರ ಗೊಲ್ಲ, ರಾಮ ಕರ್ಕೇರ ಉಪಸ್ಥಿತರಿದ್ದರು.

ಕುಂದಾಪುರ ತಾಲೂಕು ಕಚೇರಿ ಎದುರು ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಂಘದ ತಾಲೂಕು ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು. ಸಂಘದ ಮುಖಂಡರುಗಳಾದ ಚಿಕ್ಕ ಮೊಗವೀರ, ಸಂತೋಷ್ ಹೆಮ್ಮಾಡಿ, ಜಿಲ್ಲಾ ಮುಖಂಡರಾದ ಎಚ್.ನರಸಿಂಹ, ಚಂದ್ರಶೇಖರ್ ವಿ. ಉಪಸ್ಥಿತರಿದ್ದರು.

ಬಾಗೇಪಲ್ಲಿಯಲ್ಲಿ ರಾರಾಜಿಸಿದ ಕೆಂಬಾವುಟಗಳು



ಸೌಹಾರ್ದ, ಸಮೃದ್ಧ, ಜನತಾ ಕರ್ನಾಟಕ ನಿರ್ಮಾಣ, ಜನಪರ ಪರ್ಯಾಯಕ್ಕಾಗಿ ಜನಾಂದೋಲನದ ಘೋಷಣೆ

ಆರ್.ಎಸ್.ಎಸ್. ಪ್ರಯೋಗ ಶಾಲೆಯಾದ ಕರ್ನಾಟಕ
–ಪಿಣರಾಯ ಟೀಕೆ

ಗುರುರಾಜ ದೇಸಾಯಿ

ಸೆಪ್ಟಂಬರ್ 18 ರಂದು ಬಾಗೇಪಲ್ಲಿ ಪಟ್ಟಣದಲ್ಲಿ ಎತ್ತ ತಿರುಗಿದರೂ ಬಹು ದೂರದ ವರೆಗೆ ಕೆಂಬಾವುಟ ಕಾಣುತ್ತಿತ್ತು. "ಕೋಮುವಾದ ಅಳಿಯಲಿ, ಸೌಹಾರ್ದತೆ ಉಳಿಯಲಿ" ಎಂಬ ಘೋಷಣೆ ಪ್ರತಿಯೊಬ್ಬರ ಬಾಯಲ್ಲಿ ಝೇಂಕರಿಸುತ್ತಿತ್ತು. 25 ಸಾವಿರಕ್ಕೂ ಹೆಚ್ಚು ಜನರಿರುವ ಮೆರವಣಿಗೆ, ಪ್ರತಿಯೊಬ್ಬರ ಕೈಯಲ್ಲಿ ಬಾವುಟ ಹಾರಾಟ ನೋಡಲು ಥೇಟ್ ಕೆಂಪು ಸಾಗರದಂತೆ ಕಂಡು ಬಂದಿತು.

ಹೌದು ಇಂತಹದ್ದೊಂದು ಕಾರ್ಯಕ್ರಮಕ್ಕೆ ಬಾಗೇಪಲ್ಲಿ ಸಾಕ್ಷಿಯಾಗಿತ್ತು, ಆಯೋಜಿಸಿದ್ದ "ಸೌಹಾರ್ದ, ಸಮೃದ್ಧ, ಜನತಾ ಕರ್ನಾಟಕ" ರಾಜ್ಯ ಮಟ್ಟದ ಸಮಾವೇಶವನ್ನು ಸಿಪಿಐ(ಎಂ) ಆಯೋಜಿಸಿತ್ತು. ಈ ಸಮಾವೇಶದಲ್ಲಿ ಕೇರಳದ ಮುಖ್ಯಮಂತ್ರಿ, ಪಿ.ಬಿ.ಸದಸ್ಯರಾದ ಪಿಣರಾಯಿ ವಿಜಯನ್ ಪ್ರಧಾನ ಭಾಷಣಕಾರರಾಗಿದ್ದರು. ಸುದೀರ್ಘವಾಗಿ ಮಾತನಾಡಿದ ಅವರ ಮಾತುಗಳು ಈ ಕೆಳಗಿನಂತಿವೆ.

ಮೊದಲು ಕನ್ನಡದಲ್ಲೇ ಭಾಷಣ ಪ್ರಾರಂಭಿಸಿದ ಪಿಣರಾಯಿ ವಿಜಯನ್, ಬಿಜೆಪಿ ಸರ್ಕಾರದ ಬಗ್ಗೆ ವಾಗ್ದಾಳಿ ನಡೆಸಿದ್ರು. ಗತಕಾಲದಲ್ಲಿ ಈ ಭೂಮಿ ಪ್ರಗತಿಪರ ಚಳುವಳಿಗೆ ತವರೂರಾಗಿತ್ತು. ಜಾತಿ ವ್ಯವಸ್ಥೆ, ಅಸಮಾನತೆ, ದಲಿತರ ಶೋಷಣೆಗಳ ವಿರುದ್ದ ಹೋರಾಡಿದ್ದ ಪ್ರಗತಿಪರ ಶಕ್ತಿಗಳ ಭೂಮಿ ಇದು. ಕೋಮುವಾದಿ ಶಕ್ತಿಗಳ ಬೆಳವಣಿಗೆ ಕರ್ನಾಟಕಕ್ಕೆ ಮಾರಕವಾಗಿದ್ದು, ಕೋಮುವಾದಿಗಳ ಬೆಳವಣಿಗೆಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೇ ಕಿತ್ತುಕೊಂಡಿದ್ದಾರೆ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು.

ರಾಜ್ಯದಲ್ಲಿ ನಡೆದ ಸಾಹಿತಿ ಗೌರಿ ಲಂಕೇಶ್ ರ ಕೊಲೆ, ಕೆ.ಎಸ್.ಭಗವಾನ್ಗೆ ಕಿರುಕುಳ, ಪ್ರೋ.ಯು.ಆರ್ ಅನಂತಮೂರ್ತಿ ರಂತಹ ಜ್ಞಾನಿಗಳು ಸಂಘಪರಿವಾರದಿಂದ ಬಹಳಷ್ಟು ನೋವನ್ನು ಅನುಭವಿಸಿದ್ದಾರೆ. ಇವರಿಗೆ ಪಾಕಿಸ್ತಾನಕ್ಕೆ ಟಿಕೆಟ್ ಕೊಟ್ಟು ಕಳಿಸಿದ ಇತಿಹಾಸ ಮರೆಯೋ ಹಾಗಿಲ್ಲ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಇನ್ನೂ ಉತ್ತರ ಭಾರತದಲ್ಲಿ ಕೋಮು ಶಕ್ತಿಗಳ ಉಪಟಳ ಅತಿಯಾಗಿ ನಡೆಯುತ್ತಿದೆ. ಪಠ್ಯಪುಸ್ತಕಗಳನ್ನು ಕಾವೀಕರಣ ಮಾಡುತ್ತಿದ್ದಾರೆ. ಆರನೇ ತರಗತಿಯಲ್ಲಿ ಸಂಘ ಪರಿವಾರದ ಹೆಗಡೆವಾರ್ ವಿಷಯ ಸೇರ್ಪಡೆ ಕುತಂತ್ರ. ಹತ್ತನೇ ತರಗತಿಯ ಪಠ್ಯಪುಸ್ತಗಳಲ್ಲಿ ಭಗತ್ ಸಿಂಗ್ ಕಥಾ ಭಾಗ ತೆಗೆದು ಹಾಕಿದ್ದಾರೆ. ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ಬಿಜೆಪಿಯವರ ಕರಾಳ ಮುಖ ತೋರಿಸುತ್ತಿದೆ. ಹಿಜಾಬ್ ಹೆಸರಿನಲ್ಲಿ ಗಲಾಟೆ ಹುನ್ನಾರ ಇದರ ಭಾಗವಾಗಿದೆ. ಕೋಮುವಾದ ಧ್ರುವೀಕರಣ ಇದಕ್ಕೆಲ್ಲ ಕಾರಣ. ಅಲ್ಪಸಂಖ್ಯಾತರ ಮೇಲೆ ಅಧಿಕಾರ ದುರ್ಬಳಕೆ, ಹಿಂದು ಐಕ್ಯ ವೇದಿಕೆಗಳು ಕೋಮುವಾದಿಗಳ ಫ್ಯಾಕ್ಟರಿ ಆಗ್ತಾ ಇದೆ, ಲವ್ ಜಿಹಾದಿ ಅಪವಾದ ಪ್ರಚಾರಗಳು ಸಂಘ ಪರಿವಾರದ ಪ್ರಮುಖ ಭಾಗಗಳಾಗಿವೆ ಎಂದರು.

ಕೋಮುವಾದ ವಿರುದ್ದ ಹೋರಾಟ ಮಾಡದೇ ಹೋದಲ್ಲಿ ರಾಜ್ಯ, ದೇಶದ ಜನರಿಗೆ ಅಪಾಯ ತಪ್ಪಿದ್ದಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಂಘಪರಿವಾರ ಧ್ವಂಸಗೊಳಿಸುತ್ತಿದೆ. ಸಂಕುಚಿತ ರಾಷ್ಟ್ರವಾದ, ರಾಷ್ಟ್ರ ಪ್ರೇಮ ಅಂದ್ರೆ ಹಿಂದುತ್ವ ಪ್ರೇಮ ಎಂಬ ಕಲ್ಪನೆ ಮೂಡಿಸುತ್ತಿದ್ದಾರೆ. ರಾಷ್ಟ್ರೀಯತೆ ಕೆಲವು ವ್ಯಕ್ತಿಗಳು ಬಂಡವಾಳ ಮಾಡಿಕೊಂಡಿದ್ದಾರೆ. ಗುಲಾಮರಂತೆ ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದವರೆಲ್ಲ ದೇಶ ಪ್ರೇಮಿಗಳು, ದೇಶಪ್ರೇಮದ ಹೆಸರಲ್ಲಿ ಕಾರ್ಪೋರೇಟರ್ ಗಳನ್ನು ಬೆಳೆಸಿ ಅಸಮಾನತೆಗೆ ನಾಂದಿಹಾಡ್ತಿದ್ದಾರೆಂದು ಕೇರಳ ಸಿಎಂ ದೂರಿದರು. ಕೇಂದ್ರ ಸರ್ಕಾರ, ಕೇರಳ ಸರ್ಕಾರಕ್ಕೆ ನಿರಂತರವಾಗಿ ಕಿರುಕುಳ ನೀಡುತ್ತಿದೆ. ಕೇರಳದಂತೆ ದೇಶದ ಮತ್ತಿತರೆ ರಾಜ್ಯಗಳಿಗೂ ತೊಂದರೆ ಕೊಡುತ್ತಿದೆ ಎಂದು ಆರೋಪಿಸಿದರು.

"ಪಿಎಫ್ಐ ಮತ್ತು ಎಸ್ಡಿಪಿಐನಂತಹ ರಾಜಕೀಯ ಸಂಘಟನೆಗಳಿವೆ, ಅದು ಕೇವಲ ಕೋಮು ಧ್ರುವೀಕರಣದ ಮೇಲೆ ಕೇಂದ್ರೀಕರಿಸುತ್ತದೆ. ಅವುಗಳು ಕೂಡ ಅಪಾಯಗಳೇ. ಅಲ್ಪಸಂಖ್ಯಾತ ಕೋಮುವಾದವು ಬಹುಸಂಖ್ಯಾತ ಕೋಮುವಾದವನ್ನು ಸೋಲಿಸಲು ಸಾಧ್ಯವಿಲ್ಲ. ಆದರೆ, ಜನರನ್ನು ಮತ್ತಷ್ಟು ವಿಭಜಿಸುತ್ತಲೇ ಇದೆ. ಜನರ ಆಂದೋಲನದಿಂದ ಮಾತ್ರ ಈ ವಿಭಜನೆಯನ್ನು ತಡೆಯಲು ಸಾಧ್ಯ" ಆ ನಿಟ್ಟಲ್ಲಿ ಎಲ್ಲರೂ ಸಜ್ಜಾಗಬೇಕು ಎಂದು ಕರೆ ನೀಡಿದರು.

ಪೊಲಿಟ್ ಬ್ಯೂರೊ ಸದಸ್ಯ ಬಿ.ವಿ ರಾಘವಲು ಮಾತನಾಡಿ, ಸದನದಲ್ಲಿ ಕಮ್ಯುನಿಸ್ಟ್ ಪಕ್ಷದ ಶಾಸಕರು ಇರಬೇಕು. ಅಂತಹ ವಾತವಾರಣ ಬಾಗೇಪಲ್ಲಿಯಲ್ಲಿ ಇದೆ. ಈ ಹಿಂದೆ ಇಲ್ಲಿ ಗೆದ್ದ ಸಿಪಿಐಎಂ ಶಾಸಕರು ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂದರು. ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರನ್ನು ನೆನಪಿಸಿಕೊಂಡ ಅವರು, ಅವರು ಶಾಸಕರಾಗಿದ್ದಾಗ ಶಿಕ್ಷಣ, ಆರೋಗ್ಯ, ಬಡವರಿಗೆ ಮನೆ, ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಿದರು. ಶಾಶ್ವತ ನೀರಾವರಿ ಹೋರಾಟವನ್ನು ರೂಪಿಸಿದ ನಾಯಕ ಎಂದು ಸ್ಮರಿಸಿದರು.

ಸಿಪಿಎಂ ರಾಜ್ಯ ಕಾರ್ಯದರ್ಶಿ ಯು.ಬಸವರಾಜು ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಸರ್ಕಾರದಿಂದ ಸೌಹಾರ್ದಕ್ಕೆ ಧಕ್ಕೆ ಬರುತ್ತಿದೆ. ರಾಜ್ಯದಲ್ಲಿ ಕೋಮುಗಲಭೆಗೆ ಮೃತಪಟ್ಟ ಹಿಂದೂಗಳ ಮನೆಗಳಿಗೆ ಮುಖ್ಯಮಂತ್ರಿ ಭೇಟಿ ನೀಡಿ ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದರು. ಪರಿಹಾರಧನ ನೀಡಿದರು. ಆದರೆ ಕೋಮುಗಲಭೆಯಿಂದ ಮೃತರಾದ ಮುಸ್ಲಿಮರ ಮನೆಗಳಿಗೆ ಮುಖ್ಯಮಂತ್ರಿ ಭೇಟಿಯನ್ನೇ ನೀಡಿಲ್ಲ. ಮುಖ್ಯಮಂತ್ರಿಯೇ ಈ ರೀತಿ ತಾರತಮ್ಯ ಮಾಡಿದರೆ ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು. 'ವಿಧಾನಸಭೆಯಲ್ಲಿ ಜನರ ಪರವಾಗಿ ಧ್ವನಿ ಎತ್ತುವ ಶಾಸಕರು ಇಲ್ಲ. 2023ರ ವಿಧಾನಸಭಾ ಚುನಾವಣೆಯಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಸಿಪಿಎಂ ಅಭ್ಯರ್ಥಿಯನ್ನು ಗೆಲ್ಲಿಸಿ' ಎಂದು ಬಸವರಾಜ ಕೋರಿದರು.

ವೇದಿಕೆಯ ಮೇಲೆ ಪೊಲಿಟ್ ಬ್ಯುರೊ ಸದಸ್ಯರಾದ ಎಂ.ಎ. ಬೇಬಿ, ಕೇಂದ್ರ ಸಮಿತಿ ಸದಸ್ಯ, ಕೆ.ಎನ್.ಉಮೇಶ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿ, ಕೆ.ನೀಲಾ, ಜಿ.ನಾಗರಾಜ, ಮೀನಾಕ್ಷಿ ಸುಂದರಂ, ಗೋಪಾಲಕೃಷ್ಣ ಅರಳಹಳ್ಳಿ, ಎಂ.ಪಿ. ಮುನಿವೆಂಕಟಪ್ಪ, ಜಿ.ಸಿ.ಬಯ್ಯಾರೆಡ್ಡಿ, ಡಾ. ಕೆ.ಪ್ರಕಾಶ್, ಸಯ್ಯದ್ ಮುಜೀಬ್, ಯಾಧವ ಶೆಟ್ಟಿ, ಜಿಲ್ಲಾ ಮುಖಂಡರಾದ ಡಾ. ಅನೀಲ್ ಕುಮಾರ್, ಮಹಮ್ಮದ್ ಅಕ್ರಂ, ಮಂಜುನಾಥ ರೆಡ್ಡಿ ಸೇರಿದಂತೆ ಅನೇಕರು ವೇದಿಕೆಯ ಮೇಲಿದ್ದರು.

ಆಕರ್ಷಕ ಮೆರವಣಿಗೆ: ಗೂಳೂರು ವೃತ್ತದಿಂದ ಬೆಳಿಗ್ಗೆ 11.30ರ ವೇಳೆಗೆ ಪಕ್ಷದ ಕಾರ್ಯಕರ್ತರ ಮೆರವಣಿಗೆ ಆರಂಭವಾಯಿತು. ಮೂರು ಕಿ.ಮಿ ವರೆಗೆ ಬೃಹತ್ ಮೆರವಣಿಗೆ ನಡೆಯಿತು. ಮೆರವಣಿಗೆಯುದ್ದಕ್ಕೂ ಕಾರ್ಯಕರ್ತರು ಘೋಷಣೆಗಳನ್ನು ಮೊಳಗಿಸಿದರು. ಕಲಾವಿದರು ಕ್ರಾಂತಿಗೀತೆ, ನೃತ್ಯದ ಮೂಲಕ ಮೆರವಣಿಗೆಗೆ ಮೆರಗು ತಂದರು. ಎಲ್ಲಿ ನೋಡಿದರೂ ಕೆಂಬಾವುಟ, ಕೆಂಪು ಟೋಪಿ ಹಾಕಿದ ಕಾರ್ಯಕರ್ತರ ಪಡೆ ಎದ್ದು ಕಾಣುತ್ತಿತ್ತು. ಅಕ್ಷರಶಃ ಅಂದು ಬಾಗೇಪಲ್ಲಿ ಸಂಪೂರ್ಣವಾಗಿ ಕೆಂಪಾಗಿತ್ತು.

ಸುಡುವ ಬಿಸಿಲಿನಲ್ಲಿ ಭಾಷಣ ಕೇಳಿದ ಕಾರ್ಯಕರ್ತರು: ಪಿಣರಾಯ್ ವಿಜಯನ್ ವೇದಿಕೆಗೆ ಬರುವ ವೇಳೆಗೆ ಮಧ್ಯಾಹ್ನ 1 ಗಂಟೆ ಆಗಿತ್ತು. ಬಿಸಿಲು ತೀವ್ರವಾಗಿತ್ತು.ಪಿಣರಾಯ್ ವಿಜಯನ್ ಸುದೀರ್ಘವಾಗಿ ಒಂದೂಕಾಲು ಗಂಟೆಗೂ ಮೀರಿ ಮಾತನಾಡಿದರು. ನೆತ್ತಿಯ ಮೇಲೆ ಸೂರ್ಯ ಸುಡುತ್ತಿದ್ದರು ಜನರ ಉತ್ಸಾಹ ಕಮ್ಮಿ ಆಗಿರಲಿಲ್ಲ. ಪಿಣರಾಯ್ ವಿಜಯನ್ ರವರು ಮಲೆಯಾಳಂನಲ್ಲಿ ಮಾಡಿದ ಭಾಷಣವನ್ನು ಮಂಜೇಶ್ವರದ ಶ್ಯಾಂ ಭಟ್ ಕನ್ನಡಕ್ಕೆ ತರ್ಜುಮೆ ಮಾಡಿದರು.









ಅಂಗನವಾಡಿ ನೌಕರರ ಸಂಘದ 8ನೇ ರಾಜ್ಯ ಸಮ್ಮೇಳನ
ಮಕ್ಕಳು ಮತ್ತು ಮಹಿಳೆಯರಿಗೆ ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿ ಒತ್ತಾಯ

ವರದಿ: ಯಮುನಾ ಗಾಂವ್ಕರ್

ಮಕ್ಕಳು ಮತ್ತು ಮಹಿಳೆಯರಿಗೆ ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿ ಒತ್ತಾಯಿಸಿ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ 8ನೇ ರಾಜ್ಯ ಸಮ್ಮೇಳನವು 2022ರ ಸೆಪ್ಟಂಬರ್ 9, 10, 11ರವರೆಗೆ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಕಾ. ಮಾರುತಿ ಮಾನ್ಪಡೆ ನಗರದಲ್ಲಿ ನಡೆಯಿತು.

ಸಮ್ಮೇಳನದ ಬಾಗವಾಗಿ ಆಕರ್ಷಕ ಮೆರವಣಿಗೆಯೊಂದಿಗೆ ಆರಂಭವಾದ ಬೃಹತ್ ಬಹಿರಂಗ ಸಭೆಯನ್ನು ಉದ್ಘಾಟಿಸಿ ಎ.ಆರ್.ಸಿಂಧು ಅವರು ಮಾತನಾಡಿದರು.

ಭಾರತದಲ್ಲಿ ಐಸಿಡಿಎಸ್ ಚೆನ್ನಾಗಿ ನಡೆಯುತ್ತಿದೆ ಎಂದು ಅನೇಕ ಸರ್ವೆಗಳು ಹೇಳಿವೆ. ಭಾರತದ ಮಕ್ಕಳು ವಿಶ್ವದಲ್ಲಿ ಅತಿಹೆಚ್ಚು ಜನ ಅಪೌಷ್ಟಿಕತೆಯಿಂದ ಇದ್ದಾರೆಂದು ಅವರಿಗೆ ಅಂಗನವಾಡಿ ಸೇವೆ ಅಗತ್ಯ ಎಂದೂ ಹೇಳಿವೆ. ಆದರೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್ ಡಿಎ ಅಧಿಕಾರಕ್ಕೆ ಬಂದ ಮೇಲೆ ಸತತವಾಗಿ ಅನುದಾನ ಕಡಿತವಾಗಿದೆ ಮಾತ್ರವಲ್ಲ ಅದೇವೇಳೆ ವಿಶ್ವದ ಹಲವಾರು ಕಂಪನಿಗಳು ಭಾರತದ ಮಕ್ಕಳ ಗುರಿಯಾಗಿಸಿ ಲಾಭದ ಆಸೆಗೆ ಕೂಡ ತಮ್ಮ ಕಂಪನಿಗಳ, ಟ್ರಸ್ಟ್ ಗಳ ಮೂಲಕ ಮೂಗುತೂರಿಸಲು ಪ್ರಯತ್ನ ಸಾಗಿಸಿದ್ದಾರೆ. ದೇಶದ ಭವಿಷ್ಯ ರೂಪಿಸುವವರು ನಾವು ಎಂದು ಹೇಳಿಕೊಳ್ಳುವ ರಾಜಕರಣಿಗಳು ಅದನ್ನು ಸಾಧಿಸಲು ಏನು ಮಾಡುತ್ತಿದ್ದಾರೆಂದರೆ ಈ ಖಾಸಗಿ ಕಂಪನಿಗಳ ಸಾಕಿ ಸಲಹುತ್ತಿದ್ದಾರೆ.

ಆದರೆ, ನಾವು ಕೇವಲ ತಾಯಿ–ಮಗು ಆರೈಕೆಯ ಬಗ್ಗೆ ಅಷ್ಟೇ ಯೋಚಿಸುತ್ತಿಲ್ಲ. ಬದಲಾಗಿ ಈ ದೇಶವನ್ನು ಅತ್ಯಂತ ಎತ್ತರಕ್ಕೆ ಕೊಂಡೊಯ್ಯುವಲ್ಲಿ ನಮ್ಮ ಕಾರ್ಯ ಅಡಗಿದೆ. ದೇಶದ ಭವಿಷ್ಯದ ದೃಷ್ಟಿಯಲ್ಲಿಟ್ಟುಕೊಂಡು ಯಾವು ಯೋಚಿಸುತ್ತಿದ್ದೇವೆ. ಅಂಗನವಾಡಿ ನೌಕರರು ಇದರ ಭಾಗವಾಗಿ ಕೈಜೋಡಿಸಿ ಶ್ರಮಿಸುತ್ತಿದ್ದಾರೆ.

ನಮ್ಮ ದೇಶದಲ್ಲಿ ಅಪೌಷ್ಟಿಕತೆ ಹೆಚ್ಚಾಗಿದೆ, ಜಗತ್ತಿನಲ್ಲಿ ಅಪೌಷ್ಟಿಕತೆಯಿಂದಿರುವ ಮಕ್ಕಳಲ್ಲಿ ಭಾರತದಲ್ಲಿಯೇ ಆರ್ಧದಷ್ಟು ಮಕ್ಕಳು ಇದ್ದಾರೆ. ಈ ವಿಷಯವಾಗಿ ಸರ್ಕಾರ ಕೇವಲ ಯೋಜನೆಗಳನ್ನು ರೂಪಿಸಿದರೆ ಸಾಲದು, ಸರಿಯಾದ ರೀತಿಯಲ್ಲಿ ಅವುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನೆಡೆಗೆ ಕೆಲಸ ನಿರ್ವಹಿಸಬೇಕಾದದ್ದು ಆದ್ಯ ಕರ್ತವ್ಯವಾಗಿದೆ ಎಂದರು.

ಜನತೆಗೆ ಒದಗಿಸಬೇಕಾದ ಮಹತ್ವದ ಸೇವೆಗಳಲ್ಲಿ ಅಂಗನವಾಡಿಗಳು ತೀರಾ ಮಹತ್ವದ ಪಾತ್ರವೆಂದು ಪರಿಗಣಿಸಿ ಸ್ವತಃ ದೇಶದ ಪ್ರಧಾನ ಮಂತ್ರಿಗಳೇ ಅಂಗನವಾಡಿ ನೌಕರರನ್ನು ಕೋವಿಡ್ ತಡೆಗಟ್ಟುವ "ಯೋಧರು" ಎಂಬ ಹೆಸರಿನಲ್ಲಿ ಕರೋನಾ ವಾರಿಯರ್ ಆಗಿ ಘೋಷಣೆ ಮಾಡಿದ ಮೇಲೂ, ನಮ್ಮೆದುರು ಹೂ ಮಳೆಗರೆದು ಹೊಗಳಿದರೂ, ನಮ್ಮನ್ನು ಅಂತಾರಾಷ್ಟ್ರೀಯ ಭಿಕಾರಿಗಳನ್ನಾಗಿಸಲಾಗುತ್ತಿದೆ. ಬೃಹತ್ ಕಂಪನಿಗಳ ವಸ್ತುಗಳ ಮಾರಾಟಗಾರರನ್ನಾಗಿಸಲಾಗುತ್ತಿದೆ. ಇದೇನಾ ನಮ್ಮ ಕರೋನಾ ವಾರಿಯರ್ಸ್ ಗಳಿಗೆ ಕೊಡುವ ಪ್ರಶಸ್ತಿ? ಬಳಸಿ ಮತ್ತು ಬಿಸಾಡುವ ನೀತಿಯ ಭಾಗವಾಗಿ ಅಂಗನವಾಡಿ ನೌಕರರು ಪಿಂಚಣಿ ಇಲ್ಲದೇ ಹಸಿವಿನಿಂದ ಬಳಲಿ ಬೀದಿಯಲ್ಲಿ ಸಾವನ್ನಪ್ಪುತ್ತಿದ್ದಾರೆ. ಇದಕ್ಕೆ ಮೀರಾ ಒಂದು ಜ್ವಲಂತ ಉದಾಹರಣೆಯಾಗಿದೆ ಎನ್ನುತ್ತಾ, ಹೀಗೆ ಯಾವ ರೀತಿ ನಮ್ಮನ್ನು ಬೀದಿಗೆ ತಳ್ಳುವಿಕೆ ನಡೆಯುತ್ತಿದೆ ಎಂಬುದನ್ನು ಒಂದೊಂದೇ ವಿವರಿಸಿದರು ಉದ್ಘಾಟನೆ ಮಾಡಿದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು.

ಪೋಷಣ್ ಅಭಿಯಾನ್ ವಿಚಾರವಾಗಿ ಮಧ್ಯಪ್ರದೇಶದಲ್ಲಿ "ಆಹಾರ ಧಾನ್ಯ ನೀವೇ ಒಟ್ಟು ಮಾಡಿ, ಮಾರಾಟ ಮಾಡಿ ಅಂಗನವಾಡಿ ಚಲಾಯಿಸಿ" ಭಾಗವಾಗಿ ಪೋಷಣ್ ಮಟಕಾ ಮಾಡಲು ಹೇಳಿದ್ದಾರೆ. ನಾಲ್ಕು ಮಟಕಾಗಳಲ್ಲಿ ಒಂದೊಂದರಲ್ಲಿ ಒಂದು ಕ್ವಿಂಟಲ್ ವಸ್ತು ಸಂಗ್ರಹಿಸಲು ಊರಿನಲ್ಲಿ ಬೇಡಬೇಕು, ಅದನ್ನು ಮಾರಿ ಬಂದ ಹಣದಲ್ಲಿ ಅಂಗನವಾಡಿ ಅಂಗನವಾಡಿಗೆ ಬೇಕಾದ ವಸ್ತು ಖರೀದಿಸಬೇಕು, ಅಭಿವೃದ್ಧಿ ಮಾಡಬೇಕು. ಇದರಿಂದ ದೇಶದ ಮಕ್ಕಳು ಅಭಿವೃದ್ಧಿ ಹೊಂದುತ್ತಾರೆಯೇ? ದಷ್ಟಪುಷ್ಟವಾಗಿ ಪೌಷ್ಟಿಕಾಂಶಯುಕ್ತವಾಗಿ ಬೆಳೆಯುತ್ತಾರೆಯೇ? ಮಕ್ಕಳ ಭವಿಷ್ಯವನ್ನೇ ಮಾರಾಟ ಮಾಡಿದಂತಾಗದೇ? ಎಂದು ಪ್ರಶ್ನಿಸಿ ಪ್ರಸ್ತುತ ದೇಶದಲ್ಲಿ ಅಂಗನವಾಡಿಗಳ ಮೇಲಿನ ಒತ್ತಡ, ಐಸಿಡಿಎಸ್ ಹೆಸರು ಬದಲಿಸಿ ಸಕ್ಷಮ್ ಅಂಗನವಾಡಿ: ಪೋಷಣ್ 2.0 ಮಾಡಿರುವುದು ಹಾಗೂ ಹೊಸ ಶಿಕ್ಷಣ ನೀತಿಯ ಪರಿಣಾಮಗಳನ್ನು ವಿವರಿಸಿದರು.

ಮುಖ್ಯವಾಗಿ,– ಪೋಷಣ್ ಟ್ರ್ಯಾಕರ್ ದೇಶದ ಹಳಿ ತಪ್ಪಿಸಲು ಹೊಂಚುಹಾಕಿದೆ. ಐಸಿಡಿಎಸ್ ನ್ನೇ ಮಾರ್ಪಡಿಸಿ, ಐಸಿಡಿಎಸ್ ಮಿಶನ್ ಮೋಡನ್ನೂ ಮಾರ್ಪಡಿಸಿ ಕಳೆದ ಅವಧಿಯಿಂದ ಸಕ್ಷಮ್ ಅಂಗನವಾಡಿ; ಪೋಷಣ್ 2.0 ಮಾಡಿದ್ದಾರೆ.

–ಇಸಿಸಿಇ, ಆಹಾರ ಹಕ್ಕು ಕಾಯ್ದೆ ಹಾಗು ಮಕ್ಕಳ ಮನೋವೈಜ್ಞಾನಿಕ ವರದಿಗಳನ್ನು ತಳ್ಳಿಹಾಕಿ ಔಪಚಾರಿಕ ಶಿಕ್ಷಣ ಹೇರುವ, ಶಾಲಾಪೂರ್ವ ಶಿಕ್ಷಣವನ್ನು ಮಾರಾಟದ ಕೇಂದ್ರವಾಗಿಸುವ ಹೊಸ ಶಿಕ್ಷಣ ನೀತಿ–2020, ಬಿಲ್ ಗೇಟ್ಸ್ ಮಿಲಿಂದಾ ಗೇಟ್ಸ್ ಸಾರಥ್ಯದ ಬಹುರಾಷ್ಟ್ರೀಯ ಕಂಪನಿಯು ವೇದಾಂತ ಫೌಂಡೇಶನ್ ಜೊತೆಗೂಡಿ ಸರ್ಕಾರದ ಮೂಲಕ ನಡೆಯುವ ಅಂಗನವಾಡಿಗಳ ಹಸ್ತಾಂತರಕ್ಕೆ ತ್ರಿಪಕ್ಷೀಯ ಒಪ್ಪಂದಗಳಾಗುತ್ತಿವೆ.

–ದೇಶೀಯ ಖಾಸಗಿ ಕಂಪನಿಗಳಿಗೆ ಹಸ್ತಾಂತರ ಮತ್ತು ಎನ್.ಜಿ. ಓ ಗಳಿಗೆ ನೀಡಲಾಗುತ್ತಿದೆ.

–ಪೋಷಣ್ ಟ್ರ್ಯಾಕರ್ ಹೆಸರಿನಲ್ಲಿ ಜಾಹಿರಾತಿಗೆ ನಮ್ಮ ದೇಹದ ಬಳಕೆ ಮಾಡಲು ಮುಂದಾಗಿದ್ದಾರೆ.

–ಗರ್ಭಿಣಿ ಬಾಣಂತಿ ತಪಾಸಣಾ ಕೇಂದ್ರ ಮಾಡಲಾಗುತ್ತಿದೆ. ಕಿಶೋರಿಯರಿಗೆ ಸೇವೆ ನಿಲ್ಲಿಸಿದ್ದಾರೆ. ಅಂಗನವಾಡಿಯವರಿಗೆ ತರಬೇತಿ ನಿಲ್ಲಿಸಿದ್ದಾರೆ. ಈಗ ಫ್ಲೆಕ್ಸಿ ಫಂಡ್ ನಲ್ಲಿ 2000 ರೂ. ತೆಗೆದು ಅದರಲ್ಲೇ ತರಬೇತಿ ನೀಡಲು ಮುಂದಾಗಿದ್ದಾರೆ.

–ನಂದ್ ಘರ್, ಮ್ಕಕಳ ಮನೆ, ಬಾಲವಾಟಿಕಾ ಇತ್ಯಾದಿ ತೆರೆಯಲಾಗುತ್ತಿದೆ.

–ಅಂಗನವಾಡಿಯಲ್ಲಿ 4 "ಮಟಕಾ" ತಂದು ಅದರಲ್ಲಿ ಊರವರಿಂದ ಆಹಾರ ವಸ್ತು ಇತ್ಯಾದಿ ಸಂಗ್ರಹಿಸಿ ಅದನ್ನು ಸಾರ್ವಜನಿಕವಾಗಿ ಮಾರಾಟ ಮಾಡಿ ಅಂಗನವಾಡಿ ಅಭಿವೃದ್ಧಿಗೆ ಬಳಸಬೇಕೆಂದು ಹೇಳಲಾಗಿದೆ.

–ಕೆಲವು ರಾಜ್ಯಗಳಲ್ಲಿ ಮಠಮಾನ್ಯಗಳ ಮರ್ಜಿಯಂತೆ ಇಸ್ಕಾನ್, ಅದಮ್ಯ ಚೇತನ ಇಂಥವರಿಗೆ, ಧಾರ್ಮಿಕ ಸಂಸ್ಥೆಗಳ ಅಧೀನಕ್ಕೆ ವಹಿಸಲಾಗುತ್ತಿದೆ. ಅಂಗನವಾಡಿ ಮ್ಕಕಳ ಆಹಾರ ಹಕ್ಕಿನ ಮೇಲೆ ಮೊಟ್ಟೆ ಬಳಕೆ ಮೇಲೆ ಸಾಂಸ್ಕೃತಿಕ ದಾಳಿ ನಡೆದಿದೆ. ಬೆಳ್ಳುಳ್ಳಿ ಉಳ್ಳಾಗಡ್ಡೆ ಕೊಡಲಾರದ ಪರಿಸ್ಥಿತಿಗೆ ಬಂದು ತಲುಪಿದೆ. ಕೇಂದ್ರದಲ್ಲಿ ಭಗವದ್ಗೀತೆ ಪಠಿಸಲು ಹೇಳುತ್ತಿದ್ದಾರೆ.

–ಮನೆಗೆ ಮಾತ್ರ ಸೀಮಿತವಾದ ಸೀಮಂತ ಪ್ರಕ್ರಿಯೆಗೆ ನಮ್ಮದೇ ಕೈಯಿಂದ ಹಣ ಹಾಕಿ ಸೀಮಂತ ಮಾಡಿಸುವಿಕೆ ಹಾಗೂ ಶ್ರೀಕೃಷ್ಣ ಛದ್ಮವೇಷ ಹಾಕಿಸುವಿಕೆ ನಡೆಯುತ್ತಿದೆ. ಧಾರ್ಮಿಕ ಕ್ರಿಯೆಯ ಮೂಲಕ ಭ್ರಮೆ ಸೃಷ್ಟಿಸಿ ಅಂಗನವಾಡಿ

ಪುಟ 10 ಕ್ಕೆ

ಜೊತೆಯಾಗುತ್ತಿದೆ ಇಂಕ್ವಿಲಾಬ್

ಅವರ ಕಣ್ಣುಗಳು ಒದ್ದೆಯಾಗಿದ್ದವು...
ಕೆಲವರದ್ದು ಒಣಗಿತ್ತು
ಇನ್ನೂ ಕೆಲವು ಕೆಂಪಾಗಿದ್ದವು
ಹಣ್ಣೆಲೆಯಾಗಿ, ತೊಟ್ಟು ಕಳಚಿ ಧರೆಗೆ ಬೀಳುವ
ಆ ನೋವುಗಳನುಂಡು
ಬಿಕ್ಕಳಿಸುತ್ತಿದ್ದವು!

ಮಕ್ಕಳಾಟದ ಮಣ್ಣು ಕಲಸಿ
ಮನೆ ಕಟ್ಟಿ,
ತನ್ನ ಸೆರಗನ್ನೇ ಚಪ್ಪರವಾಗಿಸಿದ ಆ ಖುಷಿ
ಇನ್ನೆಲ್ಲಿ ಅರಸುವುದು!

ಹೇಳಲೇನೂ ಉಳಿದಿರಲಿಲ್ಲ
ವರ್ಷ ಐದು ಕಳೆದರೂ ಕೈಸೇರದ ಇಡಿಗಂಟು
ವಯಸ್ಸಲ್ಲದ ವಯಸ್ಸಲ್ಲೇ ಬಂದ ವೃದ್ಧಾಪ್ಯ
ಯಾರ ಶಪಿಸಲೆಂದು ಗೋಗರೆದವು!

ಹಡೆದ ಮಕ್ಕಳ ಬಿಟ್ಟು
ಪಡೆದ ಮಕ್ಕಳನೂ ಕಳಕೊಂಡು
ಪರದೇಶಿ ಮಾಡಿದ ಶ್ರಮಕಳ್ಳರ ಮುಂದೆ
ಉಸಿರಾಡಲು ಕೈಚಾಚುವ ಈ ಹೊತ್ತು
ಸರಿಯುತ್ತಿದೆ ಜೀವನ ಸಂಧ್ಯೆಯತ್ತ
ಗೊತ್ತಿಲ್ಲ, ಏನೆಂದು ಕಿರುಚುವುದು?

ಆದರೂ ಬಲು ದೀರ್ಘ ದಾರಿಯಲ್ಲಿ
ಜೊತೆಯಾಗುತ್ತಿದೆ
ಇಂಕ್ವಿಲಾಬ್ ಜಿಂದಾಬಾದ್!

(ಯಮುನಾ_ಗಾಂವ್ಕರ್
ಸಾಂದರ್ಭಿಕವಾಗಿ ರಚಿಸಿದ ಕವನ)





ಎಸ್. ವರಲಕ್ಷ್ಮಿ, ಅಧ್ಯಕ್ಷರು ಹೆಚ್.ಎಸ್.ಸುನಂದ,ಪ್ರ.ಕಾರ್ಯದರ್ಶಿ ಜಿ.ಕಮಲಾ, ಖಜಾಂಚಿ

ನೂತನ ಸಮಿತಿ:

8ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯ ನೂತನ ಅಧ್ಯಕ್ಷರಾಗಿ ಸಂಗಾತಿ ಎಸ್. ವರಲಕ್ಷ್ಮಿ, ಕಾರ್ಯಾಧ್ಯಕ್ಷರಾಗಿ ಶಾಂತಾ ಘಂಟಿ, ಪ್ರಧಾನ ಕಾರ್ಯದರ್ಶಿಯಾಗಿ ಸಂಗಾತಿ ಹೆಚ್.ಎಸ್.ಸುನಂದ ಹಾಗೂ ಖಜಾಂಚಿಯಾಗಿ ಜಿ.ಕಮಲಾ ಉಪಾಧ್ಯಕ್ಷರಾಗಿ ಟಿ. ಲೀಲಾವತಿ, ಕೆ. ನಾಗರತ್ನ, ಕಲಾವತಿ, ಸುಜಾತಾ, ಪದ್ಮಾ, ಸುನಂದಾ ನಾಯಕ್, ಮಾರುತಿ ಚಿಟಗಿ, ಶ್ರೀದೇವಿ ಚುಡೆ ಕಾರ್ಯದರ್ಶಿಗಳಾಗಿ ಯಮುನಾ ಗಾಂವ್ಕರ್, ಲಕ್ಷ್ಮಿದೇವಮ್ಮ, ಗೌರಮ್ಮ ಪಾಟೀಲ್, ದೊಡ್ಡವ್ವ ಪೂಜೇರಿ, ಗುಲ್ಜಾರ್, ನಳಿನಾಕ್ಷಿ, ಉಮಾ, ಎಂ.ಬಿ ಪುಷ್ಪಾ, ಸುಶೀಲಾ ನಾಡಾ ಆಯ್ಕೆಯಾದರು. ಮೂರು ಹಂತದ ಸಮಿತಿಗೆ ಒಟ್ಟೂ 22 ಪದಾಧಿಕಾರಿಗಳು, 77 ರಾಜ್ಯ ಸಮಿತಿ ಸದಸ್ಯರು, ಎಲ್ಲಾ ತಾಲೂಕು ಸಮಿತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ರಾಜ್ಯ ಕೌನ್ಸಿಲ್ ಸದಸ್ಯರಾಗಿ ಆಯ್ಕೆಯಾದರು.

ಸಮಾರೋಪ ಸಮಾರಂಭ:

ಗ್ರಾಚ್ಯುಟಿ ಹೋರಾಟಕ್ಕೆ ಮುಂದಾಗುವ ಐತಿಹಾಸಿಕ... ಗ್ರಾಚ್ಯುಟಿ ಹೋರಾಟಕ್ಕೆ ಮುಂದಾಗುವ ದಿಟ್ಟ ತೀರ್ಮಾನದೊಂದಿಗೆ ಪುಸ್ತಕ ಬಿಡುಗಡೆ ಸಮಾರೋಪ ನಡೆಯಿತು. ಬಲುದೀರ್ಘ ಗ್ರಾಚ್ಯುಟಿ ಹೋರಾಟಕ್ಕೆ ಜೀವ ತುಂಬಿದಂತಿರುವ ಸುಪ್ರಿಂಕೋರ್ಟ ತೀರ್ಪಿನೊಂದಿಗೆ ಸವಿವರವಾದ ಪುಸ್ತಕ ಬಿಡುಗಡೆ ಮಾಡಲಾಯಿತು. ಸುಪ್ರಿಂ ಕೋರ್ಟ ನ ನಿವೃತ್ತ ನ್ಯಾಯಮೂರ್ತಿ ಮಾನ್ಯ ಗೋಪಾಲಗೌಡರ ಮುಖ್ಯ ಮಾತುಗಳೊಂದಿಗೆ ಪ್ರಾರಂಭವಾಗುವ ಹಾಗೂ ಕಾ. ಮೀನಾಕ್ಷಿ ಸುಂದರಂ ಹಾಗೂ ಎಸ್ ವರಲಕ್ಷ್ಮಿಯವರ ಬರಹಗಳನ್ನೂ ಒಳಗೊಂಡ ಮಾರ್ಗದರ್ಶಿ ಕಿರು ಪುಸ್ತಕ ಬಿಡುಗಡೆ ಮಾಡಿದವರು ಎ.ಆರ್. ಸಿಂಧು ರವರು. ತೀರ್ಪನ್ನು ಕನ್ನಡಕ್ಕೆ ಸತ್ಯ. ಎಸ್ ರವರು ಅನುವಾದಿಸಿದ್ದಾರೆ.

ಅಂಗನವಾಡಿ ನೌಕರರ ಸಂಘದ 8ನೇ ರಾಜ್ಯ ಸಮ್ಮೇಳನ ಮಕ್ಕಳು ಮತ್ತು ಮಹಿಳೆಯರಿಗೆ ಆಹಾರ, ಆರೋಗ್ಯ........

ಪುಟ 9 ರಿಂದ

ಮಹತ್ವ ಕಳೆಯಲಾಗುತ್ತಿದೆ.

–ಕರ್ನಾಟಕದಲ್ಲಿ ಪಂಚಾಯತಿಗೆ ವಹಿಸುವ, ಪಬ್ಲಿಕ್ ಸ್ಕೂಲ್ ಗೆ ಮಕ್ಕಳ ಭರ್ತಿ ಮಾಡುವ, ಮಕ್ಕಳ ಗಣತಿ ಮಾಡಿ ನಮ್ಮ ವಿರುದ್ಧವೇ ನಾವು ಕೆಲಸ ಮಾಡುವಂದರೆ 3–6 ಮಕ್ಕಳ ಪ್ರಾಥಮಿಕ ಶಾಲೆಗೆ ದಾಖಲಿಸುವ ಪ್ರಕ್ರಿಯೆಯ ವಾತಾವರಣ ನಿರ್ಮಾಣವಾಗಿದೆ. ಇದೀಗ ಕರ್ನಾಟಕದ ಶಿಕ್ಷಣ ಸಚಿವರು ಹಾಗೂ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಜಂಟಿಯಾಗಿ ಪತ್ರಿಕಾಗೋಷ್ಟಿ ನಡೆಸಿ ಎನ್.ಇ.ಪಿ ಬೇಕಾಗುವ ಪತ್ಯ ತರಬೇತಿ 20000 ಕೇಂದ್ರಗಳಲ್ಲಿ ನೀಡುವುದಾಗಿ ಹೇಳಿದ್ದಾರೆ.

–ಅಂಗನವಾಡಿ ನೌಕರರು ಒಂದು ದಿನವೂ ನೆಮ್ಮದಿಯಿಂದ ಇರಲಾಗದಂತೆ ಮಾಡಲು ಹಲವು ಆ್ಯಪ್ ಗಳನ್ನು ಅಳವಡಿಸಲಾಗುತ್ತಿದೆ. ನಮ್ಮ ಚಲನ ವಲನಗಳನ್ನು ನಿಯಂತ್ರಿಸುವ ಕೆಲಸ ನಡೆಯುತ್ತಿದೆ.

–ಅಂತಿಮವಾಗಿ ನಾವು ಪ್ರಶ್ನಿಸಿದರೆ, ಹಕ್ಕು ಕೇಳಿದರೆ ದೇಶದ್ರೋಹಿ ಎನ್ನುವುದು ಹಾಗೂ ಹೋರಾಟದ ಹಕ್ಕನ್ನೇ ಕಸಿದ ಆದೇಶ ಕೂಡ ಬಂದಿದೆ. ಎಸ್ಮಾ ಜಾರಿ ಮಾಡಲಾಗುತ್ತಿದೆ. ಹೋರಾಟಗಾರರ ಮೇಲೆ ಕೆಲವೆಡೆ ಅತ್ಯಾಚಾರ, ದೈಹಿಕ ದಾಳಿ, ಹಿಂಸೆ ನಡೆಯುತ್ತಿದೆ. ಇದಕ್ಕೆಲ್ಲ ಆಡಳಿತಾರೂಢರೇ ಬೆಂಬಲಿಸುತ್ತಿರುವುದು ದೇಶದ ದುರಂತವಾಗಿದೆ.

ಇಷ್ಟೆಲ್ಲ ಬಂದರೂ ನಾವು ಹೋರಾಟ ನಿಲ್ಲಿಸದೇ ಮುಂದುವರಿದಿದ್ದೇವೆ. ದೇಶದಲ್ಲೇ ಮೊದಲ ಬಾರಿಗೆ ಸೇವಾ ಜ್ಯೇಷ್ಟತೆ ಆಧಾರದಲ್ಲಿ ವೇತನ ಪಡೆಯಲು ಕರ್ನಾಟಕದಲ್ಲಿ ಸಾಧ್ಯವಾಗಿದೆ. ಗ್ರಾಚ್ಯುಟಿ ತೀರ್ಪು ಬಂದಿದೆ. ಇನ್ನಿತರೇ ಬೇಡಿಕೆ ಗೆಲ್ಲುವ ಹಂತದಲ್ಲಿದ್ದೇವೆ.

ಸರ್ಕಾರದ ಕೆಟ್ಟನೀತಿಗಳಿಂದಾಗಿ ಹಲವಾರು ಯೋಜನೆಗಳು ಜನರಿಗೆ ತಲುಪುವಲ್ಲಿ ವಿಫಲವಾಗುತ್ತಿವೆ. ನಾವು ನಮ್ಮ ಹೋರಾಟವನ್ನು ಇನ್ನಷ್ಟು ಗಟ್ಟಿಗೊಳಿಸಬೇಕಿದೆ. ಕೊರೊನಾ ಸಮಯದಲ್ಲಿ ನಾವು ನಮ್ಮ ಜೀವದ ಬಗ್ಗೆ ಚಿಂತೆ ಬಿಟ್ಟು ಜನರ ಒಳಿತಿಗಾಗಿ ಕೆಲಸ ಮಾಡಿದ್ದೇವೆ. ಆದರೆ ಸರ್ಕಾರ ನಮಗೆ ಬೇಕಾದ ಯಾವುದೇ ಸರಿಯಾದ ಸಹಾಯ ಕೂಡ ಮಾಡಲ್ಲಿಲ್ಲ. ನಾವು ಅಂಗನವಾಡಿ ಕಾರ್ಯಕರ್ತೆಯರು ಕೇವಲ ನಮ್ಮ ಹಕ್ಕುಗಳಗಾಗಿ ಅಷ್ಟೇ ಅಲ್ಲದೇ, ಕಾರ್ಮಿಕ ರೈತರ ಹೋರಾಟಗಳಲ್ಲಿಯೂ ಜನರ ಹಕ್ಕುಗಳಿಗಾಗಿಯೂ ಸಹ ಹೋರಾಡಿದ್ದೇವೆ ಎಂದರು.

ಮಹಿಳೆಯರನ್ನು ಒಡೆಯುವ ತಂತ್ರ:

ಕೋಮುವಾದ ಮತ್ತು ಸಾಂಪ್ರದಾಯಿಕ ಮನೋಭಾವದಿಂದ ಮಹಿಳೆಯರ ಚಲನಶೀಲತೆಯನ್ನೇ ನಿರ್ಬಂಧಿಸಲಾಗುತ್ತಿದೆ. ಜನಸಮುದಾಯದಲ್ಲಿ ಮಹಿಳೆಯರು ತಮ್ಮ ಸ್ನೇಹ ಬೆಳೆಸುವ, ತಮ್ಮ ಬಾಳ ಸಂಗಾತಿಯ ಆಯ್ಕೆ ಮಾಡಿಕೊಂಡು ಮದುವೆಯಾಗುವ, ತಮ್ಮ ಇಚ್ಛೆಯ ಉಡುಪು ಧರಿಸುವ ಮತ್ತು ತಮ್ಮ ಸ್ವಂತ ಆಯ್ಕೆಯಂತೆ ಜೀವನ ನಡೆಸುವ ಹಕ್ಕುಗಳು ಇಂದು ಬಲಪಂಥೀಯ ಶಕ್ತಿಗಳ ದಾಳಿಗೆ ಒಳಗಾಗಿವೆ. ಮಹಿಳೆಯರ ವಿರುದ್ಧದ ಹಿಂಸಾತ್ಮಕ ಘಟನೆಗಳು ದಿನೇದಿನೇ ಹೆಚ್ಚುತ್ತಲೇ ಇವೆ ಇನ್ನಷ್ಟು ಆತಂಕದ ಪರಿಸ್ಥಿತಿ ಎದುರಾಗಲಿದೆ ಎಂದು ಸಿಂಧು ರವರು ಚಿಂತೆ ವ್ಯಕ್ತಪಡಿಸಿದರು. ಮೌಢ್ಯ, ಕೋಮುವಾದದ ವಿರುದ್ಧ ಹೋರಾಟದಲ್ಲಿ ಪಾಲ್ಗೊಳ್ಳೋಣ ಎಂದರು.

ವಿಶ್ವದ ಅಂಕಿಸಂಖ್ಯೆಯ ತುಲನಾತ್ಮಕ ನೋಟದಲಿ ಭಾರತ ಹಿಂದೆ ಬಿಟ್ಟಿದೆ:

ಜಾಗತಿಕ ಲಿಂಗ ಅಂತರ ಸೂಚ್ಯಂಕದಲ್ಲಿ ಭಾರತದ ಸ್ಥಾನವು 153 ದೇಶಗಳ ಪೈಕಿ 112 ನೇ ಸ್ಥಾನದಲ್ಲಿದೆ. ಅಂದರೆ, 2018 ರಲ್ಲಿ ಇದ್ದುದಕ್ಕಿಂತ 2019–20 ರಲ್ಲಿ ಕೆಳಕ್ಕಿಳಿದಿದೆ. ಜಾಗತಿಕ ಆರ್ಥಿಕ ವೇದಿಕೆಯ 'ಆರ್ಥಿಕ ಲಿಂಗ ಅಂತರ'ದಲ್ಲಿ 2016 ರಲ್ಲಿ 110 ನೇ ಸ್ಥಾನದಲ್ಲಿದ್ದ ಭಾರತವು 2020 ರಲ್ಲಿ ಅಂದರೆ 14 ವರ್ಷ ದಾಟುವುದರೊಳಗೆ 149 ನೇ ಸ್ಥಾನಕ್ಕೆ ಬಂದಿದೆ. ಈ ಮಧ್ಯೆ 39 ಸ್ಥಾನಗಳನ್ನು ಕಳೆದುಕೊಂಡಿದೆ. ಇಂದು ಭಾರತದಲ್ಲಿ ಮಹಿಳೆಯರಿಗೆ ಆರ್ಥಿಕ ಅವಕಾಶಗಳು ಪ್ರಪಂಚದಲ್ಲೇ ಅತ್ಯಂತ ಕಡಿಮೆಯಾಗಿದೆ. 2020ರ ಜೂನ್ ನಲ್ಲಿ ವಿಶ್ವಬ್ಯಾಂಕ್ ಬಿಡುಗಡೆಗೊಳಿಸಿದ ಅಂಕಿಸಂಖ್ಯೆ ಮಾಹಿತಿ ಪ್ರಕಾರ ಭಾರತದ ಮಹಿಳಾ ಕಾರ್ಮಿಕ ಶಕ್ತಿಯ ಪಾಲ್ಗೊಳ್ಳುವಿಕೆಯು (ಅಂದರೆ ಫಿಮೇಲ್ ಲೇಬರ್ ಫೋರ್ಸ್ ಪಾರ್ಟಿಸಿಪೇಶನ್ – ಎಫ್.ಎಲ್.ಎಫ್.ಪಿ) ದಕ್ಷಿಣ ಏಷ್ಯಾದಲ್ಲೇ ಅತೀ ಕಡಿಮೆ. 1990 ರಲ್ಲಿ 30.3% ಇದ್ದುದು 2020 ರಲ್ಲಿ 20.3% ಗೆ ಇಳಿದಿದ್ದು ಇದು ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ (ಮಹಿಳಾ ಕಾರ್ಮಿಕ ಶಕ್ತಿಯ ಪಾಲ್ಗೊಳ್ಳುವಿಕೆ 22.1%) ಮತ್ತು ಅಪಘಾನಿಸ್ತಾನ (ಮಹಿಳಾ ಕಾರ್ಮಿಕ ಶಕ್ತಿಯ ಪಾಲ್ಗೊಳ್ಳುವಿಕೆ 21.8%) ಕ್ಕಿಂತ ಹಿಂದೆ ಬಿದ್ದಿರುವುದು ಅರ್ಥವಾಗುತ್ತದೆ ಆದಾಗ್ಯೂ ಪ್ರದಾನಿ ಮೋದಿ ಯವರು ಮತ್ತು ಬಿಜೆಪಿಗರು ಭಾರತ ವಿಶ್ವಗುರು ಎಂದೇ ಹುಯಿಲೆಬ್ಬಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಐಸಿಡಿಎಸ್ ನ ಬಲವರ್ಧನೆ ಆಗಬೇಕಿದೆ ಎಂದು ಎ.ಆರ್. ಸಿಂಧು ಅವರು ಸರ್ಕಾರವನ್ನು ಒತ್ತಾಯಿಸಿದರು.

ಹಾಗಾಗಿ, ಜನರ ಬೇಡಿಕೆಗಳ ಭಾಗವಾಗಿ ವಿಸ್ತರಣೆ ಹೊಂದಿದ ಈ ಯೋಜನೆಯನ್ನು ಬದಿಗೊತ್ತಲು ತಯಾರಿ ನಡೆಸುವುದು ಕಂಡುಬರುತ್ತಿದೆ. ಸರ್ಕಾರದ ದಾಳಿ ಒಂದೊಂದೇ ಬಂದೆರಗುತ್ತಿದೆ, ನಾವು ಪ್ರಜ್ಞಾವಂತರಾಗುವ ಅಗತ್ಯವಿದೆ, ಸರ್ಕಾರದ ನೀತಿಗಳನ್ನು ಅರ್ಥ ಮಾಡಿಕೊಂಡು ಈ ನೀತಿಗಳಿಗೂ ರಾಜಕೀಯಕ್ಕೂ ಸಂಬಂಧವನ್ನು ಅರಿತು ಮುನ್ನಡೆಯಬೇಕಿದೆ.

ಮುಂದುವರಿದು ಸಂಘಟನಾ ವಿಷಯವಾಗಿ ಮಾತನಾಡಿ, ದೇಶದ ಎಲ್ಲಾ ಭಾಗಗಳಲ್ಲೂ ನಾವು ಸಮ್ಮೇಳನಗಳನ್ನು ಮಾಡುತ್ತಿದ್ದೇವೆ. ನಮ್ಮ ದೌರ್ಬಲ್ಯಗಳೇನು ನಮ್ಮಲ್ಲಿರುವ ತೊಡಕುಗಳೇನು ಚರ್ಚಿಸಿ ಸರಿ ಮಾಡಿಕೋಳ್ಳಬೇಕಿದೆ. ಸರ್ಕಾರದ ನೌಕರ ವಿರೋಧಿ ನೀತಿಗಳ ವಿರುದ್ಧ ನಡೆಸಲಾಗುತ್ತಿರುವ ಹೋರಾಟಗಳಲ್ಲಿ ಅಂಗನವಾಡಿ ನೌಕರರೆಲ್ಲರು ಭಾಗವಹಿಸುವ ಮೂಲಕ ಗಟ್ಟಿಗೊಳಿಸಬೇಕೆಂದು ಮನವಿ ಮಾಡಿದರು. ಸರ್ಕಾರದ ಬಜೆಟ್ಟು ಮಂಡನೆಯಲ್ಲಿ ನಮ್ಮನ್ನು ನಿರ್ಲಕ್ಷಿಸುತ್ತಿರುವುದನ್ನು ವಿರೋಧಿಸಿ ಭಾರತದ ಎಲ್ಲಾ ಕಡೆಗಳಲ್ಲಿ ಹೋರಾಟಗಳು ನಡೆಯಲಿವೆ. ನಾವು ಅಂಗನವಾಡಿ ಕಾರ್ಮಿಕರು ಭಾಗವಹಿಸುವುದರ ಮೂಲಕ ದೇಶದ ಜನರಲ್ಲಿ ಭರವಸೆ ಮೂಡಿಸಲಿದ್ದೇವೆ ಎಂದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮಿನಾಕ್ಷಿ ಸುಂದರಂ ಮಾತನಾಡಿ, 70 ವರ್ಷಗಳಿಂದ ಇಲ್ಲದ ಬದಲಾವಣೆಗಳನ್ನು ಈಗ ಸರ್ಕಾರ ತರಲು ಪ್ರಯತ್ನಿಸುತ್ತಿದೆ. ತೆರಿಗೆ ಎಲ್ಲರಿಗೂ ಒಂದೇ, ಅದು ಅಧಾನಿಯಾದರು ಮತ್ತು ಅಂಗನವಾಡಿ ಕಾರ್ಯಕರ್ತರಾದರೂ ಕೂಡ. ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಲು, ರಸ್ತೆ ಸರಿ ಮಾಡಲು ಶಾಲಾ ಕಟ್ಟಡಗಳನ್ನು ಸರಿ ಮಾಡಿಸಲು ಸರ್ಕಾರದ ಬಳಿ ದುಡ್ಡಿಲ್ಲ, ಆದರೆ ಕಪ್ಪು ಹಣ ಇಟ್ಟುಕೊಂಡಿರುವವರ ಕೆಲಸಗಳನ್ನು ಮಾಡಿಕೊಡಲು ಅವರ ಬಳಿ ದುಡ್ಡಿದೆ. ಕೇವಲ ದುಡ್ಡು ಇರುವವರು ಮಾತ್ರ ಬದುಕುವಂತ ಸಮಯ ದೇಶದಲ್ಲಿ ಬರಲಿದೆ. ಬಹುಜನರು ಬದುಕನ್ನು ಕಳೆದುಕೊಳ್ಳುವಂತ ಪರಿಸ್ಥಿತಿ ದೇಶದಲ್ಲಿ ನಿರ್ಮಾಣ ಆಗುತ್ತಿದೆ. ಬೆಲೆ ಏರಿಕೆ, ನಿರುದ್ಯೋಗಗಳು ಸರ್ಕಾರದಿಂದಲೇ ಅಗುತ್ತಿದೆ. ಇದೆಲ್ಲವೂ ನಮ್ಮ ಬೇಡಿಕೆಗಳಾಗಿರಬೇಕು ಎಂದು ಹೇಳಿದರು.

ಸಿಐಟಿಯು ರಾಜ್ಯ ಪದಾಧಿಕಾರಿಗಳು, ಗ್ರಾಮ ಪಂಚಾಯತ್ ನೌಕರರ ಸಂಘದ ಆರ್.ಎಸ್. ಬಸವರಾಜ್ ಮಾತನಾಡಿ, ಯಾರು ನಮ್ಮ ಬದುಕನ್ನು ನಾಶ ಮಾಡಿತ್ತಿದ್ದಾರೋ ಅವರಿಗೆ ನಮ್ಮ ಸರ್ಕಾರ ಬೆಂಬಲಿಸುತ್ತಿದೆ. ನಮ್ಮ ಹೋರಾಟದ ಹಕ್ಕು ಹತ್ತಿಕ್ಕುತ್ತಿದೆ. ನಾವು ಎಚ್ಚೆತ್ತುಕೊಳ್ಳಬೇಕಿದೆ ಎಂದರು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಭಾಸ್ಕರ ರೆಡ್ಡಿ ಸಾಂದರ್ಭಿಕವಾಗಿ ಮಾತನಾಡಿದರು.

ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಮುಂದಿರುವ ಪ್ರಮುಖ ಸವಾಲುಗಳು ಎಂದರೆ, ಅಂಗನವಾಡಿ ನೌಕರರಿಗೆ ಸರಿಯಾದ ಸವಲತ್ತುಗಳು ಸಿಗದಿರುವುದು ಮತ್ತು ಮಾನಸಿಕ ಮತ್ತು ದೈಹಿಕ ಹಿಂಸೆಗಳು ಹೆಚ್ಚಾಗುತ್ತಿವೆ. ಸರ್ಕಾರ ಜನರಿಗಾಗಿ ವೆಚ್ಚ ಮಾಡುತ್ತಿಲ್ಲ. ಬದಲಾಗಿ ಜನರಿಂದ ಕಿತ್ತುಕೊಳ್ಳುತ್ತಿದೆ. ಮುಂದಿನ ಜನಾಂಗದ ಮಕ್ಕಳಿಗಾಗಿ ಅವರ ಒಳಿತಿಗಾಗಿ ಸರ್ಕಾರ ಕೆಲಸ ಮಾಡಬೇಕಿದೆ. ಹೀಗಾಗಿ ಸರ್ಕಾರ ಹೆಚ್ಚಿನ ಹಣವನ್ನು ಈ ನಿಟ್ಟಿನಲ್ಲಿ ಖರ್ಚು ಮಾಡಬೇಕು. ಮಕ್ಕಳ ರಕ್ಷಣೆಯೇ ನಮ್ಮ ದೇಶದ ರಕ್ಷಣೆಯಾಗಿದೆ. ನಾವು ಬಡಜನಗಳು ನಿಮಗೆ ಭಾರತೀಯರಾಗಿ ಕಾಣಿಸುತ್ತಿಲ್ಲವೆ? ನಾವೇನು ಪಾಕಿಸ್ತಾನದಿಂದ ಬಂದಿದ್ದೇವೆಯೇ ಎಂದು ಪ್ರಶ್ನಿಸಿದ ಅವರು, ಸರ್ಕಾರಕ್ಕೆ ಇಂದು ದೇಶದ ಹೆಣ್ಣುಮಕ್ಕಳ ಕಷ್ಟಗಳನ್ನು ಕೇಳಲು ಪುರೊಸೊತ್ತಿಲ್ಲ. ಕೇವಲ ಮರಳು ಮಾತುಗಳನ್ನು ಆಡುವುದು ಮಾತ್ರ ಆಗಿದೆ. ಸುಪ್ರೀಂ ಕೋರ್ಟ್ ಕೊಟ್ಟಿರುವ ತೀರ್ಪನ್ನು ಸರ್ಕಾರ ಜನವರಿ ಒಳಗೆ ಜಾರಿಗೆ ತರದಿದ್ದರೆ, ನಮ್ಮ ಹೋರಾಟ ತೀವ್ರಗೊಳ್ಳಲಿದೆ ಎಂದು ಹೇಳಿದರು.

ಸಭೆಯನ್ನು ಉದ್ದೇಶಿಸಿ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಸುನಂದಾ ಎಚ್.ಎಸ್. ರವರು ಕರ್ನಾಟಕದಲ್ಲಿ ಅಂಗನವಾಡಿ ನೌಕರರ ಸಮಗ್ರ ಕಣ್ಣೋಟದೊಂದಿಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ವೇದಿಕೆಯಲ್ಲಿ ರಾಜ್ಯ ಕಾರ್ಯಾಧ್ಯಕ್ಷರಾದ ಶಾಂತಾ ಘಂಟೆ ಪದಾಧಿಕಾರಿಗಳಾದ ಜಿ. ಕಮಲಾ, ಯಮುನಾ ಗಾಂವ್ಕರ್, ಲಕ್ಷ್ಮಿ ದೇವಮ್ಮ, ಪದ್ಮಾ, ಸುರೇಖಾ ಶ್ರೀದೇವಿ ಚುಡೆ, ಉಮಾದೇವಿ, ಮಲ್ಲಮ್ಮ, ಮರೆಕ್ಕಾ ಮತ್ತಿತರರು ಉಪಸ್ಥಿತರಿದ್ದರು. ಸಮ್ಮೇಳನ ಸ್ವಾಗತ ಸಮಿತಿಯ ಕೆ. ನಾಗರತ್ನ ಸ್ವಾಗತಿಸಿದರು. ಸತ್ಯಬಾಬು ನಿರ್ವಹಿಸಿದರು.

ಪ್ರತಿನಿಧಿ ಅಧಿವೇಶನ ಮತ್ತು ಕರಡು ವರದಿಯ ಚರ್ಚೆಗಳು:

ರಾಜ್ಯದ ಮಹತ್ವದ ವಿದ್ಯಮಾನಗಳನ್ನು ಚರ್ಚಿಸಿದ ಕರಡು ವರದಿಯಲ್ಲಿ ಅಂಗನವಾಡಿಗಳ ಸ್ಥಿತಿ ಗತಿ, ಮಾರ್ಪಡಿಸಲಾದ ಸಕ್ಷಮ್ ಅಂಗನವಾಡಿಯಿಂದ, ಪೋಷಣ್ ಅಭಿಯಾನದಿಂದ ಕಾರ್ಯಕರ್ತೆ ಸಹಾಯಕಿಯರ ಕೆಲಸಗಳ ಒತ್ತಡ ಮತ್ತು ಅವರ ಮೇಲಿನ ಕಿರುಕುಳ, ಇತ್ತೀಚಿನ ಹೊಸ ಶಿಕ್ಷಣ ನೀತಿಯ ಪ್ರಭಾವ ಮತ್ತು ಪರಿಣಾಮಗಳೇನು, ಕಾರ್ಮಿಕ ಕಾಯ್ದೆ ತಿದ್ದುಪಡಿ ಹಾಗೂ ಮುಷ್ಕರದ ಹಕ್ಕು ವಿಚಾರ, ಕೃಷಿ ಸಂಬಂಧಿತ ಕಾಯ್ದೆಗಳನ್ನು ಜಾರಿಮಾಡಿದಲ್ಲಿ ಆಹಾರ ಭದ್ರತೆಯ ಮೇಲೆ ತನ್ಮೂಲಕ ಅಂಗನವಾಡಿ ಮತ್ತು ಬಿಸಿಯೂಟದ ಮೇಲಿನ ಪರಿಣಾಮಗಳೇನು, ಸರ್ಕಾರದ ನೀತಿ ಬದಲಿಸಲು ಮುಂದಿನ ಕರ್ತವ್ಯಗಳ ಕುರಿತು ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ಮತ್ತು ಕಾರ್ಯದರ್ಶಿ ಯಮುನಾ ಗಾಂವ್ಕರ್ ಕರಡು ವರದಿ ಮಂಡಿಸಿದರು. ಲೆಕ್ಕಪತ್ರವನ್ನು ಖಜಾಂಚಿ ಜಿ. ಕಮಲಾ ಮಂಡಿಸಿದರು.

ಪ್ರತಿನಿಧಿ ಅಧಿವೇಶವನ್ನು ಕಾ.ಎ.ಆರ್.ಸಿಂಧು ರವರು ಉದ್ಘಾಟಿಸಿದರು. ಕಾ. ಮೀನಾಕ್ಷಿ ಸುಂದರಂ ಅಗತ್ಯ ಮಾರ್ಗದರ್ಶನ ನೀಡಿ ಮಾತನಾಡಿದರು.

ಕರಡು ವರದಿ ಮೇಲೆ ಎಲ್ಲಾ ಜಿಲ್ಲೆಗಳ ಪ್ರತಿನಿಧಿಗಳು ಎರಡು ಹಂತದಲ್ಲಿ ಸುದೀರ್ಘವಾಗಿ ಗುಂಪು ಚರ್ಚೆ ನಡೆಸಿ ನಂತರ ಪ್ರತಿಕ್ರಿಯೆ ಮಂಡಿಸಿದರು. ಚರ್ಚಿಸಿದರು. ತಮ್ಮ ಸಂಕಷ್ಟಗಳು, ಕಿರುಕುಳ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಸ ಹೊಸ ಸುತ್ತೋಲೆಗಳ ಪರಿಣಾಮವಾಗಿ ಐಸಿಡಿಎಸ್ ಸಮರ್ಪಕವಾಗಿ ಹೇಗೆ ಜಾರಿ ಮಾಡಲು ತೊಡಕಾಗುವ ವಿಚಾರಕ್ಕೆ ಆಕ್ರೋಶ ವ್ಯಕ್ತಿಪಡಿಸಿದರು. ಆರು ವರ್ಷಗಳಿಂದ ಪಿಂಚಣಿಯ ಬದಲಿಗೆ ಕೊಡಲಾಗುತ್ತಿರುವ ನಿವೃತ್ತಿ ಪರಿಹಾರ ಮೊತ್ತ ಬಾರದೇ ಹಸಿವನಿಂದ ಕಂಗೆಡುವ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ದುಃಖದಿಂದ ತೋಡಿಕೊಂಡರು. ಎಲ್ಲಾ ಹಂತದ ಸಮಿತಿಗಳ ಕೆಲಸ ಕಾರ್ಯಗಳನ್ನೂ ವಿಮರ್ಶಿಸಿಕೊಂಡರು. ಸಂಘಟನೆಯ ಎಡೆಬಿಡದ ಹೋರಾಟಗಳ ಭಾಗವಾಗಿ ಬಂದ ಸೌಲಭ್ಯಗಳನ್ನು ತಾವು ಅನುಭವಿಸಲು ಸಂತಸ ವ್ಯಕ್ತಪಡಿಸುತ್ತಲೇ ಮುಂದಿನ ಹೋರಾಟ ತೀವ್ರಗೊಳಿಸಬೇಕಾದ ಅದಕ್ಕೆ ತಾವೆಲ್ಲ ಸಜ್ಜಾಗುತ್ತೇವೆಂದು ಬದ್ಧತೆ ವ್ಯಕ್ತಪಡಿಸಿದರು. ತಮ್ಮ ಚರ್ಚೆಗೆ ಸಮರ್ಪಕ ಉತ್ತರ ಪಡೆದು ತಿದ್ದುಪಡಿಗಳ ಒಳಗೊಳ್ಳುವಿಕೆಯಿಂದ ಕರಡು ವರದಿ ಅನುಮೋದಿಸಿ ಅಂಗೀಕರಿಸಿದರು.

ವಿವಿಧ ಸಮಿತಿಗಳು:

ಸಮ್ಮೇಳನವನ್ನು ಕಾ. ಎಸ್. ವರಲಕ್ಷ್ಮಿ, ಶಾಂತಾ ಘಂಟೆ, ಲೀಲಾವತಿ, ನಾಗರತ್ನ ಕೆ, ಪದ್ಮಾ, ಇಂದ್ರಮ್ಮ, ಭಾರತಿ ವಾಲಿ, ಸುರೇಖಾ, ಶ್ರೀದೇವಿ, ಪುಷ್ಪಾ, ಕಲಾವತಿ ಸಂಗಾತಿಗಳಿರುವ ಅಧ್ಯಕ್ಷೀಯ ಮಂಡಳಿ ನಡೆಸಿಕೊಟ್ಟಿತು. ಗುಲ್ಜಾರ್ ಬಾನು ಸಂಚಾಲಕತ್ವದಲ್ಲಿ ವಿದ್ಯಾ ವೈದ್ಯ, ನಳಿನಾ ಬೆಂಗಳೂರು, ನಾಗವೇಣಿ ಚಾಮರಾಜನಗರ, ಭಾರತಿ, ಉಡುಪಿ, ಪುಷ್ಪಲತಾ ಮೈಸೂರು ಇತರರು ಕೆಲಸ ನಿರ್ವಹಿಸಿದರು. ಸುಶೀಲಾ ನಾಡಾ ಸಂಚಾಲಕರಾಗಿರುವ ದಾಖಲಾತಿ ಸಮಿತಿಯಲ್ಲಿ ಸದಸ್ಯರಾಗಿ ಜಯಂತಿ ಹಾಸನ, ಬಸಮ್ಮ, ರಾಯಚೂರು ರಮಾ, ಮಂಡ್ಯ ಪ್ರಮಿಳಾ ಕುಮಾರಿ ನಿರ್ವಹಿಸಿದರು. ಪರಿಚಯ ಪತ್ರ ನಿರ್ವಹಿಸಿದವರು ಗೋದಾವರಿ, ದೊಡ್ಡವ್ವ, ಸುನಂದಾ ನಾಯಕ್, ಮಾರುತಿ ಚಿಟಗಿ ಮುಂತಾದವರು.

ಚಳುವಳಿಯ ಒಡನಾಡಿಗಳ ಶುಭಾಶಯ:

ಸ್ವಾಗತ ಸಮಿತಿ ಗೌರವ ಅಧ್ಯಕ್ಷರಾದ ಖ್ಯಾತ ಬಂಡಾಯ ಸಾಹಿತಿ ಕುಂ. ವೀರಭದ್ರಪ್ಪನವರು ಮಾತನಾಡುತ್ತಾ, ಭಾರತ ದೇಶದ ನಿಜವಾದ ಶೈಕ್ಷಣಿಕ ಭದ್ರ ಬುನಾದಿ ಹಾಕುವ ಶಾಲಾಪೂರ್ವ ಶಿಕ್ಷಣ ಉಳಿಯಬೇಕು, ಅತ್ಯಂತ ಕಷ್ಟದಲ್ಲಿ ಜೀವನ ನಡೆಸುತ್ತಿರುವ ಅಂಗನವಾಡಿ ತಾಯಂದಿರ ಬದುಕು ಉತ್ತಮವಾಗಲು ಕೆಲಸದ ಭದ್ರತೆ ನೀಡಿ ಖಾಯಂ ಮಾಡಲು ಸರ್ಕಾರ ಮುಂದಾಗಲಿ. ನಮ್ಮ ಸಮಾಜದಲ್ಲಿ ಮಹಿಳೆಯರನ್ನು ನೋಡುವ ದೃಷ್ಟಿಯೇನೂ ಬದಲಾಗಿಲ್ಲ. ದಿನವಿಡೀ ದುಡಿಮೆ ತ್ಯಾಗವನ್ನೇ ಬಯಸುತ್ತಾರೆ ಹೊರತೂ ಕೆಲಸದ ಗುರ್ತಿಸುವಿಕೆ ಇಲ್ಲ. ಪ್ರಶ್ನಿಸುವವರ ಧ್ವನಿ ದಮನಿಸಲು ಸರ್ಕಾರವೇ ಮುಂದಾಗಿದೆ. ಜನರ ಐಕ್ಯತೆ ಮುರಿಯುವ ನೀತಿ ಬಗ್ಗೆ ಎಚ್ಚರವಿರಲಿ, ಎಂದು ದೇಶದ ವಿವಿಧ ಘಟನಾವಳಿಗಳನ್ನು ವಿವರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು ಬಸವರಾಜ, ಗ್ರಾಮ ಪಂಚಾಯತ್ ನೌಕರರ ಸಂಘದ ಆರ್. ಬಸವರಾಜ, ಆಶಾ, ಬಿಸಿಯೂಟ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ, ಅಧ್ಯಕ್ಷರಾದ ಕಾ. ಲಕ್ಷ್ಮಿದೇವಿ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಮುಂತಾದವರು ಸಮ್ಮೇಳನಕ್ಕೆ ಶುಭಕೋರಿದರು.

ನಿರ್ಣಯಗಳು:

ಮುಂದಿನ ಮೂರು ವರ್ಷಗಳಲ್ಲಿ ಹೋರಾಟಗಳನ್ನು ತೀವ್ರಗೋಳಿಸಲು, ತಲುಪದೇ ಇರುವವರನ್ನು ತಲುಪಲು, ಗ್ರ್ಯಾಚ್ಯುಟಿ ಕುರಿತ ತೀರ್ಪು ಜಾರಿಗೊಳಿಸಲು, ಬೆಲೆ ಏರಿಕೆ ವಿರುದ್ಧ ಕನಿಷ್ಟ ಕೂಲಿ 26000 ರೂ. ಹಾಗೂ ತಿಂಗಳ ಪಿಂಚಣಿ 10000 ರೂ. ನೀಡಲು, ಯೋಜನಾ ಕಾರ್ಮಿಕರ ಬೇಡಿಕೆಗೆ ಭ್ರಹತ್ ಹೋರಾಟ ರೂಪಿಸಲು, ಮಹಿಳೆಯರ ಮೇಲಿನ ಅತ್ಯಾಚಾರ ದೌರ್ಜನ್ಯ ಹಿಮ್ಮೆಟ್ಟಿಸಲು, ಕೋಮುವಾದದ ಅಪಾಯಕಾರಿ ಅಂಶ ಅಂಗನವಾಡಿ ಯೊಳಗೆ ನುಸುಳುವುದನ್ನು ತಡೆಯಲು, ಇದೇ ಅಕ್ಟೋಬರ್ 2 ಐಸಿಡಿಎಸ್ ಉಳಿಸಿ ಹೋರಾಟ ನಡೆಸಲು, ನವೆಂಬರ್ 14 ಮಕ್ಕಳ ದಿನದಂದು ಭಜನ್ ನಹೀ ಭೋಜನ್ ಎಂದು ಬೇಡಿಕೆ ಮುಂದಿಡಲು, ದೇಶದ ಎಲ್ಲ ಸಂಸದರುಗಳಿಗೂ ಚಾರ್ಟರ್ ಆಫ್ ಡಿಮಾಂಡ್ ಮುಂದಿಟ್ಟು ಜವಾಬ್ ಮಾಂಗೋ ಉತ್ತರ ಕೇಳುವ ಹೋರಾಟ ನಡೆಸಲು, ಸಿಐಟಿಯುನ 17 ನೇ ರಾಷ್ಟ್ರೀಯ ಸಮ್ಮೇಳನ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಮಾಡಲು, ತೀರ್ಮಾನಿಸಲಾಯಿತು.

ಸಮ್ಮಾನ ಕಾರ್ಯಕ್ರಮ:

ರಾಜ್ಯದಲ್ಲಿ ಶಿಶು ಅಭಿವೃದ್ಧಿ ಯೋಜನೆಯ ಬಲವರ್ಧನೆಗೆ ಹಗಲು ಇರುಳೂ ಸೇವೆ ಸಲ್ಲಿಸಿ ನಿವೃತ್ತರಾದ, ಸಂಘಟನೆಯಲ್ಲಿ ತಾಲೂಕು ಜಿಲ್ಲಾ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿಯಾಗಿ ಕೆಲಸ ಮಾಡಿದವರಿಗೆ ಸಮ್ಮಾನ ಮಾಡಲಾಯಿತು. ಸೇವೆಯಿಂದ ನಿವೃತ್ತಿ ಹೊಂದಿದ ಅನುಭವಸ್ಥ ಅಂಗನವಾಡಿ ನೌಕರ ಸಂಗಾತಿಗಳು ಜನಚಳುವಳಿಯಲ್ಲಿ ಅರ್ಪಿಸಿಕೊಳ್ಳಲು ಬದ್ಧತೆ ವ್ಯಕ್ತಪಡಿಸಿದರು. ಸಂಘಟನೆಯ ನಾಯಕರಾದ ಎ. ಆರ್. ಸಿಂಧು, ಎಸ್ ವರಲಕ್ಷ್ಮಿ, ಮೀನಾಕ್ಷಿ ಸುಂದರಂ, ಶಾಂತಾ ಘಂಟೆ, ಆರ್. ಬಸವರಾಜ್, ಸತ್ಯಬಾಬು, ಕಮಲಾ ಹಾಗೂ ರಾಜ್ಯ ಪದಾಧಿಕಾರಿಗಳು, ಸ್ವಾಗತ ಸಮಿತಿ ಸಂಗಾತಿಗಳು ಸಮ್ಮಾನ ಕಾರ್ಯಕ್ರಮ ನೆರವೇರಿಸಿದರು.

ಈ ಸಂದರ್ಭದಲ್ಲಿ ಶುಭಾಶಯದ ಘೋಷಣೆಗಳು ಮೊಳಗಿದವು.

ಹಿನ್ನೋಟ ಮುನ್ನೋಟ; ಚಳುವಳಿಯ ಕಣ್ಣೋಟ:

ಸ್ವಾತಂತ್ರ್ಯ 75 ರ ಸಂದರ್ಭದಲ್ಲಿ ನಿಜವಾದ ಸ್ವಾತಂತ್ರ್ಯಕ್ಕೆ ಹೋರಾಡಿದ ಅನೇಕರ ನೆನಪುಗಳೊಂದಿಗೆ ಸಚಿತ್ರ ಪ್ರದರ್ಶನವನ್ನು ಮಾಡಲಾಗಿತ್ತು. ಕೋಮು ಸೌಹಾರ್ದತೆಯ ಪ್ರೀತಿ ಪದಗಳ ಪಯಣದ ಅನೇಕ ಮಾರ್ಮಿಕ ಘೋಷವಾಕ್ಯಗಳನ್ನು, ಕವನಗಳನ್ನು ಪ್ರದರ್ಶಿಸಲಾಗಿತ್ತು. ತೊಂಬತ್ತರ ದಶಕದಿಂದ ಹಂತಹಂತವಾಗಿ ಸಿಐಟಿಯು ಅಡಿಯಲ್ಲಿ ಸಂಘಟಿತರಾಗುತ್ತ ನಂತರ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಚನೆಯಾಗಿ ಈವರೆಗಿನ ಹಲವು ಕರಪತ್ರಗಳು, ಪೋಸ್ಟರ್ ಗಳು ಹಾಗೂ ಸರ್ಕಾರದ ಹಂತದದಲ್ಲಿ ಸಿಐಟಿಯು

75 ವರ್ಷಗಳ ಸ್ವಾತಂತ್ರ್ಯ:

ಗ್ರಾಮೀಣ ಜನಸಮೂಹಗಳಿಗೆ ಈಗಲೂ ವಂಚನೆ ಮುಂದುವರೆದಿದೆ



ಕೃಷಿಯಲ್ಲಿ ಬಂಡವಾಳಶಾಹಿ ಅಭಿವೃದ್ಧಿಯ ಸ್ವಾತಂತ್ರ್ಯದ ನಂತರದ ಅವಧಿಯನ್ನು ಎರಡು ಹಂತಗಳಾಗಿ ವಿಂಗಡಿಸಿದೆ – 1947 ರಿಂದ 1990 ರವರೆಗಿನ ಸರಕಾರ ಪ್ರಾಯೋಜಿತ ಹಂತ ಮತ್ತು 1991 ರಿಂದ ನವ–ಉದಾರವಾದಿ ಹಂತ. ಮೊದಲ ಹಂತದ ಕ್ರಮಗಳು ಹಸಿರು ಕ್ರಾಂತಿಗೆ ಕಾರಣವಾಗಿ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸಿದವು ಮತ್ತು ಆಹಾರ ಸ್ವಾವಲಂಬನೆಯನ್ನು ಸಾಧಿಸಲು ಸಹಾಯ ಮಾಡಿದವು. ಆದರೆ ಅದರೊಂದಿಗೆ, ಎರಡು ರೀತಿಯ ಅಸಮಾನತೆಗಳು ಸಹ ಬೆಳೆದುಬಂದವು – ಪ್ರದೇಶಗಳ ನಡುವಿನ ಅಸಮಾನತೆ ಮತ್ತು ರೈತರ ನಡುವಿನ ಅಸಮಾನತೆ. ಈಗಮೋದಿ ಆಳ್ವಿಕೆಯಲ್ಲಿ ಹಲವು ಪಟ್ಟು ಹೆಚ್ಚು ಉಗ್ರತೆಯಿಂದ ಮುಂದುವರೆಯುತ್ತಿರುವ ಎರಡನೇ ಹಂತದಲ್ಲಿ ಎಲ್ಲಾ ಕೃಷಿ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ಮತ್ತು ದೇಶೀಯ ಕಾರ್ಪೊರೇಟ್‌ಗಳ ಸುಲಿಗೆಕೋರ ಅತಿಕ್ರಮಣದಿಂದ ರೈತಾಪಿಗಳು ಮತ್ತು ಗ್ರಾಹಕರು ಇಬ್ಬರಿಗೂ ಹಾನಿಯುಂಟಾಗಿದೆ. ಒಂದು ಬಲಿಷ್ಟ ಕಾರ್ಮಿಕ–ರೈತ ಐಕ್ಯತೆಯನ್ನು ಬೆಸೆಯುವ ಮೂಲಕ ಈಗಿನ ಕಾರ್ಪೊರೇಟ್ ಕೋಮುವಾದಕ್ಕೆ ಎದುರಾಗಿ ಕಠಿಣ ಹೋರಾಟ ನಡೆಸಬೇಕಾಗಿದೆ.

ಅಶೋಕ ಧವಳೆ

ಅನು: **ರಾಮು ಕೆ.ಎಸ್.**

ಸ್ವಾತಂತ್ರ್ಯದ 75 ವರ್ಷಗಳ ನಂತರ, ಕೃಷಿ ಕ್ಷೇತ್ರದಲ್ಲಿರುವಷ್ಟು ದೊಡ್ಡ ಬಿಕ್ಕಟ್ಟು ಬಹುಶಃ ಭಾರತದಲ್ಲಿ ಬೇರೆ ಯಾವುದೇ ಕ್ಷೇತ್ರದಲ್ಲಿಲ್ಲ. ಎನ್‌ಸಿಆರ್‌ಬಿ(ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ)ಯ ಅಂಕಿಅಂಶಗಳ ಪ್ರಕಾರ, 1995 ರಿಂದ 2020 ರವರೆಗೆ, 25 ವರ್ಷಗಳಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ರೈತರು ಮತ್ತು ಕೃಷಿ ಕಾರ್ಮಿಕರು ಹತಾಶ ಆತ್ಮಹತ್ಯೆಗೆ ಇಳಿಯುವಂತಾಗಿದೆ. ಇದು ನವ–ಉದಾರವಾದಿ ನೀತಿಗಳ ನೇರ ಪರಿಣಾಮ. ಇವರಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕಳೆದ ಎಂಟು ವರ್ಷಗಳಲ್ಲಿ ತಮ್ಮ ಬದುಕನ್ನು ಅಂತ್ಯಗೊಳಿಸಿದ್ದಾರೆ.

2001–2011ರ ನಡುವೆ ಸಾಗುವಳಿದಾರರ ಸಂಖ್ಯೆಯಲ್ಲಿ 90 ಲಕ್ಷ ಇಳಿಕೆ ಮತ್ತು ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ 3 ಕೋಟಿ ಹೆಚ್ಚಳವಾಗಿದೆ. 2015–16ರಲ್ಲಿ, ಭಾರತದಲ್ಲಿನ ಗ್ರಾಮೀಣ ಕುಟುಂಬಗಳಲ್ಲಿ 47 ಪ್ರತಿಶತಕ್ಕೂ ಹೆಚ್ಚು ಕುಟುಂಬಗಳು ಭೂರಹಿತವಾಗಿದ್ದವು. ಗ್ರಾಮೀಣ ದಲಿತರು ಮತ್ತು ಮುಸ್ಲಿಮರಲ್ಲಿ ಭೂರಹಿತ ಕುಟುಂಬಗಳ ಪ್ರಮಾಣವು ಶೇಕಡಾ 60 ಕ್ಕಿಂತ ಹೆಚ್ಚಿದೆ. ಆದಿವಾಸಿ ಕುಟುಂಬಗಳು, ವಿಶೇಷವಾಗಿ ಪ್ರಧಾನವಾಗಿ ಆದಿವಾಸಿ ಪ್ರದೇಶಗಳಲ್ಲಿ, ಐತಿಹಾಸಿಕವಾಗಿ ಭೂಮಿಯನ್ನು ಹೊಂದಿದ್ದರೂ, ಕಳೆದ ಮೂರು ದಶಕಗಳಲ್ಲಿ ಹೆಚ್ಚಿನ ಪ್ರಮಾಣದ ಸ್ಥಳಾಂತರದಿಂದಾಗಿ ಆದಿವಾಸಿಗಳಲ್ಲಿ ಭೂರಹಿತರ ಪ್ರಮಾಣವು 10 ಪ್ರತಿಶತದಷ್ಟು ಹೆಚ್ಚಾಗಿದೆ. ಮತ್ತೊಂದೆಡೆ, ಎನ್‌ಎಫ್‌ಹೆಚ್‌ಎಸ್(ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ)ದತ್ತಾಂಶವು ಭಾರತದಲ್ಲಿನ 20 ಪ್ರತಿಶತದಷ್ಟು ಭೂಮಿಯು ತಲಾ 30 ಹೆಕ್ಟೇರ್ (75 ಎಕರೆ) ಗಿಂತ ಹೆಚ್ಚು ಭೂಮಿಯನ್ನು ಹೊಂದಿರುವ ಕುಟುಂಬಗಳ ಕೈಯಲ್ಲಿದೆ ಎಂದು ತೋರಿಸುತ್ತದೆ.

ಮನರೇಗ(ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ) ಅಧಿಕೃತ ಮಾಹಿತಿಯ ಪ್ರಕಾರ, ಕಾಯಿದೆಯಲ್ಲಿ ಕಡ್ಡಾಯಗೊಳಿಸಲಾಗಿರುವ 100 ದಿನಗಳ ಬದಲಿಗೆ ,2021–22ರ ಅವಧಿಯಲ್ಲಿ ಕೃಷಿ ಕಾರ್ಮಿಕರು ಕೆಲಸ ಪಡೆದ ಸರಾಸರಿ ದಿನಗಳು ವರ್ಷಕ್ಕೆ ಕೇವಲ 49 ದಿನಗಳು ಮಾತ್ರ. ಸಿಎಂಐಇ(ಭಾರತೀಯ ಅರ್ಥವ್ಯವಸ್ಥೆಯ ಪರಿವೀಕ್ಷಣಾ ಕೇಂದ್ರ) ಒದಗಿಸಿದ ಮಾಹಿತಿಯ ಪ್ರಕಾರ, ಜೂನ್ 2022 ರಲ್ಲಿ, ಗ್ರಾಮೀಣ ಭಾರತದಲ್ಲಿ ಎಂಭತ್ತು ಲಕ್ಷ ಉದ್ಯೋಗಗಳು ಕಳೆದುಹೋಗಿವೆ, ಗ್ರಾಮೀಣ ನಿರುದ್ಯೋಗ ದರವು ಶೇಕಡಾ 1.4 ರಿಂದ ಶೇಕಡಾ 8 ಕ್ಕೆ ಬೃಹತ್ ಪ್ರಮಾಣದಲ್ಲಿ ಏರಿದೆ. ಕಐಈಖ ಪಿಎಲ್‌ಎಫ್‌ಎಸ್(ನಿಯತಕಾಲಿಕ ಶ್ರಮಬಲ ಸರ್ವೆ) ಮಾಹಿತಿಯ ಪ್ರಕಾರ, 2018–19 ರಲ್ಲಿ, ಪ್ರಮುಖ ದುಡಿಯುವ ವಯಸ್ಸಾದ 21 ರಿಂದ 59 ವರ್ಷ ವಯೋಮಾನದವರಲ್ಲಿ, ಶೇಕಡಾ 10 ರಷ್ಟು ಗ್ರಾಮೀಣ ಪುರುಷರು ಮತ್ತು ಶೇಕಡಾ 72 ರಷ್ಟು ಮಹಿಳೆಯರು ಯಾವುದೇ ಉದ್ಯೋಗವನ್ನು ಹೊಂದಿರಲ್ಲಿಲ್ಲ. ಕೋವಿಡ್ ಸಾಂಕ್ರಾಮಿಕಕ್ಕೆ ಮುಂಚೆಯೇ ಈ ಅಂಕಿ ಅಂಶವು ಇತ್ತು, ನಂತರ ಕೊವಿಡ್ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು. ಹಸಿವು ಮತ್ತು ಅಪೌಷ್ಟಿಕತೆಯಿಂದಾಗಿ ನಮ್ಮ ದೇಶದ ಬುಡಕಟ್ಟು ಪ್ರದೇಶಗಳಲ್ಲಿ ಪ್ರತಿ ವರ್ಷ ಲಕ್ಷಗಟ್ಟಲೆ ಮಕ್ಕಳ ಸಾವು ನಿರಂತರವಾಗಿ ಮುಂದುವರಿಯುತಿದ್ದು, ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ, ಭಾರತವು 2021 ರಲ್ಲಿ 116 ದೇಶಗಳಲ್ಲಿ 101 ನೇ ಸ್ಥಾನಕ್ಕೆ ಕುಸಿದಿದೆ.

ಇವು ಭಾರತದ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ಇಂದು ಭಾರತದಲ್ಲಿನ ಕಠೋರ ಕೃಷಿ ಬಿಕ್ಕಟ್ಟಿನ ಕೆಲವು ಜ್ವಲಂತ ಲಕ್ಷಣಗಳಾಗಿವೆ. ಅಂತಹ ಪರಿಸ್ಥಿತಿ ಹೇಗೆ ಮತ್ತು ಏಕೆ ಬಂದಿತು?

ಎರಡು ಆಧಾರಭೂತ ಗ್ರಾಮೀಣ ವಿರೋಧಾಭಾಸಗಳು

ಡಿಸೆಂಬರ್ 2003ರಲ್ಲಿ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಅಳವಡಿಸಿಕೊಂಡ 'ಪರ್ಯಾಯ ಕೃಷಿ ನೀತಿ' ದಾಖಲೆಯು ಕೃಷಿಯಲ್ಲಿ ಬಂಡವಾಳಶಾಹಿ ಅಭಿವೃದ್ಧಿಯ ಸ್ವಾತಂತ್ರ್ಯದ ನಂತರದ ಅವಧಿಯನ್ನು ಎರಡು ಹಂತಗಳಾಗಿ ವಿಂಗಡಿಸಿದೆ – 1947 ರಿಂದ 1990 ರವರೆಗಿನ ಸರಕಾರ ಪ್ರಾಯೋಜಿತ ಹಂತ ಮತ್ತು 1991 ರಿಂದ ನವ–ಉದಾರವಾದಿ ಹಂತ. ಇದರ ಬೆಳಕಿನಲ್ಲಿ, ಇದು ಎರಡು ಪ್ರಮುಖ ಗ್ರಾಮೀಣ ವಿರೋಧಾಭಾಸಗಳ ರೂಪುರೇಷೆಯನ್ನು ಈ ಕೆಳಗಿನಂತೆ ಕೊಟ್ಟಿದೆ:

"ಮೇಲಿನ ವಿಶ್ಲೇಷಣೆಯಿಂದ, ಭಾರತೀಯ ಕೃಷಿಯಲ್ಲಿನ ಪ್ರಸ್ತುತ ಪರಿಸ್ಥಿತಿಯು ಎರಡು ಪ್ರಮುಖ ವಿರೋಧಾಭಾಸಗಳಿಂದ ನಿರೂಪಿಸಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿದೆ. ಮೊದಲನೆಯದು ಗ್ರಾಮೀಣ ಶ್ರೀಮಂತರು, ಭೂಮಾಲೀಕರು, ದೊಡ್ಡ ಬಂಡವಾಳಶಾಹಿ ರೈತರು, ದೊಡ್ಡ ವ್ಯಾಪಾರಿಗಳು, ಲೇವಾದೇವಿಗಾರರು ಮತ್ತು ಅವರ ಮಿತ್ರರು ಒಂದೆಡೆ, ಮತ್ತೊಂದೆಡೆ, ಕೃಷಿ ಕಾರ್ಮಿಕರು, ಬಡ ಮತ್ತು ಮಧ್ಯಮ ರೈತರು ಮತ್ತು ಗ್ರಾಮೀಣ ಕುಶಲಕರ್ಮಿಗಳನ್ನು ಒಳಗೊಂಡಿರುವ ರೈತಾಪಿ ಸಮೂಹದ ನಡುವಿನ ತೀಕ್ಷ್ಣವಾದ ವಿಭಜನೆಯಾಗಿದೆ. ಎರಡನೆಯದು ಸರ್ಕಾರದ ಸಾಮ್ರಾಜ್ಯಶಾಹಿ–ಚಾಲಿತ ಎಲ್‌ಪಿಜಿ(ಉದಾರೀಕರಣ–ಖಾಸಗೀಕರಣ–ಜಾಗತೀಕರಣ) ನೀತಿಗಳಿಗೆ ರೈತವರ್ಗದಿಂದ ಮಾತ್ರವಲ್ಲದೆ ಗ್ರಾಮೀಣ ಶ್ರೀಮಂತರ ವಿಭಾಗಗಳಿಂದಲೂ ಹೆಚ್ಚುತ್ತಿರುವ ವಿರೋಧವಾಗಿದೆ."

ಬಂಡವಾಳಶಾಹಿ ಅಭಿವೃದ್ಧಿಯ ಪ್ರಭುತ್ವ ಪ್ರಾಯೋಜಿತ ಹಂತ

ಸ್ವಾತಂತ್ರ್ಯದ ನಂತರ ಬಂದ ಕಾಂಗ್ರೆಸ್ ಸರ್ಕಾರಗಳ ಕೃಷಿ ನೀತಿಗಳು ಅರೆ–ಊಳಿಗಮಾನ್ಯ ಭೂಮಾಲೀಕರನ್ನು ಬಂಡವಾಳಶಾಹಿ ಭೂಮಾಲೀಕರನ್ನಾಗಿ ಪರಿವರ್ತಿಸುವ ಮತ್ತು ಶ್ರೀಮಂತ ರೈತರ ಸ್ತರವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದ್ದವು. ಇದು ರೈತರಲ್ಲಿ ವರ್ಗಭೇದವನ್ನು ಮತ್ತಷ್ಟು ತೀವ್ರಗೊಳಿಸಿತು. ಪಿ ಸಿ ಮಹಲನೋಬಿಸ್ ಅವರು 1950 ರ ದಶಕದ ಅಂತ್ಯದಲ್ಲಿ ದೇಶದಲ್ಲಿ 6.3 ಕೋಟಿ ಎಕರೆಗಳಿಗಿಂತ ಕಡಿಮೆಯಿಲ್ಲದ ಭೂಮಿಯನ್ನು ಪುನರ್ವಿತರಣೆಗೆ ಲಭ್ಯವಿರುವುದಾಗಿ ಅಂದಾಜಿಸಿದ್ದರು. ಈ ಭೂಮಿಯ ಒಂದು ಸಣ್ಣ ಭಾಗವನ್ನು ಸಹ ಸ್ವಾಧೀನಪಡಿಸಿಕೊಂಡಿಲ್ಲ ಅಥವಾ ಕೃಷಿ ಕಾರ್ಮಿಕರಿಗೆ ಅಥವಾ ಬಡ ರೈತರಿಗೆ ವಿತರಿಸಲಾಗಿಲ್ಲ. ದೇಶದ ಬಹುತೇಕ ಭಾಗಗಳಲ್ಲಿ ಭೂಕೇಂದ್ರೀಕರಣವು ಹೆಚ್ಚು ಕಡಿಮೆ ಬದಲಾಗದೆ ಉಳಿದಿದೆ; ವಾಸ್ತವವಾಗಿ, ಇತ್ತೀಚಿನ ವರ್ಷಗಳಲ್ಲಿ, ಇದು ಮತ್ತಷ್ಟು ಹೆಚ್ಚಾಗಿದೆ.

ಸಿಪಿಐ(ಎಂ) ಕಾರ್ಯಕ್ರಮವು ಪ್ಯಾರಾ 3.15 ರಲ್ಲಿ ಹೀಗೆ ಹೇಳುತ್ತದೆ: "ಭಾರತದ ಜನರ ಮುಂದೆ ಕರ್ಷಕ ಪ್ರಶ್ನೆಯು ಅಗ್ರಗಣ್ಯ ರಾಷ್ಟ್ರೀಯ ಪ್ರಶ್ನೆಯಾಗಿ ಮುಂದುವರೆದಿದೆ. ಭೂಮಾಲೀಕತ್ವ, ಲೇವಾದೇವಿಗಾರ–ವ್ಯಾಪಾರಿ ಶೋಷಣೆ ಮತ್ತು ಗ್ರಾಮಾಂತರದಲ್ಲಿ ಜಾತಿ ಮತ್ತು ಲಿಂಗ ದಬ್ಬಾಳಿಕೆಯನ್ನು ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಿರುವ ತೀವ್ರಗಾಮಿ ಮತ್ತು ಆಮೂಲಾಗ್ರ ಕರ್ಷಕ ಸುಧಾರಣೆಗಳನ್ನು ಒಳಗೊಂಡಂತೆ ಅದನ್ನು ಬಗೆಹರಿಸಲು ಕ್ರಾಂತಿಕಾರಿ ಬದಲಾವಣೆಯ ಅಗತ್ಯವಿದೆ. ಭಾರತದಲ್ಲಿನ ಬೂರ್ಜ್ವಾ–ಭೂಮಾಲೀಕ ಆಳ್ವಿಕೆಯ ದಿವಾಳಿತನವು ಕರ್ಷಕ ಪ್ರಶ್ನೆಯನ್ನು ಪ್ರಗತಿಪರ, ಪ್ರಜಾಸತ್ತಾತ್ಮಕ ರೀತಿಯಲ್ಲಿ ಪರಿಹರಿಸುವಲ್ಲಿ ಮಾತ್ರವಲ್ಲ, ಎದುರಿಸುವಲ್ಲಿಯೂ ವಿಫಲವಾಗಿದೆ ಎಂಬುದು ಇದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಬೇರೆಲ್ಲೂ ಕಾಣದು.".

1940 ರ ದಶಕದಲ್ಲಿ, ಒಂದು ಕರ್ಷಕ ಕ್ರಾಂತಿಯ ಗುರಿಯತ್ತ ಮುನ್ನಡೆಯಲು, ಕಮ್ಯುನಿಸ್ಟ್ ಪಕ್ಷ ಮತ್ತು ಎಐಕೆಎಸ್ ಭಾರತದ ರೈತ ಚಳವಳಿಯ ಚಾರಿತ್ರಿಕ ದಾಖಲೆಯಲ್ಲಿ ಚಿನ್ನದ ಅಕ್ಷರಗಳಲ್ಲಿ ಕೆತ್ತಲಾದ ಐತಿಹಾಸಿಕ ಹೋರಾಟಗಳ ಸರಣಿಯನ್ನು ಮುನ್ನಡೆಸಿದವು. ಅವುಗಳಲ್ಲಿ ಬಂಗಾಳದ ತೇಭಾಗ, ಕೇರಳದ ಪುನ್ನಪ್ರ ವಯಲಾರ್ ಮತ್ತು ಉತ್ತರ ಮಲಬಾರ್, ತ್ರಿಪುರಾದ ಗಣ ಮುಕ್ತಿ ಪರಿಷತ್, ಅಸ್ಸಾಂನ ಸುರ್ಮಾ ಕಣಿವೆ ಮತ್ತು ಮಹಾರಾಷ್ಟ್ರದ ವಾರ್ಲಿ ಆದಿವಾಸಿ ಬಂಡಾಯ ಸೇರಿವೆ. ತೆಲಂಗಾಣದಲ್ಲಿ ನಡೆದ ಭವ್ಯ ಸಶಸ್ತ್ರ ರೈತ ಬಂಡಾಯ ಇವೆಲ್ಲಕ್ಕೆ ಕಿರೀಟಪ್ರಾಯವಾಗಿದೆ.

ಈ ಎಲ್ಲಾ ಹೋರಾಟಗಳು ಊಳಿಗಮಾನ್ಯ ಪದ್ಧತಿಯ ಅದರ ಎಲ್ಲಾ ರೂಪಗಳ ವಿರುದ್ಧ ನಿರ್ದೇಶಿಸಲ್ಪಟ್ಟವು. ಅವು ಜಮೀನ್ದಾರಿ ವ್ಯವಸ್ಥೆಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದವು ಮತ್ತು ಆಮೂಲಾಗ್ರ ಭೂ ಸುಧಾರಣೆಗಳನ್ನು ಪ್ರತಿಪಾದಿಸಿದವು. ಸ್ವಾತಂತ್ರ್ಯದ ನಂತರದ ಅವಧಿಯಲ್ಲಿ, ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಲ್ಲಿ ಸಿಪಿಐ(ಎಂ) ನೇತೃತ್ವದ ಎಡ ನೇತೃತ್ವದ ರಾಜ್ಯ ಸರ್ಕಾರಗಳು ಮಾತ್ರ ಗಣನೀಯ ಭೂಸುಧಾರಣೆ ಮತ್ತು ಭೂರಹಿತರಿಗೆ ಭೂಮಿಯ ಮರುಹಂಚಿಕೆಯ ಕಾನೂನುಗಳನ್ನು ಜಾರಿಗೆ ತಂದದ್ದು ಮತ್ತು ಕಾರ್ಯಕ್ರಮವನ್ನು ನಡೆಸಿದ್ದು ಆಕಸ್ಮಿಕವೇನಲ್ಲ. ಫಲಾನುಭವಿಗಳಲ್ಲಿ ಒಂದು ದೊಡ್ಡ ವಿಭಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದರು.

ಭೂಕೇಂದ್ರೀಕರಣದ ಜೊತೆಗೆ, ಸರ್ಕಾರದ ನೀತಿಗಳು ನೀರಾವರಿ ಮತ್ತು ವಿದ್ಯುತ್ ಸೌಲಭ್ಯಗಳು, ಕೃಷಿ ಲಾಗುವಾಡುಗಳಿಗೆ ಸಬ್ಸಿಡಿಗಳು, ಸಾಂಸ್ಥಿಕ ಸಾಲ ಸೌಲಭ್ಯಗಳು, ಕೃಷಿ ಉಪಕರಣಗಳು, ಹೆಚ್ಚು ಇಳುವರಿ ನೀಡುವ ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಕೊಳವೆ ಬಾವಿಗಳು, ಪಂಪ್ ಸೆಟ್‌ಗಳು, ವಾಹನಗಳು ಮತ್ತು ಸಾರಿಗೆಯನ್ನು ಭೂಮಾಲೀಕರು ಮತ್ತು ಶ್ರೀಮಂತ ರೈತರು ತಮ್ಮದಾಗಿಸಿಕೊಳ್ಳುವಂತೆ ಖಾತ್ರಿಪಡಿಸಿದವು. ಈ ವಿಭಾಗಗಳೇ ಗ್ರಾಮೀಣ ಭಾರತದಲ್ಲಿ ಬೂರ್ಜ್ವಾ–ಭೂಮಾಲಿಕ ಪಕ್ಷಗಳ ಪ್ರಭಾವಿ ಬೆಂಬಲದ ನೆಲೆಯಾದವು.

ಈ ಎಲ್ಲಾ ಗಂಭೀರ ಮಿತಿಗಳ ಹೊರತಾಗಿಯೂ, ಬಂಡವಾಳಶಾಹಿ ಅಭಿವೃದ್ಧಿಯ ಸರಕಾರ ಪ್ರಾಯೋಜಿತ ಹಂತವು ಕೆಲವು ಸಕಾರಾತ್ಮಕ ಲಕ್ಷಣಗಳನ್ನು ಹೊಂದಿತ್ತು, ಈಗ ನವ–ಉದಾರವಾದಿ ಹಂತದಲ್ಲಿ ಅದರ ನಿರಾಕರಣೆಯಾಗುತ್ತಿದೆ.

ಉದಾಹರಣೆಗೆ, ಹಿಂದಿನ ಹಂತದಲ್ಲಿ, ನೀರಾವರಿ, ವಿದ್ಯುತ್, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿ, ವಿಸ್ತರಣೆ, ಸಾರಿಗೆ, ಸಂವಹನ, ಶೇಖರಣಾ ಸೌಲಭ್ಯಗಳ ವಿಸ್ತರಣೆಗಾಗಿ ಸರ್ಕಾರಗಳು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಮಾಡಿದವು ಮತ್ತು ಈ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಲಾಯಿತು. ಕೃಷಿ ಉತ್ಪನ್ನಗಳ ಖರೀದಿಗೆ ಸಹಾಯಧನ ನೀಡಲಾಯಿತು. ಕೆಲವು ಬೆಳೆಗಳ ಸಂದರ್ಭದಲ್ಲಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಮತ್ತು ಖರೀದಿ ಕಾರ್ಯವಿಧಾನವನ್ನು ಸ್ಥಾಪಿಸುವ ಮೂಲಕ ಉತ್ಪಾದಕರ ಹಿತಾಸಕ್ತಿಗಳನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು (ಪಿಡಿಎಸ್) ಸರ್ಕಾರದ ಒಂದು ಮಟ್ಟದ ಸಹಾಯಧನದೊಂದಿಗೆ ಸ್ಥಾಪಿಸಲಾಯಿತು.

ವಿಶೇಷವಾಗಿ ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ರೈತರಿಗೆ ಸಾಂಸ್ಥಿಕ ಸಾಲ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಲಾಯಿತು. ದೇಶೀಯ ಮಾರುಕಟ್ಟೆಯನ್ನು ರಕ್ಷಿಸುವ ಸಲುವಾಗಿ ಕೃಷಿ

ಪುಟ 12 ಕ್ಕೆ

ಮಧ್ಯಪ್ರವೇಶದಿಂದ ಜಯಗಳಿಸಿದ ಹೋರಾಟದ ಸಂಕಥನಗಳ ದಾಖಲೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ನಾಡಿನ ಅನೇಕ ಸಾಹಿತಿಗಳು ಹೋರಾಟಗಾರರು ಬರೆದ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಯನ್ನೆ ತೆರೆಯಲಾಗಿತ್ತು. ರಾಜ್ಯದಲ್ಲಿ ಐಫಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು, ಹಿರಿಯ ಸಾಹಿತಿ ಕುಂ. ವೀರಭದ್ರಪ್ಪನವರು, ಸ್ಥಳೀಯ ಅನೇಕ ಸ್ನೇಹಿತ ಸಂಗಾತಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೊನೆಯಲ್ಲಿ, ನಮ್ಮೆಲ್ಲರ ಬದುಕಿನ ರಕ್ಷಣೆಗೆ ವರ್ಗ ಹೋರಾಟದ ದ್ಯೋತಕವಾಗಿರುವ ಕೆಂಬಾವುಟಕ್ಕೆ ಸಮ್ಮೇಳನದ ಪ್ರಾರಂಭದಲ್ಲಿ ವಂದನೆ ಸಲ್ಲಿಸಲಾಗಿತ್ತು. ಸಮ್ಮೇಳನದ ಯಶಸ್ವಿ ಮುಕ್ತಾಯದ ನಂತರ, ವಿವಿಧ ಘೋಷಣೆಯೊಂದಿಗೆ, ಸಮ್ಮೇಳನ ಕೈಗೊಂಡ ತೀರ್ಮಾನ ಜಾರಿಗೊಳಿಸುವ ಪ್ರತಿಜ್ಞೆಯೊಂದಿಗೆ, ದುಡಿಯುವ ವರ್ಗದ ಪ್ರಾಣಮಿತ್ರ ಕೆಂಪುಧ್ವಜ ಇಳಿಸಿ ವ್ಯವಸ್ಥಿತವಾಗಿ ಗೌರವಯುತವಾಗಿ ಇಳಿಸಿ ಮುಂದಿನ ಸಮ್ಮೇಳನಕ್ಕೆ ಮುಂದಡಿ ಇಡಲಾಯಿತು. ■

ಗ್ರಾಮೀಣ ಜನಸಮೂಹಗಳಿಗೆ ಈಗಲೂ ವಂಚನೆ ಮುಂದುವರೆದಿದೆ

ಪುಟ 11 ರಿಂದ

ಉತ್ಪನ್ನಗಳ ಆಮದಿನ ಮೇಲೆ ನಿರ್ಬಂಧಗಳನ್ನು ಹಾಕಲಾಯಿತು. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಹೂಡಿಕೆಯು ಹೆಚ್ಚು ಇಳುವರಿಯ ಬೀಜಗಳು, ರಾಸಾಯನಿಕ ಗೊಬ್ಬರಗಳು ಮತ್ತು ಕೃಷಿ ಉಪಕರಣಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಿತು. ಇದು ಹಸಿರು ಕ್ರಾಂತಿಗೆ ಕಾರಣವಾಯಿತು, ಇದು ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಹೆಚ್ಚಿಸಿತು ಮತ್ತು ಆಹಾರ ಸ್ವಾವಲಂಬನೆಯನ್ನು ಸಾಧಿಸಲು ಸಹಾಯ ಮಾಡಿತು. ಆದರೆ ಅದರೊಂದಿಗೆ, ಎರಡು ರೀತಿಯ ಅಸಮಾನತೆಗಳು ಸಹ ಬೆಳೆದುಬಂದವು – ಪ್ರದೇಶಗಳ ನಡುವಿನ ಅಸಮಾನತೆ ಮತ್ತು ರೈತರ ನಡುವಿನ ಅಸಮಾನತೆ. ಮೇಲಿನ ಎಲ್ಲಾ ಕ್ರಮಗಳು 1990 ರವರೆಗೆ ಕೆಲವು ಹಂತಗಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸಲು ಕೃಷಿ ವಲಯಕ್ಕೆ ಸಹಾಯ ಮಾಡಿದವು.

ಬಂಡವಾಳಶಾಹಿ ಅಭಿವೃದ್ಧಿಯ ನವ–ಉದಾರವಾದಿ ಹಂತ

ದೇಶದಲ್ಲಿ ಮತ್ತು ನಿರ್ದಿಷ್ಟವಾಗಿ ಕೃಷಿಯಲ್ಲಿ ನವ–ಉದಾರವಾದಿ ನೀತಿಗಳನ್ನು 1991 ರಲ್ಲಿ ಕಾಂಗ್ರೆಸ್ ಕೇಂದ್ರ ಸರ್ಕಾರವು ಪ್ರಾರಂಭಿಸಿತು ಮತ್ತು ಅಂದಿನಿಂದಲೂ ಮುಂದುವರೆದಿದೆ. 2014 ರ ನಂತರ ಬಿಜೆಪಿ ಕೇಂದ್ರ ಸರ್ಕಾರವು ಅವುಗಳನ್ನು ಹಲವು ಪಟ್ಟು ವೇಗಗೊಳಿಸಿತು. ಸಾಮ್ರಾಜ್ಯಶಾಹಿ ಒತ್ತಡದಲ್ಲಿ ಸರಕಾರದ ನೀತಿಗಳಲ್ಲಿ ಪ್ರತಿಗಾಮಿ ಬದಲಾವಣೆ ಕಾಣ ಬಂತು. ಈ ಹಂತವು ಆರ್ಥಿಕ ವ್ಯವಹಾರಗಳಿಂದ ಸರಕಾರ ಹಿಂದೆ ಸರಿಯುವುದು ಮತ್ತು ಬಂಡವಾಳಶಾಹಿ ಮಾರುಕಟ್ಟೆಗೆ ಶರಣಾಗುವುದನ್ನು ಆಧರಿಸಿದೆ.

1992 ರಲ್ಲಿ ಹಿಸಾರ್‌ನಲ್ಲಿ ನಡೆದ ಎಐಕೆಎಸ್‌ನ 27 ನೇ ರಾಷ್ಟ್ರೀಯ ಸಮ್ಮೇಳನವು ನವ–ಉದಾರವಾದಿ ನೀತಿಗಳ ಪ್ರಾರಂಭದ ನಂತರದ ಮೊದಲನೆಯ ಸಮ್ಮೇಳನ. ಇದು ನವ–ಉದಾರವಾದಿ ನೀತಿಗಳನ್ನು ನಿರಾಕರಿಸುತ್ತಾ "ಕೇಂದ್ರ ಸರ್ಕಾರದ ಪ್ರಸ್ತುತ ನೀತಿಗಳು ರೈತರ ಮೇಲೆ ಗಂಭೀರ ಪ್ರತಿಕೂಲ ಪರಿಣಾಮ ಬೀರುತ್ತವೆ. ಇದು ಬಡವರು, ಸಣ್ಣ ಮತ್ತು ಮಧ್ಯಮ ರೈತರ ಬಡತನವನ್ನು ಹೆಚ್ಚಿಸುತ್ತದೆ. ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ನಿರುದ್ಯೋಗಿ ಯುವಕರ ಸಂಖ್ಯೆಯು ಮತ್ತೆ ಅಭೂತಪೂರ್ವ ಮಟ್ಟಕ್ಕೆ ಏರುತ್ತದೆ" ಎಂದು ಎಚ್ಚರಿಸಿತು,. ಗಮನಾರ್ಹ ಸಂಗತಿಯೆಂದರೆ, ಎಐಕೆಎಸ್ ಒಂದು ವರ್ಷದೊಳಗೆ ನವ–ಉದಾರವಾದಿ ನೀತಿಗಳ ಮೌಲ್ಯಮಾಪನವನ್ನು ಮಾಡಿತು, ಹೆಚ್ಚಿನ ಇತರ ರೈತ ಸಂಘಟನೆಗಳು ಹೊಸ ಆರ್ಥಿಕ ಮತ್ತು ಕೃಷಿ ನೀತಿಗಳನ್ನು ಬೆಂಬಲಿಸುತ್ತಿದ್ದವು. ಹಿಸಾರ್ ಸಮ್ಮೇಳನದ ಎಚ್ಚರಿಕೆಗಳು ಕಳೆದ 30 ವರ್ಷಗಳಲ್ಲಿ ಕೃಷಿ ಬೆಳವಣಿಗೆಗಳಿಂದ ಸಾಬೀತಾಗಿವೆ.

ಕೃಷಿಯಲ್ಲಿನ ನವ–ಉದಾರವಾದಿ ನೀತಿಗಳು ಈ ಕೆಳಗಿನ ವಿನಾಶಕಾರಕ ಅಂಶಗಳನ್ನು ಹೊಂದಿವೆ:

❖ ಭಾರತೀಯ ದೊಡ್ಡ ಬಂಡವಾಳಿಗ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ ವಿಶಾಲವಾದ ಭೂಮಿಯನ್ನು ಮಾರಾಟ ಮಾಡಲು ಅಥವಾ ಗುತ್ತಿಗೆಗೆ ನೀಡಲು ಅನುವು ಮಾಡಿಕೊಡಲು ಭೂಸುಧಾರಣೆಗಳನ್ನು ಹಿಮ್ಮೆಟ್ಟಿಸುವುದು ಮತ್ತು ಭೂ ಮಿತಿ ಕಾನೂನುಗಳನ್ನು ದುರ್ಬಲಗೊಳಿಸುವುದು. ಉಳುವವನಿಗೆ ಭೂಮಿ ಎಂಬ ಘೋಷಣೆಯು ಕಾರ್ಪೊರೇಟ್‌ಗಳಿಗೆ ಭೂಮಿ ಎಂಬ ಘೋಷಣೆಯಾಗಿ ಬದಲಾಗಿದೆ.

❖ ಬೀಜಗಳು, ರಸಗೊಬ್ಬರಗಳು, ನೀರಾವರಿ, ವಿದ್ಯುತ್ ಮತ್ತು ಇತರ ಲಾಗುವಾಡುಗಳ ಮೇಲಿನ ಸರ್ಕಾರದ ಸಬ್ಸಿಡಿಗಳನ್ನು ಕಡಿತಗೊಳಿಸುವುದರಿಂದ ಕೃಷಿ ಲಾಗುವಾಡುಗಳ ವೆಚ್ಚದಲ್ಲಿ ಭಾರಿ ಏರಿಕೆ ಮತ್ತು ಉತ್ಪಾದನಾ ವೆಚ್ಚದಲ್ಲಿ ತೀವ್ರ ಏರಿಕೆಗೆ ಕಾರಣವಾಗುತ್ತದೆ.

❖ ಕೃಷಿ ಆಮದುಗಳ ಮೇಲಿನ ಪರಿಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕುವುದು ಮತ್ತು ಆಮದು ಸುಂಕಗಳನ್ನು ಕಡಿತಗೊಳಿಸುವುದು, ದೇಶೀಯ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಪರಿಣಾಮವಾಗಿ ಕುಸಿತದೊಂದಿಗೆ ಭಾರೀ ಸಬ್ಸಿಡಿ ಹೊಂದಿರುವ ವಿದೇಶಿ ಕೃಷಿ ಸರಕುಗಳು ಹರಿದು ಬರಲು ಕಾರಣವಾಗುತ್ತದೆ. ಮುಕ್ತ ವ್ಯಾಪಾರ ಒಪ್ಪಂದಗಳು (ಎಫ್‌ಟಿಎ) ಅದೇ ಪರಿಣಾಮವನ್ನು ಬೀರಿವೆ.

❖ ಕೃಷಿ, ನೀರಾವರಿ, ವಿದ್ಯುತ್, ಗ್ರಾಮೀಣಾಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಶೋಧನೆ ಮತ್ತು ಅಭಿವೃದ್ಧಿ, ಮತ್ತು ಇತರ ಮೂಲಸೌಕರ್ಯ ಸೌಲಭ್ಯಗಳಲ್ಲಿ ಸಾರ್ವಜನಿಕ ಹೂಡಿಕೆಯಲ್ಲಿ ತೀವ್ರ ಕಡಿತ.

❖ ವಿದ್ಯುಚ್ಛಕ್ತಿ ಮತ್ತು ನೀರಾವರಿಯ ಪ್ರಮುಖ ಕ್ಷೇತ್ರಗಳ ಖಾಸಗೀಕರಣ, ಇವೆರಡನ್ನೂ ವೆಚ್ಚದಾಯಕಗೊಳಿಸುತ್ತದೆ ಮತ್ತು ನೀರಿನ ಏಕಸ್ವಾಮ್ಯವನ್ನು ಸೃಷ್ಟಿಸುತ್ತದೆ.

❖ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಸಾಂಸ್ಥಿಕ ಸಾಲದಲ್ಲಿ ತೀವ್ರ ಬಿಕ್ಕಟ್ಟು, ಕಾರ್ಪೊರೇಟ್‌ಗಳಿಗೆ ದೊಡ್ಡ ಪ್ರಮಾಣದ ಸಾಲವನ್ನು ದೊರಕಿಸುವ ನೀತಿ ನಿರ್ದೇಶನದಿಂದಾಗಿ, ಬಡ್ಡಿಕೋರ ಖಾಸಗಿ ಲೇವಾದೇವಿಗಾರರ ಮೇಲೆ ರೈತರ ಅವಲಂಬನೆಯನ್ನು ಹೆಚ್ಚಿಸುತ್ತದೆ.

❖ ಆಹಾರ ಸಬ್ಸಿಡಿಗಳನ್ನು ತೀವ್ರ ಮೊಟಕುಗೊಳಿಸುವುದು ಮತ್ತು ಹಿಂದಿನ ಸಾರ್ವತ್ರಿಕ ವಿತರಣಾ ವ್ಯವಸ್ಥೆಗೆ ಬದಲಾಗಿ ಗುರಿ–ನಿರ್ದೇಶಿತ ವಿತರಣಾ ವ್ಯವಸ್ಥೆಯನ್ನು ಪ್ರಾರಂಭಿಸುವುದು, ಬಡವರ ಆಹಾರ ಭದ್ರತೆಗೆ ಅಪಾಯ ತರುವುದು.

❖ ಕನಿಷ್ಠ ಬೆಂಬಲ ಬೆಲೆ ಕಾರ್ಯವ್ಯವಸ್ಥೆ ಮತ್ತು ಬೆಳೆಗಳ ಸಂಗ್ರಹಣೆ ವ್ಯವಸ್ಥೆಯಂತಹ ದೇಶೀಯ



ಮಾರುಕಟ್ಟೆ ಮಧ್ಯಪ್ರವೇಶ ಕ್ರಮಗಳಿಂದ ಸರ್ಕಾರ ಹಿಂದೆ ಸರಿಯುವುದು.

❖ ರಫ್ತು–ಆಧಾರಿತ ಕೃಷಿಯತ್ತ ಒತ್ತು ನೀಡುವ ಒಂದು ನೀತಿ, ಆಹಾರ ಬೆಳೆಗಳನ್ನು ಬಿಟ್ಟು ನಗದು ಬೆಳೆಗಳ ಕಡೆಗೆ ಬೆಳೆ ಪದ್ಧತಿಯನ್ನು ಬದಲಾಯಿಸುವುದು.

❖ ಕೃಷಿ ಕಾರ್ಯಾಚರಣೆಗಳ ಯಾಂತ್ರೀಕರಣದಲ್ಲಿ ಏರಿಕೆ ಮತ್ತು ಕೃಷಿ ಕಾರ್ಮಿಕರ ಉದ್ಯೋಗ ಮತ್ತು ನೈಜ ವೇತನದಲ್ಲಿ ತೀವ್ರ ಕಡಿತ.

❖ ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಖಾಸಗೀಕರಣದೊಂದಿಗೆ ಗ್ರಾಮೀಣ ಉದ್ಯೋಗ, ಬಡತನ ನಿರ್ಮೂಲನೆ, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ವಸತಿ ಮತ್ತು ಇತರ ಸಮಾಜ ಕಲ್ಯಾಣ ಕ್ರಮಗಳ ಯೋಜನೆಗಳಿಗೆ ತಿಲಾಂಜಲಿ ನೀಡುವುದು.

❖ ಎಲ್ಲಾ ಕೃಷಿ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಕಾರ್ಪೊರೇಟ್‌ಗಳು ಮತ್ತು ದೇಶೀಯ ಕಾರ್ಪೊರೇಟ್‌ಗಳ ಸುಲಿಗೆಕೋರ ಅತಿಕ್ರಮಣದಿಂದ ರೈತಾಪಿಗಳು ಮತ್ತು ಗ್ರಾಹಕರು ಇಬ್ಬರಿಗೂ ಹಾನಿ.

ಪರಮ ನೀಚ ಅಪರಾಧಿ: ಬಿಜೆಪಿ–ಆರ್‌ಎಸ್‌ಎಸ್‌ನ ಮೋದಿ ಆಡಳಿತ

ಈಗಿನ ಬಿಜೆಪಿ–ಆರ್‌ಎಸ್‌ಎಸ್ ಕೇಂದ್ರ ಸರ್ಕಾರವು ಸಾಮ್ರಾಜ್ಯಶಾಹಿ ಆದೇಶಗಳ ಅಡಿಯಲ್ಲಿ ಕೃಷಿ, ಕೈಗಾರಿಕೆ ಮತ್ತು ಇತರ ಎಲ್ಲಾ ಕ್ಷೇತ್ರಗಳಲ್ಲಿ ನವ–ಉದಾರವಾದಿ ನೀತಿಗಳನ್ನು ತೀವ್ರಗೊಳಿಸುವಲ್ಲಿ ಅತ್ಯಂತ ನೀಚ ಅಪರಾಧಿಯಾಗಿದೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಸಹಜವಾಗಿಯೇ ಇದನ್ನು ಅನುಸರಿಸಿವೆ. 2014ರ ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ರೈತರಿಗೆ ನೀಡಿದ್ದ 'ಅಚ್ಛೇ ದಿನ್' ಭರವಸೆಗೆ ಈಗಿನ ಬಿಜೆಪಿ–ಆರ್‌ಎಸ್‌ಎಸ್ ಆಡಳಿತದಲ್ಲಿ ವಿನಾಶಕಾರಿ ಕೃಷಿ ಪರಿಸ್ಥಿತಿ ದ್ರೋಹ ಮಾಡಿದೆ. 2022 ರ ಹೊತ್ತಿಗೆ ರೈತರ ಆದಾಯ ದ್ವಿಗುಣಗೊಳಿಸುವ ಭರವಸೆಗಿಂತ ದೊಡ್ಡ ಪ್ರಹಸನವನ್ನು ಮೋದಿ ಆಡಳಿತದಲ್ಲಿ ಮತ್ತೊಂದಿಲ್ಲ.

2020 ರಲ್ಲಿ ಮೂರು ವಿನಾಶಕಾರಿ ಕೃಷಿ ಕಾನೂನುಗಳು ಮತ್ತು ಅವುಗಳ ವಿರುದ್ಧ ಐತಿಹಾಸಿಕ ಹೋರಾಟವು ಬಂದಿತು. ನವ–ಉದಾರವಾದಿ ನಿರ್ದೇಶನದಿಂದ, 2015 ರ ಶಾಂತ ಕುಮಾರ್ ಸಮಿತಿ ಮತ್ತು ನಂತರದ ಮೋದಿ ಸರ್ಕಾರದ ನೀತಿಗಳ ನವ–ಉದಾರವಾದಿ ದಿಕ್ಕಿನಿಂದ ಕೃಷಿ ಕಾನೂನುಗಳನ್ನು ತಂದದ್ದು ಕನಿಷ್ಟ ಬೆಂಬಲ ಬೆಲೆಗಳನ್ನು, ಸರಕಾರೀ ಸಂಗ್ರಹಣೆಯನ್ನು, ಈ ಮೂಲಕ ಸಮಸ್ತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕ್ರಮೇಣ ಕಳಚಿ ಹಾಕಲಿಕ್ಕಾಗಿಯೇ ಎಂಬುದು ಸ್ಪಷ್ಟವಾಗಿದೆ.

ಅಂತಿಮವಾಗಿ, ಈ ದಿಕ್ಪಥವು ಸಂಕಷ್ಟದಲ್ಲಿರುವ ರೈತಾಪಿಗಳ ಭೂಮಿಯ ಮೇಲೆ ಆಕ್ರಮಣ ಮಾಡುತ್ತದೆ ಮತ್ತು ಅದನ್ನು ಕಿತ್ತುಕೊಳ್ಳುತ್ತದೆ. 2015ರ ಭೂಸ್ವಾಧೀನ ತಿದ್ದುಪಡಿ ಸುಗ್ರೀವಾಜ್ಞೆಯ ಮೂಲಕ ಮೋದಿ ಆಡಳಿತವು ಈ ನಿಟ್ಟಿನಲ್ಲಿ ಅದಾಗಲೇ ಪ್ರಯತ್ನ ನಡೆಸಿತ್ತು. ಆದರೆ ಬೀದಿ ಹೋರಾಟಗಳು ಮತ್ತು ರಾಜ್ಯಸಭೆಯಲ್ಲಿನ ಹೋರಾಟಗಳ ಮೂಲಕ ಅದನ್ನು ಸೋಲಿಸಲಾಯಿತು. ಆದಾಗ್ಯೂ, ಅನೇಕ ಬಿಜೆಪಿ ರಾಜ್ಯ ಸರ್ಕಾರಗಳು ನಂತರ ತಮ್ಮ ರಾಜ್ಯ ವಿಧಾನಸಭೆಗಳ ಮೂಲಕ ಅವೇ ತಿದ್ದುಪಡಿಗಳನ್ನು ಹೇರಿದವು.

ಬಿಜೆಪಿ ಆಡಳಿತವು ಇಡೀ ಕೃಷಿ ಕ್ಷೇತ್ರವನ್ನು ದೇಶೀಯ ಮತ್ತು ವಿದೇಶಿ ಕಾರ್ಪೊರೇಟ್ ಲಾಬಿಗೆ ಅವರ ಸೂಪರ್ ಲಾಭಗಳು ಮತ್ತು ಅದರ ಸಂಪತ್ತನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ವಹಿಸಿ ಕೊಡಲು ಪ್ರಯತ್ನಿಸಿತು. ಕೃಷಿ ಕಾನೂನುಗಳು ಜಾರಿಗೆ ಬಂದ ಹದಿನೈದು ದಿನಗಳಲ್ಲಿ, ದಶಕಗಳ ಕಠಿಣ ಹೋರಾಟಗಳ ನಂತರ ಕಾರ್ಮಿಕ ವರ್ಗವು ಗೆದ್ದುಕೊಂಡಿದ್ದ 29 ಕಾರ್ಮಿಕ ಕಾನೂನುಗಳನ್ನು ಸಂಸತ್ತಿನಲ್ಲಿ ರದ್ದುಗೊಳಿಸಲಾಯಿತು ಮತ್ತು ಅವುಗಳ ಸ್ಥಾನದಲ್ಲಿ ನಾಲ್ಕು ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ತರಲಾಯಿತು ಕೃಷಿ ಕಾರ್ಮಿಕರ ಉದ್ಯೋಗದ ಜೀವನಾಡಿ ಮನರೇಗ ಕ್ಕೆ ಹಣದ ಕೊರತೆಯನ್ನು ಸಿನಿಕತನದಿಂದ ಉಂಟು ಮಾಡಲಾಯಿತು.

ಹೀಗೆ ತಮ್ಮ ಶ್ರಮದ ಮೂಲಕ ದೇಶದ ಸಂಪತ್ತನ್ನು ಉತ್ಪಾದಿಸುವ ಅದೇ ಮೂಲ ವರ್ಗಗಳ – ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ – ಮೇಲೆ ದುಷ್ಟ ದಾಳಿ ನಡೆಸಲಾಗುತ್ತಿದೆ. ಇದು ಕಾರ್ಪೊರೇಟ್ ಕೋಮುವಾದದ ನಿಜವಾದ ಅರ್ಥ. ಒಂದು ಬಲಿಷ್ಟ ಕಾರ್ಮಿಕ–ರೈತ ಐಕ್ಯತೆಯನ್ನು ಬೆಸೆಯುವ ಮೂಲಕ ಇದಕ್ಕೆದುರಾಗಿ ಕಠಿಣ ಹೋರಾಟ ನಡೆಸಬೇಕಾಗಿದೆ.

ಮುಗಿಯದ ಹೋರಾಟ

ಇಂದು ಕೃಷಿ ಕಾರ್ಮಿಕರ ಹೋರಾಟಗಳ ಪ್ರಮುಖ ಪ್ರಶ್ನೆಗಳು ಹೀಗಿವೆ: 1. ಕೆಲಸದ ದಿನಗಳು ಮತ್ತು ವೇತನಗಳ ಹೆಚ್ಚಳದೊಂದಿಗೆ ಮನರೇಗ ಅನುಷ್ಠಾನ ಮತ್ತು ವಿಸ್ತರಣೆ, ಮತ್ತು ಪಾವತಿಸದ ಬಾಕಿಗಳ ಶೀಘ್ರ ಇತ್ಯರ್ಥ; 2. ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಹೆಚ್ಚಳ ಮತ್ತು ಸಾಮಾಜಿಕ ಭದ್ರತೆಯೊಂದಿಗೆ ಕೇಂದ್ರ ಸರ್ಕಾರದಿಂದ ಸಮಗ್ರ ಕಾನೂನು; 3. ಭೂಹೀನತೆ ಮತ್ತು ಭೂಮಿಯ ಹಕ್ಕುಗಳ ಪ್ರಶ್ನೆಗಳು; 4.ಮನೆಯಿಲ್ಲದಿರುವುದು ಮತ್ತು ಮನೆ–ನಿವೇಶನಗಳ ಪ್ರಶ್ನೆಗಳು;5. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವುದು ಮತ್ತು ಇತರ ಅಗತ್ಯ ವಸ್ತುಗಳ ಸೇರ್ಪಡೆ; 6. ಕೃಷಿ ಕಾರ್ಮಿಕರಿಗೆ ಮತ್ತು 60 ವರ್ಷ ಮೇಲ್ಪಟ್ಟ ಬಡ ರೈತರಿಗೆ ಪಿಂಚಣಿ; 7. ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳು; 9. ಮಹಿಳೆಯರು, ದಲಿತರು ಮತ್ತು ಆದಿವಾಸಿಗಳ ಮೇಲೆಸಾಮಾಜಿಕ ದೌರ್ಜನ್ಯಗಳು ಮತ್ತು ದಬ್ಬಾಳಿಕೆ.

ಇಂದು ರೈತರ ಹೋರಾಟಗಳ ಪ್ರಮುಖ ಪ್ರಶ್ನೆಗಳು ಈ ಕೆಳಗಿನಂತಿವೆ: 1. ಸ್ವಾಮಿನಾಥನ್ ಆಯೋಗದ ಶಿಫಾರಸಿನ ಪ್ರಕಾರ ಸಿ2+50% ಸೂತ್ರದಂತೆ ಎಂಎಸ್‌ಪಿ ಗೆ ಕಾನೂನು ಖಾತರಿ; 2. ಬೀಜಗಳು, ರಸಗೊಬ್ಬರಗಳು, ಕೀಟನಾಶಕಗಳು, ಡೀಸೆಲ್, ಪೆಟ್ರೋಲ್, ವಿದ್ಯುತ್ ಮತ್ತು ನೀರಾವರಿಯ ಲಾಗುವಾಡುಗಳ ವೆಚ್ಚದಲ್ಲಿ ತೀವ್ರ ಕಡಿತ; 3. ಬಡ ಮತ್ತು ಮಧ್ಯಮ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಕೇಂದ್ರ ಸರ್ಕಾರದಿಂದ ಒಂದು ಬಾರಿ ಸಂಪೂರ್ಣ ಸಾಲಮನ್ನಾ ; 4. ವಿದ್ಯುತ್ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ಪಡೆಯಬೇಕು; 5. ರೈತ ವಿರೋಧಿ ಮತ್ತು ಕಾರ್ಪೊರೇಟ್ ಪರವಾದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಆಮೂಲಾಗ್ರ ಬದಲಾವಣೆಗಳು; 6. ಸಾಲ ಮತ್ತು ನೀರಾವರಿ ಸೌಲಭ್ಯಗಳ ವಿಸ್ತರಣೆ; 7. ಭೂ–ಸಂಬಂಧಿತ ಸಮಸ್ಯೆಗಳು – ಅನ್ಯಾಯದ ಭೂಸ್ವಾಧೀನದ ವಿರುದ್ಧ, ಅರಣ್ಯ ಹಕ್ಕುಗಳ ಕಾಯ್ದೆಯ ಅನುಷ್ಠಾನಕ್ಕಾಗಿ, ಅರಣ್ಯ ಸಂರಕ್ಷಣಾ ಕಾಯಿದೆಯ ನಿಯಮಗಳಲ್ಲಿ ಹಿಮ್ಮುಖ ಬದಲಾವಣೆಗಳ ವಿರುದ್ಧ; 8. ರೈತ ಮಹಿಳೆಯರ ಪ್ರಶ್ನೆಗಳು; 9. ಬೆಳೆವಾರು ಪ್ರಶ್ನೆಗಳು.

ಇತರ ಎರಡು ಮೂಲಭೂತ ಮತ್ತು ಪ್ರಮುಖ ಪ್ರಶ್ನೆಗಳೆಂದರೆ ಆಮೂಲಾಗ್ರ ಭೂ ಸುಧಾರಣೆಗಳ ಅನುಷ್ಠಾನ ಮತ್ತು ಬಿಜೆಪಿ–ಆರ್‌ಎಸ್‌ಎಸ್ ಕೇಂದ್ರ ಸರ್ಕಾರದ ಸಾರ್ವಜನಿಕ ವಲಯದ ನಾಚಿಕೆಯಿಲ್ಲದ ಖಾಸಗೀಕರಣದ ಮೂಲಕ ಕಾರ್ಪೊರೇಟ್‌ಗಳಿಗೆ ದೇಶವನ್ನು ಅತ್ಯಲ್ಪ ಬೆಲೆಗೆ ಮಾರಾಟ ಮಾಡುವುದನ್ನು ನಿಲ್ಲಿಸುವುದು.

ಮೂರು ಕೃಷಿ ಕಾನೂನುಗಳ ರದ್ದತಿಯು ರೈತರಿಗೆ ಮತ್ತು ಜನರಿಗೆ ಸಂದ ಐತಿಹಾಸಿಕ ವಿಜಯವಾಗಿದೆ ಮತ್ತು ಕಾರ್ಪೊರೇಟ್ ಕೋಮುವಾದದ ಶಕ್ತಿಗಳಿಗೆ ಅವಮಾನಕರ ಸೋಲಾಗಿದೆ. ಖಏಓ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ನೇತೃತ್ವದ ರೈತರ ಹೋರಾಟವು, ನಮ್ಮ ಸ್ವಾತಂತ್ರ್ಯ ಹೋರಾಟದ ದಿನಗಳಿಂದಲೂ ಊಳಿಗಮಾನ್ಯ, ಕಾರ್ಪೊರೇಟ್ ಮತ್ತು ಸಾಮ್ರಾಜ್ಯಶಾಹಿ ಲಾಬಿಯ ಅತ್ಯಂತ ಗುಲಾಮ ಏಜೆಂಟ್‌ನಂತೆ ಯಾವಾಗಲೂ ಕಾರ್ಯನಿರ್ವಹಿಸುತ್ತಿರುವ ಬಿಜೆಪಿ–ಆರ್‌ಎಸ್‌ಎಸ್ ಆಳ್ವಿಕೆಯ ದೇಶವಿರೋಧಿ ನೀತಿಗಳನ್ನು ತೀವ್ರವಾಗಿ ವಿರೋಧಿಸಿದೆ. ಎಲ್ಲರನ್ನೂ ಒಳಗೊಂಡ ರೈತರ ಹೋರಾಟವು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಗೆ ಪ್ರಬಲವಾದ ಬಲ ನೀಡಿತು. ಇದು ಲಕ್ಷಾಂತರ ರೈತರು ತಮಗಾಗಿ ಮಾತ್ರವಲ್ಲದೆ – ಜನರ ಮತ್ತು ಇಡೀ ದೇಶದ ರಕ್ಷಣೆಗಾಗಿ ನಡೆಸಿದ ದೇಶಭಕ್ತಿಯ ಹೋರಾಟವಾಗಿದೆ.

ಈ ರೈತರ ಹೋರಾಟದ ಗೆಲುವಿನಿಂದ ಪಡೆದ ಸ್ಫೂರ್ತಿದಾಯಕ ಶಕ್ತಿಯೊಂದಿಗೆ, ಮೇಲಿನ ಬೇಡಿಕೆಗಳಿಗಾಗಿ, ನೀತಿ ಬದಲಾವಣೆಗಾಗಿ ಮತ್ತು ಆಳ್ವಿಕೆ ಬದಲಾವಣೆಗಾಗಿ ಜನರ ಹೋರಾಟವು ಇನ್ನೂ ಹೆಚ್ಚಿನ ಶಕ್ತಿ, ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದೊಂದಿಗೆ ಮುಂದುವರಿಯಬೇಕು ಮತ್ತು ಮುಮುದುವರೆಯುತ್ತದೆ. ಆದರೆ ಅದರ ಯಶಸ್ಸಿಗೆ ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಕೋಮುವಾದ, ಜಾತಿವಾದ ಮತ್ತು ನಿರಂಕುಶಾಧಿಕಾರದ ಭಯಾನಕ ಮತ್ತು ವಿಷಕಾರಿ ಪಿಡುಗನ್ನು ಸೋಲಿಸುವುದು ಅನಿವಾರ್ಯವಾಗಿದೆ.

ಚಂದಾ ವಿವರ:
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00
ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ
ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಬ್ಯಾಂಕ್‌ಗಳ ಖಾಸಗೀಕರಣದ ಇನ್ನೊಂದು ದೊಡ್ಡ ಅಪಾಯ: ಅಭಿವೃದ್ಧಿಯ ಪ್ರತೀಕ್ಷೆಗಳನ್ನು ಬಹುಕಾಲ ಬಾಧಿಸುವ ಹಿಮ್ಮುಖ ನಡೆ



ಬ್ಯಾಂಕ್ ಖಾಸಗೀಕರಣದ ಸರಕಾರ ನಡೆ ರೈತ ಬೇಸಾಯ, ಆಹಾರ ಭದ್ರತೆ ಮತ್ತು ಉದ್ಯೋಗದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುತ್ತದೆ ಎಂಬ ಬಗ್ಗೆ ಇದುವರೆಗೆ ಬಹಳ ಚರ್ಚೆಗಳು ನಡೆದಿವೆ. ಇದಲ್ಲದೆ ಇದು ಅಭಿವೃದ್ಧಿಯ ಪ್ರತೀಕ್ಷೆಗಳಿಗೆ ದೀರ್ಘ ಕಾಲದ ಹಾನಿಯುಂಟು ಮಾಡುವ ಹಿಮ್ಮುಖ ನಡೆಯಾಗುತ್ತದೆ ಎಂಬ ಮತ್ತೊಂದು ಗಂಭೀರ ಅಪಾಯವನ್ನು ಕೂಡ ದೇಶವು ನಿರ್ಲಕ್ಷಿಸಲು ಸಾಧ್ಯವಿಲ್ಲ.

–ಪ್ರೊ. ಪ್ರಭಾತ್ ಪಟ್ನಾಯಕ್

ಸಾರ್ವಜನಿಕ ವಲಯದ ಕೆಲವು ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವ ಸರ್ಕಾರದ ಯೋಜನೆಗೆ ಮೂಲಭೂತ ಆಕ್ಷೇಪಗಳಿವೆ. ಅಂತಹ ಕ್ರಮವು ಸಾಲದ ನಿಯೋಜನೆಯ ಮಾದರಿಯನ್ನು ಬದಲಾಯಿಸುವ ಸಂಗತಿಯತ್ತ ಗಮನ ಕೇಂದ್ರೀಕರಿಸಿದೆ; ಇದು ಉತ್ಪಾದಕ ಚಟುವಟಿಕೆಗಳಿಂದ ಸಟ್ಟಾಕೋರ ಕೋರ ಚಟುವಟಿಕೆಗಳ ಕಡೆಗೆ, ರೈತ ಕೃಷಿಯಿಂದ ದೊಡ್ಡ ವ್ಯಾಪಾರೀ ವರ್ಗದ ಕಡೆಗೆ ಮತ್ತು ಆಂತರಿಕ ಬಳಕೆ ಬಿಟ್ಟು ಜಾಗತಿಕ ಬಳಕೆಯತ್ತ ನಡೆದಿರುವ ಬದಲಾವಣೆ; ಬೇಸಾಯ, ಆಹಾರ ಭದ್ರತೆ ಮತ್ತು ಉದ್ಯೋಗದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುವಂತಹ ಬದಲಾವಣೆ. ಈ ಆಕ್ಷೇಪಣೆಗಳು ಚಿರಪರಿಚಿತವಾಗಿವೆ ಮತ್ತು ಈ ಬಗ್ಗೆ ಬಹಳಷ್ಟು ಚರ್ಚೆಗಳು ನಡೆದಿವೆ. ಮತ್ತು ಸಾಲ ತೀರಿಸುವ ಸಾಮರ್ಥ್ಯ ಕಡಿಮೆ ಇರುವವರಿಗೆ ಹೆಚ್ಚಿನ ಬಡ್ಡಿದರಗಳ 2008 ರ 'ಸಬ್–ಪ್ರೈಮ್ ಸಾಲ' ಬಿಕ್ಕಟ್ಟಿನ ಸಮಯದಲ್ಲಿ ಆ ಬಿಕ್ಕಟ್ಟು ಭಾರತೀಯ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಎಳ್ಳಷ್ಟೂ ತಟ್ಟಲಿಲ್ಲ ಎಂಬ ಸಂಗತಿ ಇದನ್ನು ಎತ್ತಿ ತೋರಿದೆ. ಆದರೂ ರಾಷ್ಟ್ರದ ಯೋಗಕ್ಷೇಮಕ್ಕಿಂತ ದೇಶೀಯ ಮತ್ತು ವಿದೇಶಿ ದೊಡ್ಡ ಉದ್ಯಮಿಗಳನ್ನು ಸಂತುಷ್ಟಗೊಳಿಸುವುದರ ಬಗ್ಗೆಯೇ ಹೆಚ್ಚು ಕಾಳಜಿ ವಹಿಸುವ ಸರ್ಕಾರವು ಇವನ್ನೆಲ್ಲ ನಿರ್ಲಕ್ಷಿಸಿರುವುದು ನಿರೀಕ್ಷಿತ ವಿಷಯವೇ. ಆದರೆ ಇಲ್ಲಿ ನನ್ನ ಉದ್ದೇಶ ಈ ಆಕ್ಷೇಪಣೆಗಳನ್ನು ಪುನರುಚ್ಚರಿಸುವುದು ಅಲ್ಲ; ಇದು ಖಾಸಗೀಕರಣದ ಮತ್ತೊಂದು ಗಂಭೀರ ಅಪಾಯದ ಬಗ್ಗೆಯೂ ಸೂಚಿಸುತ್ತದೆ. ಈ ಬಗ್ಗೆ ಹೆಚ್ಚು ಚರ್ಚೆ ನಡೆದಿಲ್ಲ, ಆದರೆ ದೇಶವು ಇದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ.

ಆರ್ಥಿಕ ವಿಷಯಗಳಲ್ಲಿ ಸರಕಾರದ ನಿಯಂತ್ರಣದ ಅವಧಿಯಲ್ಲಿ, ಬ್ಯಾಂಕ್–ಸಾಲಗಳನ್ನು ಪ್ರಾಥಮಿಕವಾಗಿ ಅಲ್ಪಾವಧಿಯ ಸಾಲ–ಅಗತ್ಯಗಳನ್ನು ಪೂರೈಸಲು, ಉದಾಹರಣೆಗೆ ವ್ಯಾಪಾರ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ದಾಸ್ತಾನು–ಹಿಡುವಳಿಗಾಗಿ ಹಣಕಾಸು ಒದಗಿಸುವುದು ಇತ್ಯಾದಿಗಳಿಗೆ ಬಳಸಲಾಗುತ್ತಿದ್ದರೆ, ಸ್ಥಿರ ಬಂಡವಾಳ ರಚನೆಗಾಗಿ ದೀರ್ಘಾವಧಿಯ ಹಣಕಾಸಿನ ಅಗತ್ಯಗಳನ್ನು, ಈ ಉದ್ದೇಶಕ್ಕಾಗಿಯೇ ಸ್ಥಾಪಿಸಲಾದ ವಿಶೇಷ ಹಣಕಾಸು ಸಂಸ್ಥೆಗಳ ಮೂಲಕ ಪೂರೈಸಲಾಯಿತು. ಈ ಸಂಸ್ಥೆಗಳು ಇವಕ್ಕೆ ಹಣವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ ಲಾಭದಂತಹ ಸರ್ಕಾರಿ ಮೂಲಗಳಿಂದ ಪಡೆದುಕೊಂಡವು ಮತ್ತು ಸಾಲಗಳನ್ನು ಕಡಿಮೆ ಬಡ್ಡಿದರಗಳಲ್ಲಿ, ಬ್ಯಾಂಕುಗಳು ವಿಧಿಸುವ ದರಗಳಿಗಿಂತ ಕಡಿಮೆ ದರಗಳಲ್ಲಿ, ಕೆಲವು ಸಂದರ್ಭಗಳಲ್ಲಿ ನಕಾರಾತ್ಮಕ ನೈಜ ಬಡ್ಡಿದರಗಳಲ್ಲಿ (ಅಂದರೆ, ಅವು ವಿಧಿಸಿದ ನಾಮಮಾತ್ರ ದರಗಳು ಹಣದುಬ್ಬರದ ದರಕ್ಕಿಂತ ಕಡಿಮೆ ಇದ್ದವು) ಹೂಡಿಕೆಯನ್ನು ಉತ್ತೇಜಿಸುವ ಸಲುವಾಗಿ ಕೊಟ್ಟವು.

"ಉದಾರೀಕರಣ" ದೊಂದಿಗೆ ಈ ಸಂಪೂರ್ಣ ವ್ಯವಸ್ಥೆ ಬದಲಾಯಿತು. ಹಿಂದಿನ ವಿಶೇಷ ಸ್ವರೂಪದ ಹಣಕಾಸು ಸಂಸ್ಥೆಗಳು ತಮ್ಮ ಹಳೆಯ ರೂಪದಲ್ಲಿ ಕಣ್ಮರೆಯಾದವು, ಕೆಲವು ಐಡಿಬಿಐ ನಂತಹವುಗಳು ತಮ್ಮನ್ನುತಾವು ಬ್ಯಾಂಕ್‌ಗಳಾಗಿ ಪರಿವರ್ತಿಸಿಕೊಂಡವು. ಉದ್ದಿಮೆ ಘಟಕಗಳ ದೀರ್ಘಾವಧಿಯ ಹಣಕಾಸಿನ ಅಗತ್ಯಗಳನ್ನು ಈಗ ಬಂಡವಾಳ ಮಾರುಕಟ್ಟೆಯ ಮೂಲಕ ಪೂರೈಸಬೇಕಾಗಿತ್ತು, ದೀರ್ಘಾವಧಿಯ ಸಾಲಗಳನ್ನು ನೀಡಲು ಇನ್ನೂ ಉಳಿದುಕೊಂಡಿದ್ದ ಹಣಕಾಸು ಸಂಸ್ಥೆಗಳು ಕೂಡ ತಮ್ಮ ಹಣವನ್ನು ಅಲ್ಲಿಂದಲೇ ಸಂಗ್ರಹಿಸಬೇಕಾಗಿತ್ತು. ಆದರೆ ಹೂಡಿಕೆಯ ಯೋಜನೆಯು ಸಾಕಷ್ಟು ಲಾಭದಾಯಕವಾಗಿಲ್ಲದಿದ್ದರೆ ಅಥವಾ ತುಂಬಾ ಅಪಾಯಕಾರಿಯಾಗಿದ್ದರೆ, ಬಂಡವಾಳಶಾಹಿಗಳು ಮಾರುಕಟ್ಟೆಯ ಬಳಿಗೆ ಹೋಗುವ ಬದಲು ದೀರ್ಘಾವಧಿಯ ಸಾಲಕ್ಕಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳನ್ನೇ ಸಂಪರ್ಕಿಸಲು ಪ್ರಾರಂಭಿಸಿದರು. ಮತ್ತು ಬ್ಯಾಂಕುಗಳು ವಿಶೇಷವಾಗಿ ಮೂಲಸೌಕರ್ಯ ಯೋಜನೆಗಳಿಗೆ ದೊಡ್ಡ ಸಾಲಗಳನ್ನು, ಸರ್ಕಾರದ ಒತ್ತಡದಿಂದಾಗಿ ಕೊಟ್ಟವು. ಪರಿಣಾಮವಾಗಿ, ಸಾರ್ವಜನಿಕ ವಲಯದ ಬ್ಯಾಂಕ್‌ಗಳು, ಸರ್ಕಾರವು ಬಯಸಿದಂತೆ ನಡೆಯದಿದ್ದರೆ ತೋಳು ತಿರುಚಬಹುದು ಎಂಬ ಕಾರಣದಿಂದಾಗಿಯೇ, ಸಾಲಗಳನ್ನು ಕೊಟ್ಟ ಕಾರಣದಿಂದ, ಅವುಗಳ ಬ್ಯಾಲಂಸ್ ಶೀಟುಗಳಲ್ಲಿ ಅಪಾಯಗಳ ಸೂಚನೆ ಬರಲಾರಂಭಿಸಿತು.

ಜ್ವಾಲಾಮುಖಿಯ ಮೇಲೆ ಕೂತಿವೆ

ಬ್ಯಾಂಕ್‌ಗಳು ಸಾರ್ವಜನಿಕರ ಠೇವಣಿಗಳಿಂದ ತಮ್ಮ ಸಂಪನ್ಮೂಲಗಳನ್ನು ಪಡೆದುಕೊಳ್ಳುತ್ತವೆ, ಅದನ್ನು ಸಾರ್ವಜನಿಕರು ಕ್ಷಣಾರ್ಧದಲ್ಲಿ ಹಿಂಪಡೆಯಬಹುದು. ಈ ಸಂಪನ್ಮೂಲಗಳ ಗಮನಾರ್ಹ ಭಾಗವನ್ನು ದೀರ್ಘಾವಧಿಯ ಹೂಡಿಕೆಗಾಗಿ ಸಾಲಗಳನ್ನು ನೀಡಲು ಬಳಸಿದರೆ, ವಾಸ್ತವವಾಗಿ ಬ್ಯಾಂಕ್‌ಗಳು "ದೀರ್ಘಕಾಲದ ಸಾಲವನ್ನು ನೀಡಲಿಕ್ಕಾಗಿ ಅಲ್ಪಾವಧಿ ಸಾಲ"ವನ್ನು ಪಡೆಯುವಂತಾಯಿತು. ಇದು ಅವುಗಳ ಬಳಿ ನಗದು ಸಾಮರ್ಥ್ಯ ಇಲ್ಲದಂತಹ ಪರಿಸ್ಥಿತಿ ಉಂಟಾಗುವ ಅಪಾಯವನ್ನು ಸೃಷ್ಟಿಸಿತು. ಅನೇಕ ಠೇವಣಿದಾರರು ತಮ್ಮ ಠೇವಣಿಗಳನ್ನು ಹಿಂಪಡೆಯಲು ಇದ್ದಕ್ಕಿದ್ದಂತೆ ನಿರ್ಧರಿಸಿದರೆ, ಬ್ಯಾಂಕ್ ಕುಸಿಯುತ್ತದೆ; ಕೆಲವೇ ಠೇವಣಿದಾರರು ಮಾತ್ರ ಹಿಂತೆಗೆದುಕೊಳ್ಳಲು ಬಯಸಿದರೂ, ಮತ್ತು ಬ್ಯಾಂಕ್‌ನ ನಗದು ಸಾಮರ್ಥ್ಯ ಕುಸಿಯಬಹುದು ಎಂಬ ಮಾತುಗಳು ಹರಡುವ ಮೂಲಕವೂ ಬ್ಯಾಂಕ್ ಕುಸಿಯುವಂತಾಗಬಹುದು. ಅಂತಹ ಸಾಧ್ಯತೆಯನ್ನು ತಡೆಗಟ್ಟಲು, ಅಲ್ಪಾವಧಿಯ ಬಾಧ್ಯತೆಗಳಿರುವ ಬ್ಯಾಂಕುಗಳು ಸಾಮಾನ್ಯವಾಗಿ ಅಲ್ಪಾವಧಿಯ ಸ್ವತ್ತುಗಳನ್ನು ಹೊಂದಿರುತ್ತವೆ;, ಇದರಿಂದ ಠೇವಣಿಗಳ ಹಠಾತ್ ಹಿಂಪಡೆಯುವಿಕೆಯಿಂದ ಬ್ಯಾಂಕ್‌ಗೆ ಉಂಟಾಗುವ ಅಪಾಯ ಕನಿಷ್ಟಗೊಳ್ಳುತ್ತದೆ. ಆದರೆ ಸ್ವತ್ತುಗಳು ದೀರ್ಘಾವಧಿಯದ್ದಾಗಿದ್ದರೆ, ಅವುಗಳ ಹಠಾತ್ ಮಾರಾಟವು ಗಣನೀಯ ನಷ್ಟವನ್ನು ಒಳಗೊಂಡಿರುತ್ತದೆ, ಆದ್ದರಿಂದ ಬ್ಯಾಂಕಿನಿಂದ ಠೇವಣಿಗಳನ್ನು ಹಠಾತ್ತಾಗಿ ಹಿಂತೆಗೆದುಕೊಳ್ಳುವುದು ಹೆಚ್ಚು ಕಷ್ಟಕರವಾಗುತ್ತದೆ.

ಸಾರ್ವಜನಿಕ ವಲಯದ ಬ್ಯಾಂಕುಗಳು ಕೇವಲ ದೀರ್ಘಾವಧಿಯ ಆಸ್ತಿಗಳ ಗಳಿಕೆಗಷ್ಟೇ ಸಾಲವನ್ನು ನೀಡಿದ್ದಲ್ಲ; ಅವು ನೀಡಿದ ಹೆಚ್ಚಿನ ಸಾಲಗಳು ಮೂಲಸೌಕರ್ಯ ಯೋಜನೆಗಳಿಗೆ, ಇವುಗಳು ಫಲ ನೀಡಲು ದೀರ್ಘ ಕಾಲ ಬೇಕಾಗಿರುವವುಗಳು, ಇಲ್ಲಿ ಸಮಯ ಮತ್ತು ವೆಚ್ಚ–ಏರಿಕೆಗಳು ಸಾಮಾನ್ಯವಾಗಿರುತ್ತವೆ ಮತ್ತು ಲಾಭಗಳು ಗೋಚರಿಸಿದರೆ, ಅವು ದೀರ್ಘಾವಧಿಯ ನಂತರವೇ ಸಿಗುವಂತವುಗಳು. ಅಂತಹ ಸಾಲಗಳ ಬಹುಭಾಗ ಬ್ಯಾಂಕುಗಳ "ಕೆಲಸ ಮಾಡದ ಆಸ್ತಿ"(ಎನ್‌ಪಿಎ) ಗಳ ಲೆಕ್ಕಕ್ಕೆ ಹೋದರೆ ಆಶ್ಚರ್ಯವೇನಿಲ್ಲ. ಆದರೆ ಅಧಿಕೃತವಾಗಿ ಎನ್‌ಪಿಎ ಎಂದು ಪರಿಗಣಿಸದ ಆ ಭಾಗವೂ ಸಹ "ಒತ್ತಡದ ಸ್ವತ್ತುಗಳ" ವರ್ಗಕ್ಕೆ ಸೇರುತ್ತದೆ. ಹೀಗಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳು ಸರ್ಕಾರದಿಂದ ಕೇವಲ ದೀರ್ಘಾವಧಿಯ ಸಾಲಗಳನ್ನು ಮಾತ್ರವಲ್ಲ, "ಒತ್ತಡದ ಸಾಲಗಳನ್ನು" ಕೂಡ ನೀಡುವ ಬಲವಂತಕ್ಕೆ ಒಳಗಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವು ಯಾವುದೇ ಸಮಯದಲ್ಲಿ ಸ್ಫೋಟಗೊಳ್ಳಬಹುದಾದ ಜ್ವಾಲಾಮುಖಿಯ ಮೇಲೆ ಕೂತಿವೆ.

ಇದು ಇನ್ನೂ ಸ್ಫೋಟಗೊಂಡಿಲ್ಲವಾದರೆ ಮತ್ತು ಸುಪ್ತವಾಗಿ ಉಳಿದಿದ್ದರೆ, ಅದಕ್ಕೆ ಕಾರಣ ಈ ಬ್ಯಾಂಕುಗಳು ಸರ್ಕಾರಿ ಸ್ವಾಮ್ಯದಲ್ಲಿರುವುದು; ಯಾರ ಠೇವಣಿಗಳನ್ನು ಅಂತಹ ಹಣಕಾಸಿಗಾಗಿ ಬಳಸಲಾಗಿದೆಯೋ ಆ ಸಾರ್ವಜನಿಕರು ಗಾಬರಿಯಾಗಿರದಿರುವುದು– ಏಕೆಂದರೆ ಬ್ಯಾಂಕುಗಳಿಗೆ ಬಿಕ್ಕಟ್ಟು ಉಂಟಾದರೆ ಅವುಗಳ ಮಾಲಕತ್ವ ಹೊಂದಿರುವ ಸರ್ಕಾರವು ತಮ್ಮ ರಕ್ಷಣೆಗೆ ಅಗತ್ಯವಾಗಿ ಬರುತ್ತದೆ ಎಂಬ ವಿಶ್ವಾಸವನ್ನು ಅವರು ಹೊಂದಿರುವುದು. ಈ ವಿಶ್ವಾಸವೇ ಈ ಬ್ಯಾಂಕುಗಳು ಬಿಕ್ಕಟ್ಟನ್ನು ಎದುರಿಸದಂತೆ ತಡೆದಿರುವುದು.

ಆಸ್ತಿ–ಬಾಧ್ಯತೆಯ ಅಸಂಗತತೆ

ಪ್ರಪಂಚದ ಎಲ್ಲೆಡೆ ಹಣಕಾಸು ವ್ಯವಸ್ಥೆಯ ಬಿಕ್ಕಟ್ಟುಗಳು ಉದ್ಭವಿಸಿರುವುದು ಖಾಸಗಿ ಒಡೆತನದ ಹಣಕಾಸು ಸಂಸ್ಥೆಗಳು ಕಾಲಾನಂತರದಲ್ಲಿ ಆಸ್ತಿ–ಬಾಧ್ಯತೆಯ ಅಸಂಗತತೆಯನ್ನು ಬೆಳೆಸಿಕೊಂಡಾಗ. ಕಳೆದ ಶತಮಾನದ ಅಂತ್ಯದಲ್ಲಿ ಪೂರ್ವ ಏಷ್ಯಾದ ಆರ್ಥಿಕ ಬಿಕ್ಕಟ್ಟು ಒಂದು ಮಾದರಿ ಉದಾಹರಣೆಯನ್ನು ಒದಗಿಸುತ್ತದೆ. ದಕ್ಷಿಣ ಕೊರಿಯಾದ ಬ್ಯಾಂಕುಗಳ ಪ್ರಕರಣವನ್ನು ತೆಗೆದುಕೊಳ್ಳಿ. ಅವರು ವಿದೇಶಿ ಕರೆನ್ಸಿ ಠೇವಣಿಗಳನ್ನು ಆಕರ್ಷಿಸಿದರು ಮತ್ತು ದೀರ್ಘಾವಧಿಯ ಹೂಡಿಕೆ ಯೋಜನೆಗಳಿಗೆ ಆಂತರಿಕವಾಗಿ ಸಾಲಗಳನ್ನು ಮಾಡಲು ಅವನ್ನು ಬಳಸಿದರು. ಇದರರ್ಥ ಅವರ ಸ್ವತ್ತುಗಳು ಮತ್ತು ಬಾಧ್ಯತೆಗಳ ನಡುವೆ ದ್ವಿವಿಧ ಅಸಂಗತತೆಗಳು: ಮೊದಲನೆಯದಾಗಿ, ಅವರು "ದೀರ್ಘಕಾಲದ ಸಾಲವನ್ನು ನೀಡಲಿಕ್ಕಾಗಿ ಅಲ್ಪಾವಧಿ ಸಾಲ" ತೆಗೆದುಕೊಳ್ಳುತ್ತಿದ್ದರು, ಅಂದರೆ ಹೂಡಿಕೆ ಯೋಜನೆಗಳಿಗೆ ಹಣಕಾಸು ಒದಗಿಸಲು ಬ್ಯಾಂಕ್ ಠೇವಣಿಗಳ ಮೂಲಕ ಸಂಗ್ರಹಿಸಿದ ಸಂಪನ್ಮೂಲಗಳನ್ನು ಬಳಸುತ್ತಿದ್ದರು; ಮತ್ತು, ಎರಡನೆಯದಾಗಿ, ಅವರು ವಿದೇಶಿ ವಿನಿಮಯ–ಗಳಿಸದ ಯೋಜನೆಗಳಿಗೆ ಹಣಕಾಸು ಒದಗಿಸಲು ವಿದೇಶಿ ಕರೆನ್ಸಿಯಲ್ಲಿ ಎರವಲು ಪಡೆಯುತ್ತಿದ್ದರು. ಅನಿವಾರ್ಯವಾಗಿ, ಬಿಕ್ಕಟ್ಟು ಬಂದಿತು, ಮತ್ತು ಬಂದಾಗ, ಅದು ವಿಶೇಷವಾಗಿಯೂ ತೀವ್ರವಾಗಿತ್ತು.

2008 ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿನ ಆರ್ಥಿಕ ಬಿಕ್ಕಟ್ಟು ಕೂಡ ಇಂತಹ ಅಸಂಗತತೆಯ ಪ್ರತಿಫಲನವಾಗಿದೆ. ಮಹಾ ಆರ್ಥಿಕ ಕುಸಿತದ ಸಮಯದಲ್ಲಿ ರೂಸ್‌ವೆಲ್ಟ್ ಆಡಳಿತವು 1933 ರಲ್ಲಿ ಗ್ಲಾಸ್–ಸ್ಟೀಗಲ್ ಕಾಯಿದೆಯನ್ನು ಜಾರಿಗೆ ತಂದಿತು, ಅದು ಹೂಡಿಕೆ ಬ್ಯಾಂಕಿಂಗ್‌ನಿಂದ ವಾಣಿಜ್ಯ ಬ್ಯಾಂಕಿಂಗ್ ಅನ್ನು ಕಟ್ಟುನಿಟ್ಟಾಗಿ ಪ್ರತ್ಯೇಕಿಸಿತು. ಠೇವಣಿ–ಹಣಕಾಸು ಪಡೆದಿದ್ದ ವಾಣಿಜ್ಯ ಬ್ಯಾಂಕುಗಳು ಅಲ್ಪಾವಧಿಯ ಸಾಲಗಳನ್ನು ನೀಡುವುದಕ್ಕೆ ಸೀಮಿತವಾಗಿದ್ದವು, ಆದರೆ ಹೂಡಿಕೆ ಬ್ಯಾಂಕುಗಳು, ಠೇವಣಿ–ಹಣಕಾಸು ಪಡೆದಿರದವುಗಳು ಶೇರು–ಮಾರುಕಟ್ಟೆ ಚಟುವಟಿಕೆಗಳಿಗೆ ಸಾಲ ನೀಡುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದಾಗಿತ್ತು. ಈ ಕಾಯಿದೆಯು ಬ್ಯಾಂಕ್‌ಗಳು ಠೇವಣಿಗಳನ್ನು ಸ್ವೀಕರಿಸಿ ತಮ್ಮ ಸಂಪನ್ಮೂಲಗಳನ್ನು ಶೇರು ಮಾರುಕಟ್ಟೆಯಲ್ಲಿ ಬಳಸಿದ್ದರಿಂದ ಮಹಾ ಕುಸಿತದ ಸಮಯದಲ್ಲಿ ಬಿಕ್ಕಟ್ಟಿಗೆ ಒಳಗಾದುದಕ್ಕೆ ಪ್ರತಿಕ್ರಿಯೆಯಾಗಿ ಬಂದಿತ್ತು. ಈ ಬಿಕ್ಕಟ್ಟನ್ನು ಕಡಿಮೆ ಮಾಡಲು ಅಮೆರಿಕ ಸರ್ಕಾರದ ಕಡೆಯಿಂದ ಗಣನೀಯ ಪ್ರಯತ್ನ ಬೇಕಾಯಿತು, ರೂಸ್‌ವೆಲ್ಟ್‌ರವರ ಪ್ರಸಿದ್ಧ "ಫೈರ್ ಸೈಡ್ ಚಾಟ್" ಪ್ರಸಾರಗಳು ಕೂಡ ಇದರಲ್ಲಿ ಸೇರಿವೆ. ಆದರೆ 1999ರಲ್ಲಿ ಗ್ಲಾಸ್–ಸ್ಟೀಗಲ್ ಕಾಯಿದೆಯನ್ನು ರದ್ದುಗೊಳಿಸಲಾಯಿತು; ಅದು ಆರ್ಥಿಕ ವ್ಯವಸ್ಥೆಯು ಮತ್ತೊಮ್ಮೆ ತೀವ್ರ ಬಿಕ್ಕಟ್ಟನ್ನು ಎದುರಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಿತು. ಖಚಿತವಾಗಿ ಹೇಳುವುದಾದರೆ, ಅದು ಬಿಕ್ಕಟ್ಟಿನ ಹಿಂದಿನ ಏಕೈಕ ಅಂಶವಾಗಿರಲಿಲ್ಲ; ಒಟ್ಟಾರೆಯಾಗಿ ಹಣಕಾಸು ವ್ಯವಸ್ಥೆಯಾದ್ಯಂತ ಸಾಲ ನೀಡಿಕೆಯ ಅಪಾಯ ಸಂಭವಗಳ ಬಗ್ಗೆ ಗಂಭೀರವಾದ ಅಂದಾಜು ಮಾಡಿರಲಿಲ್ಲ, ಅದರಿಂದಾಗಿಯೇ ಲೆಹ್ಮನ್ ಬ್ರದರ್ಸ್‌ನಂತಹ ಹೂಡಿಕೆ ಬ್ಯಾಂಕ್ ಕುಸಿಯಿತು. ಆದರೆ ಅಪಾಯಗಳ ಈ ಕೀಳಂದಾಜಿನಿಂದಾಗಿ, ವಾಣಿಜ್ಯ ಬ್ಯಾಂಕ್‌ಗಳು ಸಹ ಹಣಕಾಸಿನ ಬಿಕ್ಕಟ್ಟಿಗೆ ಒಡ್ಡಿಕೊಂಡದ್ದು, ಸರಕಾರೀ ನಿಯಂತ್ರಣವಿದ್ದ ಸನ್ನಿವೇಶದಲ್ಲಿ ಅವರ ಎಂದಿನ ವ್ಯವಹಾರಗಳ ಭಾಗವಾಗಿರದ ಆಸ್ತಿಗಳ ಮೇಲೆ ಸಾಲ ನೀಡಿದ್ದರಿಂದಾಗಿ ಎಂಬ ಅಂಶವೂ ಇದೆ.

ಭಾರತದಲ್ಲಿಯೂ ಸಾರ್ವಜನಿಕ ವಲಯದ ಬ್ಯಾಂಕುಗಳು ಸರ್ಕಾರದ ತೋಳು ತಿರುಚುವ ಕ್ರಮಗಳಿಂದಾಗಿ ಅಭೂತಪೂರ್ವ ಅಪಾಯಗಳಿಗೆ ಒಡ್ಡಿಕೊಂಡಿವೆ; ಸಾರ್ವಜನಿಕ ವಲಯದಲ್ಲಿ ಠೇವಣಿದಾರರ ನಂಬಿಕೆಯಿಂದಾಗಿ ಅವು ಇಲ್ಲಿಯವರೆಗೆ ಅಪಾಯಕ್ಕೊಳಗಾಗದೆ ಉಳಿದುಕೊಂಡಿವೆ. ಅವುಗಳನ್ನು ಖಾಸಗೀಕರಣಗೊಳಿಸಿದರೆ ಅವು ಕುಳಿತಿರುವ ಜ್ವಾಲಾಮುಖಿ ಸ್ಫೋಟಗೊಳ್ಳುತ್ತದೆ ಮತ್ತು ಅದು ಠೇವಣಿದಾರರರನ್ನು ಅಪಾರವಾಗಿ ಬಾಧಿಸುತ್ತದೆ, ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ. ಇದು ಕೇವಲ ಠೇವಣಿದಾರರ ಮೇಲಷ್ಟೇ ಅಲ್ಲ, ಭಾರತದ ಆರ್ಥಿಕತೆಯ ಮೇಲೂ ಗಂಭೀರ ಮತ್ತು ಹಾನಿಕಾರಕ ಪರಿಣಾಮವನ್ನು ಬೀರುತ್ತದೆ.

ಖಾಸಗೀಕರಣದ ಸಂದರ್ಭದಲ್ಲೂ ಠೇವಣಿದಾರರು, ಬ್ಯಾಂಕ್ ಸಾರ್ವಜನಿಕ ವಲಯದಲ್ಲಿ ಉಳಿದಿದ್ದರೆ ಸರ್ಕಾರವು ಮಾಡಬಹುದಾದಂತೆ, ಖಾಸಗೀಕರಣಗೊಂಡ ಬ್ಯಾಂಕಿನ ರಕ್ಷಣೆಗೆ ಬರುತ್ತದೆ ಎಂದು ನಂಬುತ್ತಾರೆ, ಮತ್ತು ಈ ನಂಬಿಕೆಯು ಬ್ಯಾಂಕುಗಳ ಮೇಲೆ ಪರಿಣಾಮ ಬೀರುವ ಯಾವುದೇ ಬಿಕ್ಕಟ್ಟನ್ನು ತಡೆಯುತ್ತದೆ ಎಂದು ಅವರು ಭಾವಿಸಬಹುದು. ಆದರೆ ಈ ನಂಬಿಕೆಗೆ ಇರುವ ಸಮರ್ಥನೆ ಬಹಳ ಕಡಿಮೆ: ಬ್ಯಾಂಕ್‌ನ ನೇರ ಮಾಲೀಕರಾಗಿದ್ದರೆ ಸರ್ಕಾರದ ಮೇಲೆ ಬರಬಹುದಾದ ರಾಜಕೀಯ ಒತ್ತಡವು ಬ್ಯಾಂಕ್ ಖಾಸಗಿ ಒಡೆತನದಲ್ಲಿದ್ದರೆ ಇರುವುದಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಸರ್ಕಾರವು ಬಲವಂತವಾಗಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಮೇಲೆ ಆಸ್ತಿ–ಬಾಧ್ಯತೆಗಳ ಅಸಂಗತತೆಯನ್ನು ಹೇರಿರುವಾಗ, ಅವುಗಳನ್ನು ಖಾಸಗೀಕರಣಗೊಳಿಸುವ ಮೂಲಕ ಕೈತೊಳೆದುಕೊಳ್ಳುವುದು ಸಂಪೂರ್ಣ ಬೇಜವಾಬ್ದಾರಿಯ ಕ್ರಿಯೆಯಾಗುತ್ತದೆ. ಇದು ದೇಶದ ಸಾಮಾನ್ಯ ಠೇವಣಿದಾರರನ್ನು ತೀವ್ರ ಆರ್ಥಿಕ ನಷ್ಟದ ಸಂಭವನೀಯತೆಗೆ ಒಡ್ಡುವುದಲ್ಲದೆ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಸಾರ್ವಜನಿಕರ ನಂಬಿಕೆಯನ್ನು ಕೂಡ ದೀರ್ಘಕಾಲದವರೆಗೆ ತೊಡೆದುಹಾಕುತ್ತದೆ, ಆಸ್ತಿ–ಆದ್ಯತೆಯನ್ನು ಬ್ಯಾಂಕ್–ಠೇವಣಿಗಳಿಂದ ದೂರ ಒಯ್ದು ಕರೆನ್ಸಿ ಕಳ್ಳಸಂಗ್ರಹದ ಕಡೆಗೆ ಪಲ್ಲಟಗೊಳಿಸುವ ಇದು ಅಭಿವೃದ್ಧಿಯ ಪ್ರತೀಕ್ಷೆಗಳನ್ನು ದೀರ್ಘಕಾಲದ ವರೆಗೆ ಹಾನಿಗೀಡು ಮಾಡುವ ಹಿಮ್ಮುಖ ನಡೆಯಾಗುತ್ತದೆ.

ಅನು: ಕೆ.ವಿ.

ಜನ ಚಳುವಳಿಗಳ ಪ್ರೀತಿಯ ಮೇಷ್ಟ್ರು ಪ್ರೊ. ಬಿ. ಗಂಗಾಧರ ಮೂರ್ತಿ

ಆರ್. ರಾಮಕೃಷ್ಣ

ಎಲ್ಲರೂ ಪ್ರೀತಿಯಿಂದ ಮತ್ತು ಗೌರವದಿಂದ 'ಬಿ.ಜಿ.ಎಂ.' ಎಂದು ಕರೆಯುತ್ತಿದ್ದ ಮೇಷ್ಟ್ರು ಪ್ರೊ. ಬಿ. ಗಂಗಾಧರ ಮೂರ್ತಿಯವರು ಸೆಪ್ಟೆಂಬರ್ 10, 2022 ರಂದು ತಮ್ಮ ಎಪ್ಪತ್ತೇಳನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು. ಎಡ ಚಳುವಳಿ, ದಲಿತ ಚಳುವಳಿ, ಸಾಂಸ್ಕೃತಿಕ, ಜನ ವಿಜ್ಞಾನ ಚಳುವಳಿಗಳು ಸೇರಿದಂತೆ ರಾಜ್ಯದ ನಾನಾ ಪ್ರಗತಿಪರ ಚಳುವಳಿಗಳು ಒಬ್ಬ ಆಪ್ತ ಬಂಧು ಮತ್ತು ಮಾರ್ಗದರ್ಶಿ ಹಾಗೂ ಹಿತೈಷಿಯನ್ನು ಕಳೆದುಕೊಂಡಿವೆ.

ಪ್ರೊ. ಗಂಗಾಧರ ಮೂರ್ತಿಯವರು ಹಾಸನ ಜಿಲ್ಲೆಯ ಹೊಳೆನರಸೀಪುರದ ಬಡ ಕ್ಷೌರಿಕ ಕುಟುಂಬದಲ್ಲಿ ಹುಟ್ಟಿದರು. ಕಡುಕಷ್ಟದಲ್ಲೇ ಓದು ಸಾಗಿತು. ಶಿವಮೊಗ್ಗದಲ್ಲಿ ಲೇಖಕ, ಪ್ರಾಧ್ಯಾಪಕ ಎಚ್.ಜೆ. ಲಕ್ಕಪ್ಪ ಗೌಡರ ಪರಿಚಯದಿಂದಾಗಿ ಓದುವ ಹವ್ಯಾಸ, ಪುಸ್ತಕ ಪ್ರೀತಿ ಬೆಳೆಯಿತು. ನೌಕರಿ ಮಾಡುತ್ತಲೇ ದೂರ ಶಿಕ್ಷಣದ ಮೂಲಕ ಪದವಿ ಪಡೆದರು. ರೈಲ್ವೆ ಮೇಲ್ ಸರ್ವಿಸ್ (ಆರ್.ಎಂ.ಎಸ್.)ಗೆ ಸೇರಿ ದುಡಿಯುತ್ತಲೇ, ಅಲ್ಲಿ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯರಾದರು. ಮೈಸೂರಿನಲ್ಲಿ ಸಿ.ಎಫ್.ಟಿ.ಆರ್.ಐ. ಸಂಸ್ಥೆಯ ವಿಜ್ಞಾನಿಗಳು ಹಾಗು ಮಾರ್ಕ್ಸ್‌ವಾದಿ ಚಳುವಳಿಯ ಹಿರಿಯ ನಾಯಕರಾದ ಕಾಂ. ಉಗ್ರಪ್ಪ, ಪ್ರಭಾಕರ್, ತಿರುಮಲಾಚಾರ್ ಮುಂತಾದವರ ಜೊತೆಗೆಯಲ್ಲಿ ಪಳಗಿದರು. ಪ್ರಗತಿಪರ ಚಳುವಳಿಯಲ್ಲಿ ದೇವನೂರು ಮಹದೇವ ಮುಂತಾದವರ ಜೊತೆ ಕ್ರಿಯಾಶೀಲ ಪಾತ್ರವಹಿಸಿದರು. ಸರಸ್ವತಿಪುರಂನಲ್ಲಿದ್ದ 'ಮಾರ್ಕ್ಸ್‌ವಾದಿ ಗ್ರಂಥಾಲಯ'ದಲ್ಲಿ ಸಾಕಷ್ಟು ಕಲಿತರು. ನಂತರ ಡಾ. ಯು.ಆರ್. ಅನಂತ ಮೂರ್ತಿಯವರ ಸಲಹೆಯಂತೆ ಇಂಗ್ಲೀಷ್ ಎಂ.ಎ. ಮುಗಿಸಿ ಕೆಲವು ಕಾಲೇಜುಗಳಲ್ಲಿ ಅಧ್ಯಾಪಕರಾದರು. ಅವಿಭಜಿತ ಕೋಲಾರ ಜಿಲ್ಲೆ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿಗೆ ಸೇರಿದ ಮೇಲೆ ಅಲ್ಲಿಯೇ ನೆಲೆಸಿದರು.


ಮೇಷ್ಟ್ರು ಬರಿ 'ಅಂಕಗಳಿಕೆ'ಗಾಗಿ ವಿದ್ಯಾರ್ಥಿಗಳಿಗೆ 'ಪಾಠ' ಮಾಡುವುದಕ್ಕೆ ಸೀಮಿತರಾಗಲಿಲ್ಲ. ಪ್ರಾಧ್ಯಾಪಕ ಬರಹಗಾರ ರಂಗಾರೆಡ್ಡಿ ಕೋಡಿರಾಂಪುರ, ನಗರಗೆರೆ ರಮೇಶ್, ಎಚ್.ಎಸ್. ವೇಣು ಗೋಪಾಲ ಮುಂತಾದ ಸಮಾನ ಮನಸ್ಕರು ಒಂದುಗೂಡಿದರು. ಎಚ್.ಎಂ. ರಾಮಚಂದ್ರ, ಕೆ.ಎಂ. ಕೋಮಣ್ಣ ಮುಂತಾದವರು ಆಗಾಗಲೇ ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ದಲಿತ ಜಾಗೃತಿಯ ಕೆಲಸ ಮಾಡುತ್ತಿದ್ದರು. ಎಲ್ಲರೂ ಒಟ್ಟುಗೂಡಿ, ಸಮಾಜದಲ್ಲಿ ಸುತ್ತಮುತ್ತಲಲ್ಲಿ ಬೇರುಬಿಟ್ಟಿರುವ ಜಾತಿಯ ಅನ್ಯಾಯ– ಶೋಷಣೆ, ಬಲಾಢ್ಯ ಶಕ್ತಿಗಳ ದೌರ್ಜನ್ಯ ಅಕ್ರಮಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಿದರು. ಸಭೆ, ಸಮಾಲೋಚನೆ, 'ಸಮುದಾಯ' ಸಾಂಸ್ಕೃತಿಕ ರಂಗ ಚಳುವಳಿಯ ಬೀದಿನಾಟಕಗಳು ಮುಂತಾವುಗಳ ಮೂಲಕ ಶೋಷಕ ವ್ಯವಸ್ಥೆಯ ವಿರುದ್ಧ ದಿಟ್ಟವಾಗಿ ದನಿಯೆತ್ತಿದರು. ಗೌರಿಬಿದನೂರಿನಲ್ಲಿ ಹಲವು ರೀತಿಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರು ಹಾಕಿಕೊಳ್ಳಲು ಅವರು ಹಿಂಜರಿಯಲಿಲ್ಲ.

ಅದು 1982 ರ ಸಮಯ. ಗೌರಿಬಿದನೂರು ತಾಲ್ಲೂಕಿನಲ್ಲಿ ದಲಿತ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಇಲ್ಲದಿದ್ದರಿಂದ ಹಾಸ್ಟೆಲ್‌ಗಾಗಿ ಚಳುವಳಿ ಆರಂಭವಾಯಿತು. ಪಿನಾಕಿನಿ ನದಿಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆ ಹಾಗೂ ಇನ್ನೂ ಹಲವು ತೆರನಾದ ಅನ್ಯಾಯಗಳ ವಿರುದ್ಧ ದನಿಯೆತ್ತಿದ್ದರಿಂದ ಮೇಷ್ಟ್ರ ಮೇಲೆ ಮಾರಣಾಂತಿಕ ಹಲ್ಲೆ ನಡೆದು ತಲೆಗೆ ಪೆಟ್ಟಾಯಿತು. ಪ್ರಗತಿಪರ ಚಳುವಳಿಯ ಕಾರ್ಯಕರ್ತರ ಮೇಲೂ, ಮನೆಗಳ ಮೇಲೂ ಹಲ್ಲೆ ಆಕ್ರಮಣಗಳು ನಡೆದವು. ಇದರಿಂದ ಮೇಷ್ಟ್ರ ಹೋರಾಟದ ಸಂಕಲ್ಪ ಮತ್ತಷ್ಟು ಗಟ್ಟಿಯಾಯಿತು. ಈ ಹೋರಾಟಗಳ ಬೆನ್ನೆಲುಬಾಗಿದ್ದ ಮೇಷ್ಟ್ರು ಸೈದ್ಧಾಂತಿಕ ಮಾರ್ಗದರ್ಶಿಯೂ ಆಗಿದ್ದರು.

ತಾಲ್ಲೂಕಿನ ನಾಗಸಂದ್ರ ಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ ನಾಗಿರೆಡ್ಡಿ ಮತ್ತು ಅವರ ದಾಯಾದಿಗಳ ಸುಮಾರು 6–7 ದೊಡ್ಡ ಜಮೀನ್ದಾರರ ಹಟ್ಟಿಗಳಲ್ಲಿ ಸುಮಾರು 130 ಜನ ದಲಿತರನ್ನು ಹಲವು ತಲೆಮಾರುಗಳಿಂದ ಜೀತಕ್ಕಿರಿಸಿಕೊಂಡು ದುಡಿಸಲಾಗುತ್ತಿತ್ತು. ಪ್ರಗತಿಪರ ಸಂಘಟನೆಗಳು ಈ ಅನ್ಯಾಯದ ವಿರುದ್ಧ ಚಳುವಳಿ ಆರಂಭಿಸಿದವು. ಬಿಜಿಎಂ ಮೇಷ್ಟ್ರು ಈ ಚಳುವಳಿಯ ಮುಖ್ಯ ಪ್ರೇರಣೆ ಮತ್ತು ಶಕ್ತಿಯಾಗಿದ್ದರು.

ಜಮೀನ್ದಾರಿ ಕುಟುಂಬಗಳು ಸ್ವಾತಂತ್ರ್ಯಕ್ಕೆ ಮೊದಲೂ ನಂತರವೂ ರಾಜಕಾರಣದಲ್ಲಿ ಪ್ರಬಲವಾದ ಹಿಡಿತ ಹೊಂದಿದ್ದರು. 1947 ರಲ್ಲಿ ಭಾರತ ದೇಶಕ್ಕೆ ಬಂದ ಸ್ವಾತಂತ್ರ್ಯದ ಸ್ವರೂಪ ಎಂತದ್ದು ಅದರ ಇತಿ–ಮಿತಿಗಳೇನು ಎಂಬುದಕ್ಕೆ ಈ ಪ್ರಕರಣ ಒಂದು ಸಂಕೇತವಾಗಿದೆ.

ಮುಂದೆ 1983–84 ರಲ್ಲಿ ನಾಗಸಂದ್ರದ ಜೀತಗಾರರು, ಭೂಮಿ ಇಲ್ಲದ ದಲಿತ ಕುಟುಂಬಗಳಿಗೆ ಸ್ವಂತ ಭೂಮಿ ನೀಡಬೇಕು ಎಂಬ ಚಳುವಳಿ ಆರಂಭವಾಯಿತು. ಬಲಾಢ್ಯ ಜಾತಿವಾದಿ ಶಕ್ತಿಗಳಿಂದ ಮತ್ತೆ ಹಲ್ಲೆಗಳು ನಡೆದವು. ಚಳುವಳಿಗಾರರು 1984ರ ಆಗಸ್ಟ್ 14 ರ ರಾತ್ರಿ ಸುಮಾರು 400 ಎಕರೆಗಳಷ್ಟಿದ್ದ ಗ್ರಾಮದ ಈಚಲು ವನವನ್ನು ಕಡಿದು ಭೂಮಿಯನ್ನು ಆಕ್ರಮಿಸಿಕೊಂಡರು. 'ಹೆಂಡ ಬೇಡ, ಭೂಮಿ ಬೇಕು' ಎಂಬುದು ಚಳುವಳಿಯ ಘೋಷಣೆಯಾಗಿತ್ತು.



ಚಳುವಳಿ ರಾಜ್ಯವ್ಯಾಪಿ ಗಮನ ಸೆಳೆಯಿತು.

ಕೊನೆಗೆ ಸುಮಾರು 130 ದಲಿತ ಕುಟುಂಬಗಳಿಗೆ ತಲಾ ಎರಡು ಎಕರೆ ಜಮೀನು ಮಂಜೂರಾಯಿತು. ಎಲ್ಲರಿಗೂ ಅಲ್ಲವಾದರೂ ಒಂದಷ್ಟು ಕುಟುಂಬಗಳ ಜಮೀನಿಗೆ ನೀರಿನ ಸೌಲಭ್ಯ ದೊರೆಯಿತು. ಸುಮಾರು 70 ಕುಟುಂಬಗಳಿಗೆ ಮನೆ ಮಂಜೂರಾಯಿತು. ಹೋರಾಟದ ಒತ್ತಡದ ಫಲವಾಗಿ ಸರಕಾರಿ ಶಾಲೆ ಬಂತು. ಹೋರಾಟದಿಂದ ರೂಪುಗೊಂಡ ಈ ಹೊಸ ಊರಿಗೆ 'ಶಂಭೂಕ ನಗರ' ಎಂಬ ಅರ್ಥಪೂರ್ಣವಾದ ಹೆಸರು ಇಡಲಾಯಿತು. ಜನ ಚಳುವಳಿಗಳ ಒತ್ತಡಗಳಿಂದ ಹಿಂದುಳಿದ ಈ ತಾಲ್ಲೂಕಿಗೆ ಸರಕಾರಿ ವಸತಿಶಾಲೆಗಳು, ಕೇಂದ್ರೀಯ ವಿದ್ಯಾಲಯ, ತಾಂತ್ರಿಕ ಶಿಕ್ಷಣ ಸಂಸ್ಥೆಗಳೂ ಮಂಜೂರಾದವು. ಈ ಎಲ್ಲ ಪ್ರಗತಿಯ ಹಿಂದೆ ಪ್ರೊ. ಬಿ. ಗಂಗಾಧರ ಮೂರ್ತಿಯವರ ಮಾರ್ಗದರ್ಶನ, ಬೆಂಬಲ ಪ್ರೇರಣೆ ಇತ್ತು.

ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಕರೆಯಲಾಗುವ ತಾಲ್ಲೂಕಿನ 1938ರ ವಿಧುರಾಶ್ವಥದಲ್ಲಿನ ಐತಿಹಾಸಿಕ ಧ್ವಜಸತ್ಯಾಗ್ರಹ ಹತ್ಯಾಕಾಂಡದ ಕುರಿತ ಹುತಾತ್ಮ ಸ್ವಾತಂತ್ರ್ಯೋಧರ ನೆನಪಿಗಾಗಿ ನಿರ್ಮಿಸಲಾಗಿರುವ 'ವೀರ ಸೌಧ ಸ್ಮಾರಕ'ದ ಗ್ಯಾಲರಿ ನಿರ್ಮಾಣ ಮತ್ತು ಗ್ರಂಥಾಲಯಗಳ ಪರಿಕಲ್ಪನೆಯ ಹಿಂದೆ ಬಿಜಿಎಂ ಅವರ ಆಳವಾದ ಅಧ್ಯಯನ ಮತ್ತು ಚಿಂತನೆ ಮತ್ತು ಪರಿಶ್ರಮಗಳಿವೆ. ಇದಕ್ಕೆ ಬಿ.ಜಿ.ಎಂ. ಅವರೊಂದಿಗೆ ಬಿ.ಜಿ.ವಿ.ಎಸ್. ನ ಗೆಳೆಯ ಜಗದೀಶ್ ಸುಜಲೂರು ರವರು ಸಾಥ್ ನೀಡಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟ ಎಂದರೆ, ಕೇವಲ ಕಾಂಗ್ರೆಸ್ ನೇತೃತ್ವದ ನದಿ ಮಾತ್ರವಲ್ಲ, ಕಮ್ಯೂನಿಸ್ಟರ ನೇತೃತ್ವದ ಧೀಮಂತ ಚಳುವಳಿಗಳು, ಹತ್ತಾರು ಆದಿವಾಸಿ ದಂಗೆಗಳು, ಹಿಂದುಗಳು ಮುಸ್ಲಿಮರು ಕ್ರಿಶ್ಚಿಯನ್ನರು, ದಲಿತರು, ಮಹಿಳೆಯರು, ಪಕೀರರ ದಂಗೆ, ಸಂನ್ಯಾಸಿ ಬಂಡಾಯ ಇತ್ಯಾದಿಗಳು ಒಡಗೂಡಿದ ನೂರಾರು ತೊರೆಗಳು ಎಂದು ಸಚಿತ್ರವಾಗಿ ಇಲ್ಲಿ ನಿರೂಪಿಸಲಾಗಿದೆ.

ಪ್ರೊ. ಬಿ. ಗಂಗಾಧರ ಮೂರ್ತಿಯವರು ಹಲವಾರು ಪುಸ್ತಕಗಳನ್ನು ರಚಿಸಿದ್ದಾರೆ. ಕರ್ನಾಟಕದ ಜನತೆಗೆ ಅಗತ್ಯ ಎನಿಸಿದ ಹಲವು ಉತ್ತಮ ಕೃತಿಗಳನ್ನು ಬೇರೆ ಭಾಷೆಗಳಿಂದ ಅನುವಾದ ಮಾಡಿದ್ದಾರೆ. ಡಾ. ವಿ.ಆರ್. ನಾರ್ಲ ಅವರ 'ಭಾರತೀಯ ಸಂಸ್ಕೃತಿಯ ಜಾತಿ ಲಕ್ಷಣ' ಎಂಬುದು ಇಂತಹ ಒಂದು ಅನುವಾದ. ಆನಂದ ತೇಲ್ತುಂಬ್ಡೆ ಅವರ ಬರಹಗಳನ್ನು ಅನುವಾದಿಸಿದ್ದಾರೆ. ಬಿಜಿಎಂ ಪ್ರಗತಿಪರ ಚಳುವಳಿಗಳ ಹಲವು ಅಧ್ಯಯನ ಶಿಬಿರಗಳಲ್ಲಿ ತಮ್ಮ ಚಿಂತನೆಯನ್ನು ಮಂಡಿಸಿ ಜನಚಳುವಳಿಗಳ ಕಾರ್ಯಕರ್ತರನ್ನು ಚಿಂತನೆಗೆ ಹಚ್ಚಿದ್ದಾರೆ. ಭಾರತ ಜ್ಞಾನ ವಿಜ್ಞಾನ ಸಮಿತಿ ಹೊರತರುವ 'ಟೀಚರ್' ಶೈಕ್ಷಣಿಕ ಮಾಸ ಪತ್ರಿಕೆಗೆ ಸುಮಾರು ಹನ್ನೆರಡು ವರ್ಷಗಳ ಕಾಲ ಪ್ರಧಾನ ಸಂಪಾದಕರಾಗಿದ್ದು ಮಾರ್ಗದರ್ಶನ ಮಾಡಿದ್ದಾರೆ. 90 ರ ದಶಕದ ಸಾಕ್ಷರತಾ ಆಂದೋಲನದಲ್ಲಿ ತೊಡಗಿ ಜನಜಾಗೃತಿ ಮೂಡಿಸುವಲ್ಲಿ ದುಡಿದಿದ್ದಾರೆ. ಡಾ.ಎಚ್. ನರಸಿಂಹಯ್ಯರ ಒಡನಾಟದಲ್ಲಿದ್ದು ಮೂಢನಂಬಿಕೆಗಳ ವಿರುದ್ಧ ವೈಜ್ಞಾನಿಕ ಮನೋಭಾವ ಹರಡಲು ಶ್ರಮಿಸಿದ್ದಾರೆ.

ಇಂದು ದೈಹಿಕವಾಗಿ ಬಿ.ಜಿ.ಎಂ. ನಮ್ಮ ಜೊತೆ ಇಲ್ಲ. ಅವರ ಬಯಕೆಯಂತೆ ಅವರ ದೇಹವನ್ನು ವೈದ್ಯಕೀಯ ಸಂಶೋಧನೆಗಾಗಿ ಬೆಂಗಳೂರಿನ ಸರಕಾರಿ ವೈದ್ಯಕೀಯ ಕಾಲೇಜಿಗೆ ನೀಡಲಾಗಿದೆ.

ಪ್ರೊ. ಬಿ. ಗಂಗಾಧರ ಮೂರ್ತಿಯವರು ತಮ್ಮ ಬದುಕಿನುದ್ದಕ್ಕೂ ಬಾಳಿ ಬದುಕಿದ ಉನ್ನತ ಮೌಲ್ಯಗಳು, ಅವರ ಪ್ರಗತಿಪರ ವಿಚಾರಗಳು, ಅವರು ಪ್ರಗತಿಪರ ಚಳುವಳಿಯ ಕಾರ್ಯಕರ್ತರ ಬಗೆಗೆ ತೋರಿಸಿದ ಪ್ರೀತಿಯ ನೆನಪುಗಳು ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿರುತ್ತದೆ.

ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿದ್ದ ಬಿಜಿಎಂ ಅವರು ಭಾರತದ ಸಂಕೀರ್ಣ ಆರ್ಥಿಕ–ಸಾಮಾಜಿಕ ಸಾಂಸ್ಕೃತಿಕ ಪರಿಸ್ಥಿತಿಯನ್ನು ಅರಿಯುವ ನಿಟ್ಟಿನಲ್ಲಿ ಹಾಗೂ ಜಟಿಲ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಅಂಬೇಡ್ಕರ್‌ವಾದ ಗಾಂಧಿವಾದ ಎಲ್ಲವನ್ನೂ ಆಳವಾಗಿ ಅಭ್ಯಾಸ ಮಾಡಿದರು. ಈ ಎಲ್ಲವುಗಳಿಂದಲೂ ಸಮಾಜಕ್ಕೆ ಸಾಧ್ಯವಾದ ಪ್ರಯೋಜನಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿದರು.

ಬಿಜಿಎಂ ಅವರ ಕೊನೆಯ ಕಾಲದಲ್ಲಿ ಮತಾಂಧ ಶಕ್ತಿಗಳು ವಿಧುರಾಶ್ವಥದ ವೀರ ಸೌಧ ಸ್ಮಾರಕಕ್ಕೆ ನುಗ್ಗಿ ದಾಂದಲೆ ನಡೆಸಿದ್ದನ್ನು ನೋಡಬೇಕಾದ ಪರಿಸ್ಥಿತಿ ಬಂದಿತು. ಬ್ರಿಟಿಷರ ಜೊತೆ ಶಾಮೀಲಾಗಿ ಭಾರತದ ಜಾತಿವಾದಿ ಶೋಷಕ ಸಾಮಾಜಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಹೆಣಗಿದ ಆರೆಸ್ಸೆಸ್ ಮುಂತಾದ ಹಿಂದುತ್ವವಾದಿ ಶಕ್ತಿಗಳು, ಬ್ರಿಟಿಷರನ್ನು ಭಾರತದ ಉಪಖಂಡದಿಂದಲೇ ಆಚೆ ಹಾಕಬೇಕೆಂದು ಸಮರ ಸಾರಿ ಯುದ್ಧ ಭೂಮಿಯಲ್ಲೇ ಹೋರಾಡುತ್ತಲೇ ಪ್ರಾಣತೆತ್ತ ಹುತಾತ್ಮ ಟಿಪ್ಪು ಚಿತ್ರವನ್ನು ತೆಗೆದುಹಾಕಬೇಕೆಂದು ಗಲಭೆ ನಡೆಸುತ್ತಿರುವುದು, ಆದಿವಾಸಿಗಳ ದಂಗೆ ಸ್ವಾತಂತ್ರ ಹೋರಾಟ ಅಲ್ಲವೆಂದು ಒತ್ತಾಯಿಸುವುದು ಭಾರತ ದೇಶವು ಪ್ರಸ್ತುತ ಯಾವ ದಿಕ್ಕಿನತ್ತ ಚಲಿಸುತ್ತಿದೆ ಎಂಬುದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿದೆ. ಈ ಅಪಾಯದ ಕುರಿತು ಬಿಜಿಎಂ ಅವರಿಗೆ ಸ್ಪಷ್ಟತೆ ಇತ್ತು. ಕೊನೆಗಾಲದಲ್ಲೂ ಅದನ್ನು ಅವರು ದಿಟ್ಟವಾಗಿಯೇ ಎದುರಿಸಿದರು. ಗೌರಿಬಿದನೂರಿನಲ್ಲಿ ರೂಪುಗೊಂಡಿರುವ ಬಾಬಾ ಸಾಹೇಬ ಅಂಬೇಡ್ಕರ್ ನೆನಪಿನ 'ಸಮಾನತಾ ಸೌಧ' ಬಿಜಿಎಂ ಅವರ ಆಳ ಅಧ್ಯಯನದ ಫಲ. ಈ ಸೌಧದ ಮೇಲೂ ಪ್ರಗತಿವಿರೋಧಿ ಶಕ್ತಿಗಳು ಮುಗಿ ಬೀಳುವ ದಿನಗಳು ದೂರವಿಲ್ಲ. ನಮ್ಮ ಸಮಾಜವು ಪ್ರಗತಿಯ ಹೊಸ ಹೊಸ ಹೆಜ್ಜೆಗಳನ್ನು ಇಡಬೇಕು. ಅದಕ್ಕೆ ಮೊದಲು ಈಗ ಸಾಧಿಸಲಾಗಿರುವ ಪ್ರಗತಿ–ಸಾಧನೆಯನ್ನು ಉಳಿಸಿಕೊಳ್ಳಬೇಕು. ಅದೇ ನಾವು ಬಿಜಿಎಂ. ಮೇಷ್ಟರಿಗೆ ಸಲ್ಲಿಸುವ ಗೌರವ. ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ದೇವರ ಗುಜ್ಜ ಕೋಲು ಮುಟ್ಟಿದ ಎಂಬ ಕಾರಣಕ್ಕಾಗಿ ದಲಿತ ಬಾಲಕನ ಕುಟುಂಬಕ್ಕೆ ದುಬಾರಿ ದಂಡ ಹಾಕಿ, ಬಹಿಷ್ಕಾರ ಹಾಕಲಾಗಿದೆ. ಅಂದರೆ ನಾವೆಲ್ಲಾ ಸಾಗಬೇಕಾದ ದಾರಿ, ಗುರಿ ಇನ್ನೂ ಬಲು ದೂರ ಇದೆ ಎಂಬುದನ್ನು ಒತ್ತಿ ಒತ್ತಿ ಹೇಳುತ್ತಿವೆ.

ಪ್ರಕಟವಾದ ಕೃತಿಗಳು:

1. ಹೂ ಅರಳುವಂಥ ಮಣ್ಣು(ಕವನ),
2. ಸಂಸ್ಕಾರ ಸಮೀಕ್ಷೆ(ವಿಮರ್ಶಾ ಲೇಖನಗಳು),
3. ಭಾರತೀಯ ಸಾಹಿತ್ಯದ ವರ್ಗನೆಲೆ(ಸಂ. ವಿಮರ್ಶಾ ಲೇಖನಗಳು),
4. ನಾಗಸಂದ್ರ ಭೂ ಆಕ್ರಮಣ ಚಳುವಳಿ,
5. ಸೂಫಿ ಕಥಾಲೋಕ,
6. ಭಾರತ ಸ್ವಾತಂತ್ರ್ಯ ಚಳುವಳಿಯ ಪ್ರಧಾನೇತರ ಹೋರಾಟಗಳು,
7. The Politics of Banning Beef,
8. ಕರ್ನಾಟಕದ ಜಲಿಯನ್ ವಾಲ ಬಾಗ್ ವಿದುರಾಶ್ವತ್ಥ,
9. ಪದ್ಮಭೂಷಣ ಡಾ.ಎಚ್.ನರಸಿಂಹಯ್ಯನವರ(ಸಂಕ್ಷಿಪ್ತ ಜೀವನ ಚಿತ್ರಣ),
10. ಸದನ ದಲ್ಲಿ ಡಾ. ಎಚ್ ನರಸಿಂಯ್ಯ,

ಅನುವಾದಗಳು

1. ಭಾರತದ ಬೌದ್ಧಿಕ ದಾರಿದ್ರ್ಯ,
2. ಭಾರತೀಯ ಸಂಸ್ಕೃತಿಯ ಜಾತಿ ಲಕ್ಷಣ,
3. ಅಂಬೇಡ್ಕರ್ ಮತ್ತು ಮುಸ್ಲಿಮರು,
4. ವಸಾಹತು–ಪೂರ್ವ ಕಾಲದ ಜಾತಿ ಹೋರಾಟಗಳು,
5. ಕೋಮುವಾದಿ ಕಾರ್ಯಾಚರಣೆ ಮತ್ತು ದಲಿತ ಪ್ರತಿಸ್ಪಂದನೆ,
   ಪುರಸ್ಕಾರಗಳು.
   ಕುವೆಂಪು ಭಾಷಾಭಾರತಿ ಪ್ರಾಧಿಕಾರ 2014–15ರ ಉತ್ತಮ ಅನುವಾದಕ ಪ್ರಶಸ್ತಿ ನೀಡಿ ಗೌರವಿಸಿದೆ.
6. 2017ರಲ್ಲಿ ಪ್ರಕಟಿಸಿರುವ ಕನ್ನಡದ ಮೊದಲ ಕಾದಂಬರಿ 'ಇಂದಿರ ಬಾಯಿ'ಯನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದ್ದಾರೆ.
7. ಒಡಿಯಾ ಮೂಲದ ಲಕ್ಷ್ಮಿ ಪುರಾಣ.
8. ಅಂಬೇಡ್ಕರ್ ಆರು ಕಥನಗಳು,
9. ವಿ.ಆರ್. ನಾರ್ಲಾ ಅವರ ಗೀತೆ ಒಳಗಿನ ಸತ್ಯ ಏನು?

ಇನ್ನು ಅನೇಕ ಕೃತಿಗಳು ರಚಿಸಿ, ಸರ್ಕಾರದ ಪಠ್ಯ ಪುಸ್ತಕ ಆಯ್ಕೆಯ ಸದಸ್ಯರಾಗಿ, ವಿವಿಧ ಭಾಗಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಇವರ ಬರಹವೂ ಪಠ್ಯಪುಸ್ತಕಗಳಲ್ಲಿ ಪಾಠವಾಗಿ ಆಯ್ಕೆಯಾಗಿವೆ.

ಕರ್ನಾಟಕ ಸರ್ಕಾರದ 2017ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕಾರ, 2018 ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಗಡಿನಾಡ ಪ್ರಶಸ್ತಿ ಪಡೆದಿದ್ದಾರೆ.

ಮಲಯಾಳಂ ಕಾದಂಬರಿ "ಮೂಕ ತೋಳ' ವಸಾಹತುಶಾಹಿ ಕ್ರೌರ್ಯ ಮತ್ತು ಆದಿವಾಸಿ ಮಾನವೀಯತೆಗಳ ಮುಖಾಮುಖಿ

ವಾಸುದೇವ ಉಚ್ಚಿಲ


ಶ್ರೀ ಜಯಮೋಹನ್ ಅವರು ಮಲಯಾಳಂ ಮತ್ತು ತಮಿಳು ಭಾಷೆಗಳ ಪ್ರಸಿದ್ಧ ಲೇಖಕರು. ಅವರ "ಮೂಕತೋಳ" ವನ್ನು ಕನ್ನಡಕ್ಕೆ ಅನುವಾದಿಸಿದ ಕೆ.ಪ್ರಭಾಕರನ್ ಅವರು ಈ ಮೊದಲು ಅವರ "ನೂರು ಸಿಂಹಾಸನಗಳು" ಕೃತಿಯನ್ನು ಅನುವಾದಿಸಿದ್ದಾರೆ. ಜಯಮೋಹನ್ ಅವರ ಬರವಣಿಗೆ ಕುತೂಹಲ ಮತ್ತು ಆಕರ್ಷಣೆ ಹುಟ್ಟಿಸುವಂತೆ ಇದೆ ಎಂಬುದನ್ನು ಈ ಎರಡೂ ಕೃತಿಗಳ ಓದಿನಿಂದ ನಾವು ತಿಳಿಯಬಹುದು.

"ಮೂಕತೋಳ" ಸುಮಾರು 60 ಪುಟಗಳ ಪುಟ್ಟ ಕಾದಂಬರಿ. ನಾಲ್ಕು ಮನುಷ್ಯ ಪಾತ್ರಗಳು ಇಲ್ಲಿ ಇವೆಯಾದರೂ, ಪ್ರಧಾನವಾಗಿ ಇರುವುದು ಎರಡು ಮಾತ್ರ. ಮಧ್ಯ ವಯಸ್ಕನಾದ ಆದಿವಾಸಿ ನಿರೂಪಕ ಹಾಗೂ ಅವನ ಯಜಮಾನ ಬ್ರಿಟಿಷ್ ಸಾಹೇಬ. ಅವರಿಬ್ಬರ ನಡುವೆ ಸಾಗುವ ಘಟನೆಗಳು ನಾಲ್ಕೈದು ದಿನಗಳ ಅವಧಿಯದ್ದಿದ್ದು, 5 ಅಧ್ಯಾಯಗಳಲ್ಲಿ ನಿರೂಪಿತವಾಗಿವೆ. ಇದನ್ನೊಂದು ನೀಳ್ಗತೆಯೆಂದೂ ತಿಳಿಯಬಹುದು.

ಬ್ರಿಟಿಷ್ ವಸಾಹತು ಆಳ್ವಿಕೆಯ ಅವಧಿಯಲ್ಲಿ ಕೇರಳದ ಮಲೆಬೆಟ್ಟ ಪ್ರದೇಶಗಳಲ್ಲಿ ವಿವಿಧ ವಾಣಿಜ್ಯ ಬೆಳೆ ಬೆಳೆಯಲು ಎಸ್ಟೇಟುಗಳನ್ನು ಬಿಳಿಯರು ಸ್ಥಾಪಿಸಿದ್ದರು. ಅಲ್ಲಿ ದುಡಿಮೆ ಮಾಡಲು ಮಲೆನಾಡಿನ ಆದಿವಾಸಿ ಬುಡಕಟ್ಟು ಜನರನ್ನು ಕೂಲಿಯಾಳುಗಳಾಗಿ, ಜೀತದಾಳುಗಳಾಗಿ ಹಿಂಸಾತ್ಮಕವಾಗಿ ದುಡಿಸಿಕೊಂಡ ವಿದ್ಯಮಾನಗಳು ನಡೆದಿವೆ. ಕಾಡುಮೇಡುಗಳಲ್ಲಿ ಅವರು ವ್ಯಾಪಕವಾಗಿ ಮೃಗಬೇಟೆಯನ್ನೂ ನಡೆಸಿ, ಚರ್ಮ, ದಂತ, ಉಗುರುಗಳನ್ನು ತಮ್ಮ ದೇಶದಲ್ಲಿ ವ್ಯಾಪಾರ ಮಾಡಿ ತಮ್ಮ ಶ್ರೀಮಂತಿಕೆ ಹೆಚ್ಚಿಸಿಕೊಂಡದ್ದೂ ಉಂಟು. ಈ ಬೇಟೆಗಾರರು ಪ್ರಾಣಿಪಕ್ಷಿಗಳಿಗಷ್ಟೇ ತಮ್ಮ ಕ್ರೌರ್ಯ ಪ್ರದರ್ಶನ ಮಾಡಿದ್ದಲ್ಲ. ಆದಿವಾಸಿ ಗಂಡು, ಹೆಣ್ಣುಗಳ ಮೇಲೆ ಕೂಡಾ ಮಾಡಿದ್ದಾರೆ. ಹೆಂಗಸರನ್ನು ಬೇಕೆಂದಾಗ ಭೋಗದ ವಸ್ತುವಾಗಿ ಬಳಸಿದ್ದಾರೆ;. ಇದರಿಂದ ಸಾಹೇಬರು ಮತ್ತು ಆದಿವಾಸಿಗಳ ಮಧ್ಯೆ ನಿರಂತರ ಸಂಘರ್ಷದ ಮನಸ್ಥಿತಿ ಬೆಳೆದಿದೆ. ಕಾಡಿನ ಸ್ವಾಭಾವಿಕ ಜೀವಿಗಳಂತಿರುವ ಆದಿವಾಸಿಗಳು ಮಾನವೀಯ ಹೃದಯವಂತಿಕೆ ಉಳ್ಳವರು. ಅವರು ತಮ್ಮನ್ನು ಕ್ರೂರವಾಗಿ ನಡೆಸಿಕೊಳ್ಳುವ ಸಾಹೇಬರ ದರ್ಪದ ಮುಂದೆ, ಅವರು ನೀಡುವ ಕಿಂಚಿತ್ ಕೂಲಿ ದುಡ್ಡಿನ ಕಾರಣ ಅಸಹಾಯಕರಾಗಿದ್ದಾರೆ. ಅವರಿಗೆ ಕೆಲವೊಮ್ಮೆ ರೋಷ ಉಂಟಾಗುತ್ತಿದ್ದರೂ, ಅವರು ಕೈ ಎತ್ತಲಾರರು, ದನಿ ಎತ್ತಲಾರರು. ಅವರು ಮೂಕ ಜೀವಿಗಳು. ಬ್ರಿಟಿಷ್ ವಸಾಹತುಶಾಹಿಯಲ್ಲೂ ಅನಂತರದ ಕಾಡುಗಳ್ಳ ಜಮಿನ್ದಾರರ ಮಧ್ಯೆ ಇಂದೂ ಕೂಡಾ ಅಂಥದ್ದೇ ಪರಿಸ್ಥಿತಿ ಇದೆ.

"ಮೂಕತೋಳ" ಕಾದಂಬರಿಯ ನಾಯಕ ಕೇರಳದ ಮಲೆ ಬೆಟ್ಟದ ಒಬ್ಬ ಆದಿವಾಸಿ. ಆತ್ಮಕಥನದಂತೆ ಸಾಗುವ ಅವನ ನಿರೂಪಣೆಯಲ್ಲಿ ಅವನಿಗೆ ಇಡಲಾಗಿದ್ದ ಹೆಸರು ಏನೆಂದೇ ನಮಗೆ ತಿಳಿಯುವುದಿಲ್ಲ. ಅವನ ಬಿಳಿಯ ಸಾಹೇಬನಾದರೋ, ಅವನನ್ನು ಸಂಬೋಧಿಸುವಾಗ 'ಏ ನಾಯಿ' ಎಂದೇ ಸಂಬೋಧಿಸುತ್ತಾನೆ. ಸಾಹೇಬನ ಅಡುಗೆಯಾಳು ತೋಮನೂ ಅವನ ಹೆಸರು ಹೇಳಿ ಕರೆಯುವುದಿಲ್ಲ. ಸಾಹೇಬನ ವಿಲಾಸಕ್ಕೆಂದು ನಿರೂಪಕ ಕರೆತಂದಿದ್ದ ಆದಿವಾಸಿ ಹೆಣ್ಣಿಗೂ 'ಚೋತಿ' ಎಂದು ಹೆಸರಿದೆ. ಆದರೆ ಪ್ರಧಾನ ಪಾತ್ರವಾದ ನಿರೂಪಕನಿಗೆ ಹೆಸರೇ ಇಲ್ಲ.

ನಿರೂಪಕನು ಸಾಹೇಬನ ಬೇಟೆ ಸಹಾಯಕ. ಸಾಹೇಬನಂತೆಯೇ ನಿರೂಪಕನ ಕಣ್ಣುಗಳೂ ಯುರೋಪಿಯನ್ನರಂತಿರುವ ಹೊಳಪುಗಣ್ಣುಗಳು. ಬಿಳಿಯ ಸಾಹೇಬನೊಬ್ಬನಿಗೆ ಆದಿವಾಸಿ ಹೆಣ್ಣೊಬ್ಬಳಿಗೆ ಹುಟ್ಟಿದವನು ನಿರೂಪಕ. ನಿರೂಪಕನಿಗೆ ಸಾಹೇಬನು ಇದನ್ನು ವ್ಯಂಗ್ಯ ಚುಚ್ಚು ಮಾತುಗಳಿಂದ ಹೇಳಿಯೂ ಇರುತ್ತಾನೆ. ಕಾಡಿನ ದೊಡ್ಡ ಸಲಗವೊಂದರ ಬೇಟೆಯಾಡಿ ಕೊಂದು ಅದರ ದಂತವನ್ನು ಮಾರಿ ಹೇರಳ ದುಡ್ಡುಗಳಿಸಬೇಕೆಂಬುದು ಸಾಹೇಬನ ಮಹತ್ವಾಕಾಂಕ್ಷೆ. ಬೇಟೆಗಾರ ಬಿಳಿಯನೊಬ್ಬನಿಗೆ ಸಹಾಯಕನಾಗಿ ಸ್ಥಳೀಯನೊಬ್ಬ ಬೇಕು. ಅವನೇ ನಿರೂಪಕ. ನಿರೂಪಕನಿಗೆ ತೊಟ್ಟಿರುವ ಒಂದು ಖಾಕಿ ನಿಕ್ಕರಲ್ಲದೆ ಬೇರೆ ವಸ್ತ್ರವೇ ಇಲ್ಲ. ಸಾಹೇಬ ಬೇಟೆಗೆ ಹೊರಡುವಾಗ ಆತನ ಪ್ಯಾಂಟು ಚಲ್ಲಣವಲ್ಲದೆ, ಹಲವಾರು ಜೇಬುಗಳಿರುವ ಅಂಗಿಯನ್ನು



ಧರಿಸಿರುತ್ತಾನೆ. ಕಾಲಿಗೆ ಮದ್ರಾಸಿನಲ್ಲಿ ಖರೀದಿಸಿದ ಗಮ್‌ಬೂಟುಗಳಿವೆ. ಮನುಷ್ಯನಷ್ಟು ಉದ್ದವಿರುವ, ಆನೆಗೆ ಈಡು ಮಾಡಬಲ್ಲ ಗುಂಡುಗಳನ್ನು ಹೊಡೆಯಬಲ್ಲ ಜೋಡು ನಳಿಕೆಯ ಬಂದೂಕು ಅವನಲ್ಲಿದೆ; ಆಳು ತಪ್ಪಿಯೂ ಅದನ್ನು ಮುಟ್ಟಕೂಡದು. ಇನ್ನೊಮ್ಮೆ ಮುಟ್ಟಿದ್ದಾದರೆ ನಿನ್ನನ್ನು ಕೊಂದೇ ಬಿಡುತ್ತೇನೆ ಎಂದು ಸಾಹೇಬ ಹೇಳುತ್ತಾನೆ. ಸಾಹೇಬ ಹೇಳಿದ್ದನ್ನು ಜಾರಿ ಮಾಡುವುದಲ್ಲದೆ, ಆಳಿಗೆ ಬೇರೆ ದಾರಿ ಇಲ್ಲ. ಇಡೀ ಕಾದಂಬರಿ ಸಾಹೇಬ ಮತ್ತು ಆದಿವಾಸಿ ಆಳಿನ ಮುಖಾಮುಖಿಯ ಚಿತ್ರಣವಾಗಿದೆ.

ಆನೆ ಬೇಟೆಗೆ ಹೋಗುವ ಹಿಂದಿನ ದಿನ ಆಳು (ನಿರೂಪಕ) ಸಾಹೇಬನ ಬಂಗಲೆಯಲ್ಲಿರುತ್ತಾನೆ. ಈಗ ಕ್ರೈಸ್ತನಾಗಿರುವ ತೋಮ ಮಾಡಿದ್ದ ಅಡುಗೆಯನ್ನು ಸಾಹೇಬನಿಗೆ ಎತ್ತಿ ಒಯ್ಯುವುದೂ ಆಳಿನ ಕೆಲಸ. ರೊಟ್ಟಿ, ಬೇಯಿಸಿ ಪದಾರ್ಥ ಮಾಡಿದ ಮಾಂಸ, ಹೆಂಡ – ಇವನ್ನು ಸಾಹೇಬ ಬೇಕೆಂದಾಗ ಆಳು ಅವನಿಗೆ ನೀಡಬೇಕಾಗುತ್ತದೆ. ಸಾಹೇಬ ಎಸೆದು ನೀಡಿದ ರೊಟ್ಟಿ, ಮಾಂಸ ಆಳಿನ ಪಾಲಿಗೆ. ತೋಮನೂ ಕೂಡಾ ತಾನು ಸಾಹೇಬನ ಅಡುಗೆಯವನೆಂಬ ಠೇಂಕಾರದಿಂದ ನಿರೂಪಕನೊಂದಿಗೆ ವರ್ತಿಸುತ್ತಾನೆ. ಭರ್ಜರಿ ಊಟವಾದ ಮೇಲೆ ಹೆಣ್ಣೊಂದು ಬೇಕೆಂದು ಸಾಹೇಬ ಅಡುಗೆಯವನಿಗೆ ಆಜ್ಞಾಪಿಸುತ್ತಾನೆ. ಅಡುಗೆಯವನು ಆಳಿಗೆ ಹೇಳಿ, ಆದಿವಾಸಿ ಹಳ್ಳಿಯಿಂದ ಯಾರನ್ನಾದರೂ ಕರೆದುಕೊಂಡು ಬಾ ಎಂದು ಆದೇಶಿಸುತ್ತಾನೆ. ಆಳು ಅಸಹಾಯಕ. ಹಳ್ಳಿಗೆ ಹೋಗುತ್ತಾನೆ. ಎಲ್ಲರೂ ಅವನ ಬಳಗದವರೇ. ಹಿಂದೊಮ್ಮೆ ಇದೇ ಸಾಹೇಬನಲ್ಲಿಗೆ ಬಂದಿದ್ದ ಚೋತಿ ಎಂಬ ಹೆಣ್ಣು ಮಗಳು ಆಳನ್ನು ಹಿಂಬಾಲಿಸಿ ಬರುತ್ತಾಳೆ. ಅವಳಿಗೆ ಗೊತ್ತಿತ್ತು – ಸಾಹೇಬ ಒಬ್ಬ ವಿಕೃತ ಕಾಮಿ ಹಾಗೂ ಕ್ರೂರಿ ಎಂದು. ಆತನ ಕಾಮದಾಟ ಇಲ್ಲಿರುವ ಎಲ್ಲರ ಸಮ್ಮುಖವೇ ನಡೆಯುತ್ತದೆ. ಅದು ತೃಪ್ತಿ ಕೊಡಲಿಲ್ಲವೆಂದು ಆ ಹೆಣ್ಣುಮಗಳಿಗೆ ಸಾಹೇಬ ಚಾಟಿಯಿಂದ ಹೊಡೆಯುತ್ತಾನೆ. ಅಲ್ಲಿಂದ ಓಡಿ ಹೊರ ಬಂದ ಆಕೆಯನ್ನು ಅಡುಗೆಯವ ಭೋಗಿಸುತ್ತಾನೆ. ಆಳು ನಿರೂಪಕ ಅವಳ ಗಾಯಗಳಿಗೆ ನಾಟಿ ಮದ್ದು ಹಚ್ಚಿ ಬಳಿಕ ಅವಳನ್ನು ಹಳ್ಳಿಗೆ ಬಿಟ್ಟು ಬರುತ್ತಾನೆ.

ಹೀಗೆ ಕಾದಂಬರಿಯ ಎರಡು ಅಧ್ಯಾಯಗಳಲ್ಲೇ ಸಾಹೇಬನ ಕ್ರೌರ್ಯದ ಅನಾವರಣವಾಗುತ್ತದೆ. ಈ ಕ್ರೂರ ಹಿಂಸೆಯನ್ನು ಅನುಭವಿಸುವ ಬುಡಕಟ್ಟಿನ ಒಳಗುದಿಯನ್ನು ಮುಂದಿನ 3 ದಿನಗಳ ಆನೆ ಬೇಟೆಯ ಮಧ್ಯೆ ನಾಯಕ ಮತ್ತು ಸಾಹೇಬರ ಮಾತುಕತೆಯ ಮೂಲಕವೇ ಕಾಣಿಸಲಾಗುತ್ತಿದೆ. ನಿರೂಪಕನಿಗೆ ಅಲ್ಪಸ್ವಲ್ಪ ಇಂಗ್ಲಿಷ್ ಭಾಷೆ ಮಾತಾಡಲಿಕ್ಕೂ ಗೊತ್ತು ಎಂದು ಸಾಹೇಬ ತಿಳಿದುಕೊಳ್ಳುತ್ತಾನೆ. ನಿರೂಪಕನ ಮಾತುಗಳು ತೀರಾ ಕಡಿಮೆ ಇದ್ದರೂ, ಅವನ ಒಳಗುದಿ ಪ್ರಕಟವಾಗುತ್ತದೆ. ಅಲ್ಲದೆ ಕಾದಂಬರಿಯ ನಿರೂಪಣೆ ಆತ್ಮಕಥನದ ದಾಟಿಯಲ್ಲಿರುವುದರಿಂದ, ಸಂಭಾಷಣೆಯ ಹೊರತಾದ ನಿರೂಪಣೆಯು ಕೂಡಾ ಅವನ ಮಾತುಗಳೇ ಆಗುತ್ತವೆ. ಈ ನಿರೂಪಣೆ ಎಷ್ಟೊಂದು ರಸಭರಿತವಾಗಿದೆ ಎಂದರೆ ಬೇಟೆ ಸಾಹಿತ್ಯ (ಮೃಗಯಾ ಸಾಹಿತ್ಯ)ದ ಕುತೂಹಲ ಮತ್ತು ರೋಚಕತೆ ಅಲ್ಲಿ ಮೂಡಿ ಬಂದಿದೆ. ಸಾಹೇಬ ಮೂರು ಗುಂಡು ಹಾರಿಸಿ ಆನೆಯನ್ನೇನೋ ಬೀಳಿಸಿ ಬಿಡುತ್ತಾನೆ. ಆದರೆ ಮೊದಲ ಗುಂಡು ತಾಗಿದ ಬಳಿಕ ಘೀಳಿಡುತ್ತಾ ಈಡುಗಾರರನ್ನು ಅಟ್ಟಿಸಿ ಬರುವ ಸಲಗದ ಚಿತ್ರಣ ರುದ್ರತೆಯಿಂದ ಕೂಡಿದೆ. ತನ್ನ ಆತುರದಲ್ಲಿ ಸಲಗವನ್ನು ರೊಚ್ಚಿಗೆಬ್ಬಿಸಿದ ಸಾಹೇಬನು ಕನ್ನಡಿ ಹಾವು ಕಚ್ಚಿ ಉಸಿರು ಮೇಲೆಳೆಯುತ್ತಿದ್ದಾಗ, ನಿರೂಪಕ ಕಾಡಿನ ನೀಲಿ ಎಲೆಗಳ ರಸ ಹಿಂಡಿ ಅವನ ಗಾಯಕ್ಕೆ ಮೂಗಿಗೆ ಕಣ್ಣಿಗೆ ಬಾಯಿಗೆ ಸುರಿಯುತ್ತಿರುತ್ತಾನೆ; ಇದರಿಂದ ಸಾಹೇಬನ ಹೋದ ಜೀವ ಬರುವಂತಾಗುತ್ತದೆ. ಈಗ ಸಾಹೇಬನಿಗೆ ಆಳಿನ (ಆದಿವಾಸಿಯ) ಮಾನವೀಯತೆಯ ಅರಿವಾಗುತ್ತದೆ. ನಿನಗೆ ಏನು ಬೇಕು ಅದನ್ನು ಕೊಡುತ್ತೇನೆ, ಬೇಡು– ಎಂದು ಆಳಿಗೆ ಹೇಳುತ್ತಾನೆ. ಆಳು ಉತ್ತರಿಸುವುದೇ ಇಲ್ಲ. ಸಾಹೇಬನು ಆಳನ್ನು ಗದರಿ ಕೇಳಿದಾಗ ಆಳು ಕೊಡುವ ಉತ್ತರ – "ನಾನು ಒಂದು ಮೂಕತೋಳ"ಎಂದು. ಇಡೀ ಜಾನಾಂಗಿಕ ಮುಖಾಮುಖಿಯನ್ನು ಪ್ರತಿಮಾತ್ಮಕವಾಗಿ ಕಾದಂಬರಿಕಾರ ನಿರೂಪಿಸುವುದು ಈ ಕಾದಂಬರಿಯ ಹೆಚ್ಚುಗಾರಿಕೆಯಾಗಿದೆ.

ಕಥೆಯ ಕೊನೆಯಲ್ಲಿ ಬೆಟ್ಟಂದ ಬಂಡೆಯೊಂದು ಉರುಳುವ ಚಿತ್ರವಿದೆ. ಈ ವೇಳೆಗೆ ನಿರೂಪಕ ಸಾಹೇಬನನ್ನು ಆನೆ ರಕ್ತದ ವಾಸನೆ ಹಿಡಿದು ಬರಲಿರುವ ತೋಳಗಳ ಹಿಂಡಿನಿಂದ ರಕ್ಷಣೆ ಪಡೆಯುವುದಕ್ಕಾಗಿ ಮರವೊಂದಕ್ಕೆ ಹತ್ತಿಸಿರುತ್ತಾನೆ. ನಿರೂಪಕ ನಿಂತಿರುವ ಜಾಗ ಕುಸಿಯುತ್ತದೆ. ಸಮೀಪದ ಬಂಡೆ ಉರುಳುತ್ತದೆ. ಕುಸಿಯುತ್ತಿರುವ ನಿರೂಪಕನಿಗೆ ಸಾಹೇಬ ತನ್ನ ಬೆಲ್ಟನ್ನು ಕಳಚಿ ಚಾಚಿದಾಗಲೂ, ಅದು ನಿರೂಪಕನಿಗೆ ಕೈಗೆಟಕದೇ ಹೋಗುತ್ತದೆ. ಅವನು ಪಾತಾಳಕ್ಕೆ ಕುಸಿಯುವುದರೊಂದಿಗೆ ಕಥೆ ಅಂತ್ಯವಾಗುತ್ತದೆ.

ಈ ಕಿರು ಕಾದಂಬರಿ ಎರಡು ಮಹಾನ್ ಕಾದಂಬರಿಗಳನ್ನು ನೆನಪಿಗೆ ತರುತ್ತದೆ. ಒಂದು ವಸಾಹತು ದರ್ಪದಲ್ಲಿ ವಿಚ್ಛಿದ್ರವಾಗುವ ದಲಿತ ಕುಟುಂಬದ ತಲ್ಲಣಗಳನ್ನು ನಿರೂಪಿಸುವ ಕಾರಂತರ 'ಚೋಮನ ದುಡಿ'. ಇನ್ನೊಂದು ಪ್ರಕೃತಿಯೊಡನೆ ಸವಾಲೊಡ್ಡುವ ಮನುಷ್ಯನ ಸಾಹಸವನ್ನೊಳಗೊಂಡ ಅರ್ನೆಸ್ಟ್ ಹೆಮಿಂಗ್‌ವೇಯ 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ". ದಟ್ಟ ಕಾಡಿನ ಪರಿಪ್ರೇಕ್ಷ್ಯದಲ್ಲಿ ಚಲನಶೀಲ ಜಗತ್ತಿನ ಎರಡು ಮನುಷ್ಯ ಲೋಕಗಳ ಮುಖಾಮುಖಿಯಾಗಿ ಈ ಕಾದಂಬರಿಯನ್ನು ಗುರುತಿಸಬೇಕಾಗಿದೆ ಎನಿಸುತ್ತದೆ.

ಈ ಕಾದಂಬರಿಯ ಅನುವಾದದ ಬಗ್ಗೆ ಹೇಳಲೇ ಬೇಕಾದ ಮಾತಿದೆ. ಇದು ಕನ್ನಡದ್ದೇ ಕಾದಂಬರಿ ಎಂಬಂತೆ ಓದಿಸಿಕೊಳ್ಳುತ್ತದೆ ಎನ್ನುವುದನ್ನು ಈಗಾಗಲೇ ಗುರುತಿಸಲಾಗಿದೆ. ಶಿವಮೊಗ್ಗದಲ್ಲಿ ಸಮುದಾಯ ಸಂಘಟನೆಯಲ್ಲಿ ಸಕ್ರಿಯವಾಗಿರುವ ಕೆ.ಪ್ರಭಾಕರನ್ ಅವರನ್ನು ಈ ಶ್ಲಾಘ್ಯ ಅನುವಾದಕ್ಕಾಗಿ ಅಭಿನಂದಿಸಬೇಕಾಗಿದೆ.

ಗೋದಾರ್ದ: ವಿಗ್ರಹಭಂಜಕ, ಬಂಡುಕೋರ ನಿರ್ದೇಶಕ

ಪುಟ 16 ರಿಂದ

ಟೈಮ್ ಪತ್ರಿಕೆ 'ಗೋದಾರ್ದ ಸಿನಿಮಾಗಳನ್ನು ನೋಡುವುದು ಕಷ್ಟ, ನೋಡುವುದನ್ನು ನಿಲ್ಲಿಸುವುದೂ ಕಷ್ಟ' ಎಂದು ವಿಮರ್ಶಿಸಿತ್ತು. 1970ರ ದಶಕದ ನಂತರ ಗೋದಾರ್ದ ಸಿನಿಮಾಗಳು ರಾಜಕೀಯಕರಣಗೊಂಡವು, ಹಿಂದಿನ auteur ಶೈಲಿಯನ್ನು ಅಣಕಿಸುವ ಪ್ರತಿಸಂಸ್ಕೃತಿಯಂತೆ ಬಿಂಬಿತವಾಗಿದ್ದವು ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. 1967ರಲ್ಲಿ ಬಿಡುಗಡೆಯಾದ 'ವೀಕೆಂಡ್' ಸಿನಿಮಾ ಮೂಲಕ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ವಿರೋಧಿ ಕಥನದ ಹಾದಿಯನ್ನು ತುಳಿದರು. ಚಾರ್ಲ್ಸ್ ಡಿಗಾಲೆ, ವಿಯೆಟ್ನಾಂ ಯುದ್ಧ, ಬಂಡವಾಳಶಾಹಿ, ಹಾಲಿವುಡ್ ವಿರುದ್ಧ ತನ್ನ ಬಂಡಾಯ ಘೋಷಿಸಿದ್ದ ಗೋದಾರ್ದ ಎಪ್ಪತ್ತರ ದಶಕದ ನಂತರ ಪಕ್ಕಾ ರಾಜಕೀಯ ವ್ಯಾಖ್ಯಾನಕಾರರಾಗಿ ಬದಲಾದರು ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ವಿಶೇಷವೆಂದರೆ ಮುಖ್ಯವಾಹಿನಿಯನ್ನೇ ತಿರಸ್ಕರಿಸಿದ ಗೋದಾರ್ದನಿಂದ ಪ್ರಭಾವಿತರಾದ ಮಾರ್ಟಿನ್ ಸ್ಕಾರ್ಸೇಸ್, ಟೊರಿಂಟೋನೋ ನಿರ್ದೇಶಕರು ಆತನ ಶೈಲಿಯನ್ನು ಅನುಸರಿಸಿ ಟ್ಯಾಕ್ಸಿ ಡ್ರೈವರ್, ಪಲ್ಪ್ ಫಿಕ್ಷನ್‌ನಂತಹ ಪಕ್ಕಾ ಜನಪ್ರಿಯ ಮಾದರಿ ಸಿನಿಮಾಗಳನ್ನು ನಿರ್ದೇಶಿಸಿದರು.

ತನ್ನ ಸಿನಿಮಾ ಪ್ರಯೋಗಗಳನ್ನು ಹಾಲಿವುಡ್‌ಗೆ ಪ್ರತಿರೋಧ ಚಳುವಳಿ ಎಂದು ಹೇಳುತ್ತಿದ್ದ ಗೊಡಾರ್ಡಗೆ 2010ರಲ್ಲಿ ಗೌರವ ಆಸ್ಕರ್ ಪ್ರಶಸ್ತಿ ಘೋಷಿಸಿದರು. ಆದರೆ ಸ್ವೀಕರಿಸಲು ಸಮಾರಂಭಕ್ಕೆ ತೆರಳಲು ನಿರಾಕರಿಸಿದ ಗೋದಾರ್ದ ಅಕಾಡೆಮಿಗೆ ಇಷ್ಟವಾಗಿದ್ದರೆ ಕೊಟ್ಟುಕೊಳ್ಳಲಿ, ಅವರು ನನ್ನ ಸಿನಿಮಾಗಳನ್ನು ನೋಡಿದ್ದಾರೆಯೇ' ಎಂದು ಖಾರವಾಗಿ ಪ್ರಶ್ನಿಸಿದರು. ಬಂಡವಾಳಶಾಹಿ ವ್ಯವಸ್ಥೆಯನ್ನು ಟೀಕಿಸುತ್ತಿದ್ದ ಗೋದಾರ್ದ ಮಾರ್ಕ್ಸಿಸ್ಟ್ ಚಿಂತನೆಗಳನ್ನು ಅಪ್ಪಿಕೊಂಡರು. ವಿಯೆಟ್ನಾಂ ಯುದ್ಧವನ್ನು ವಿರೋಧಿಸಿದರು, ಪ್ಯಾಲೆಸ್ಟಿಯನ್‌ರ ಸಾರ್ವಭೌಮತೆ, ಸ್ವಾಯತ್ತತೆ ಹೋರಾಟವನ್ನು ಬೆಂಬಲಿಸಿದರು. ಈ ಸಂದರ್ಭದಲ್ಲಿ 'ಇಸ್ರೇಲ್' ವಿರುದ್ಧ ಮಾಡಿದ ಟೀಕೆಗಳನ್ನು ಆಧರಿಸಿ ಗೋದಾರ್ದ ಸೆಮೆಟಿಕ್ ವಿರೋಧಿ ಎಂದು ಅಮೇರಿಕನ್ನರು ಜರೆದರು. ಆದರೆ 2011ರಲ್ಲಿ ಗೋದಾರ್ದ ಇದನ್ನು ಅಲ್ಲಗೆಳೆದರು. ನಾನು ಮೂಲಭೂತವಾಗಿ ವಿಮರ್ಶಕ, ಆದರೆ ಸಿನಿಮಾ ನಿರ್ದೇಶನ ಮಾಡಿದೆ ಎಂದು ತನ್ನನ್ನು ವಿಮರ್ಶಿಸಿಕೊಳ್ಳುತ್ತಿದ್ದ ಗೋದಾರ್ದ ತನ್ನ ಆದರ್ಶವಾಗಿಬ್ರೆಕ್ಟ್‌ನ 'ಎಪಿಕ್ ರಂಗಭೂಮಿ' ಆಯಾಮಗಳನ್ನು ತನ್ನ ಸಿನಿಮಾಗಳಲ್ಲಿ ಆವಾಹಿಸಲು ಪ್ರಯತ್ನಿಸುತ್ತಿದ್ದರು. ಸಿನಿಮಾದಲ್ಲಿ ರಸಿಕತೆಯನ್ನು ಲೇವಡಿ ಮಾಡಲು ಬ್ರೆಕ್ಟಿಯನ್ ತಂತ್ರ ಬಳಸಿಕೊಳ್ಳುತ್ತಿದ್ದರು. ಗೋದಾರ್ದರ ಸಿನಿಮಾಗಳಿಗೆ ಕತೆಯ ಹಂಗಿರುತ್ತಿರಲಿಲ್ಲ. 'ಎಲ್ಲಿಂದ ಆರಿಸಿಕೊಂಡೆ ಎಂಬುದಲ್ಲ, ಎಲ್ಲಿಗೆ ಕೊಂಡೊಯ್ಯುತ್ತೀಯ ಎಂಬುದು ಮುಖ್ಯ'ವೆಂದು ನಂಬಿದ್ದರು.

ಅವರ ಬಹುಕಾಲದ ಕಾನೂನು ಸಲಹೆಗಾರ ಪಾಟ್ರಿಕ್ ಜೆನ್ನೆರ್ಟ 'ಇನ್ನು ಸಾಕು ಎಂದು ನಿರ್ಧರಿಸಿದ ಗೋದಾರ್ದ ನೆರವಿನ ಆತ್ಮಹತ್ಯೆಯ ಮೂಲಕ ನಿಧನರಾದರು' ಎಂದು ತಿಳಿಸಿದರು. ನಮ್ಮ ಸಿನಿಮಾ ನೋಡುವ ದೃಷ್ಟಿಕೋನವನ್ನೇ ಬದಲಿಸಿದ ಈ ವಿಗ್ರಹಭಂಜಕನಿಗೆ ನಾವು ಋಣಿಗಳಾಗಿದ್ದೇವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE September 26-October 2, 2022 Price: Rs. 10/- Date of Publication: 23 September 2022 RNI No. KARKAN /2006/17926 Posted on 26-09-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ಗೋದಾರ್ದ: ವಿಗ್ರಹಭಂಜಕ, ಬಂಡುಕೋರ ನಿರ್ದೇಶಕ



ಟೈಮ್ ಪತ್ರಿಕೆ 'ಗೋದಾರ್ದ ಸಿನಿಮಾಗಳನ್ನು ನೋಡುವುದು ಕಷ್ಟ, ನೋಡುವುದನ್ನು ನಿಲ್ಲಿಸುವುದೂ ಕಷ್ಟ' ಎಂದು ವಿಮರ್ಶಿಸಿತ್ತು. 1970ರ ದಶಕದ ನಂತರ ಗೋದಾರ್ದ ಸಿನಿಮಾಗಳು ರಾಜಕೀಯಕರಣ ಗೊಂಡವು, ಹಿಂದಿನ auteur ಶೈಲಿಯನ್ನು ಅಣಕಿಸುವ ಪ್ರತಿಸಂಸ್ಕೃತಿಯಂತೆ ಚಿಂಚಿತವಾಗಿದ್ದವು ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. 1967ರಲ್ಲಿ ಬಿಡುಗಡೆಯಾದ 'ವೀಕೆಂಡ್' ಸಿನಿಮಾ ಮೂಲಕ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ವಿರೋಧಿ ಕಥನದ ಹಾದಿಯನ್ನು ತುಳಿದರು. ಚಾರ್ಲ್ಸ ಡಿಗಾಲೆ, ವಿಯೆಟ್ನಾಂ ಯುದ್ಧ, ಬಂಡವಾಳಶಾಹಿ, ಹಾಲಿವುಡ್ ವಿರುದ್ಧ ತನ್ನ ಬಂಡಾಯ ಘೋಷಿಸಿದ್ದ ಗೋದಾರ್ದ ಎಪ್ಪತ್ತರ ದಶಕದ ನಂತರ ಪಕ್ಕಾ ರಾಜಕೀಯ ವ್ಯಾಖ್ಯಾನಕಾರರಾಗಿ ಬದಲಾದರು ಎಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ.

ಬಿ. ಶ್ರೀಪಾದಭಟ್

ಫ್ರೆಂಚ್ ಹೊಸ ಅಲೆ ಸಿನಿಮಾ ಚಳುವಳಿಯ ಮುಂಚೂಣಿಯಲ್ಲಿದ್ದ, ನವ ವಾಸ್ತವತಾವಾದದ ಹರಿಕಾರ ನಿರ್ದೇಶಕ ಗೋದಾರ್ದ 91ನೆ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಕಳೆದ ವರ್ಷ ಕೇರಳ ಸಿನಿಮಾ ಉತ್ಸವದಲ್ಲಿ ಭಾಗವಹಿಸಿ ಆನ್‌ಲೈನ್ ಸಂದರ್ಶನದಲ್ಲಿ ಮಾತನಾಡುತ್ತಾ 'ನಾನು ನನ್ನ ಸಿನಿಮಾ ಬದುಕನ್ನು ಮುಗಿಸುತ್ತಿದ್ದೇನೆ. ಹೌದು ನನ್ನ ಸಿನಿಮಾ ನಿರ್ಮಾಣದ ಬದುಕನ್ನು.. .. ಎರಡು ಚಿತ್ರಕತೆಗಳನ್ನು ಬರೆದು ಮುಗಿಸುತ್ತಿದ್ದೇನೆ, ನಂತರ ಗುಡ್ ಬೈ, ಗುಡ್ ಬೈ...' ಎಂದು ಹೇಳಿದ್ದರು. ಕಡೆಗೂ ಮುಗಿಸಿದ್ದಾರೆ. ಅವರ ಅರವತ್ತು ವರ್ಷಗಳ ಸಿನಿಮಾ ಬದುಕು ನಾವೆಲ್ಲಾ ಕನಸುವಂತ ಪಯಣ. ಮೇಲ್ವರ್ಗದ ಕುಟುಂಬದಲ್ಲಿ ಜನಿಸಿದ ಗೋದಾರ್ದಗೆ ಅರಿವು ಮೂಡಿದಂತೆ ತನ್ನ ತಾತ ನಾಜಿಗಳೊಂದಿಗೆ ಹತ್ತಿರವಾಗಿದ್ದರು ಎಂದು ಗೊತ್ತಾಗಿ ಅಸಹ್ಯಪಟ್ಟರು ಮತ್ತು ಪ್ರತಿಭಟನೆಯಾಗಿ ಮನೆಯನ್ನೇ ತೊರೆದರು. ಎರಡನೇ ಯುದ್ಧದ ನಂತರದ ಫ್ರಾನ್ಸ್ ಆರ್ಥಿಕವಾಗಿ ದಿವಾಳಿಯಾಗಿತ್ತು. ಸಾಂಸ್ಕೃತಿಕವಾಗಿ ಬದಲಾವಣೆಗೆ ಹಾತೊರೆಯುತ್ತಿತ್ತು. ಇಂತಹ ಕುದಿಯುವಂತಹ ಐವತ್ತರ ದಶಕದ ಪ್ಯಾರಿಸ್‌ಗೆ ಬಂದ ಗೋದಾರ್ದ ಸಿನಿಮಾ ವಿಮರ್ಶಕರಾಗಿ ತಮ್ಮ ಇನ್ನಿಂಗ್ಸ್ ಆರಂಬಿಸಿದರು. ಅಲ್ಲಿ ತನ್ನ ಸಮಾನ ಮನಸ್ಕರಾದ ಎರಿಕ್ ರ್‍ಹೋಮರ್, ಅಗ್ನೇಸ್ ವಾರ್ದಾ, ಟ್ರುಫೋ, ರಿವೆಟ್ಟೆ, ಮೆಲ್ವಿಲ್ಲೆರಂತಹ ಉದಯೋನ್ಮುಖ ನಿರ್ದೇಶಕರ ಜೊತೆ ಸೇರಿ Cahiers du Cinéma ಪ್ರಕಾಶನದ ಮೂಲಕ ಹಳೆಯ ಯುರೋಪಿಯನ್ ಸಾಂಪ್ರದಾಯಿಕ ಶೈಲಿಯನ್ನು ಮುರಿದು ಹೊಸ ಅಲೆಯ ಸಿನಿಮಾ ಚಳುವಳಿಗೆ ನಾಂದಿ ಹಾಡಿದರು. ಇದನ್ನು ಫ್ರೆಂಚ್ ಮಾಧ್ಯಮ La Nouvelle Vague ಎಂದು ಕರೆಯಿತು. ಈ ಒಡನಾಡಿಗಳು 1950ರ ದಶಕದ ಆರಂಭದಲ್ಲಿ ಸಿನಿಮಾ ನೋಡುವ ಮತ್ತು ವಿಮರ್ಶೆ ಮಾಡುವ ಮೂಲಕ auteur ಮಾದರಿಯನ್ನು ಪರಿಚಯಿಸಿದರು. ಅಂದರೆ ಒಂದು ಕತೆ, ಕಾದಂಬರಿಯ ರೀತಿ ಸಿನಿಮಾ ನಿರ್ಮಾಣ, ನಿರ್ದೇಶನ ಮಾಡುವ ಈ auteur ಶೈಲಿಯನ್ನು ನೆಚ್ಚಿಕೊಂಡಿದ್ದ ಗೋದಾರ್ದ 'ವಿಮರ್ಶಕನಾಗಿ ನನ್ನ ಸಿನಿಮಾ ನಿರ್ಮಾಣವನ್ನು ವಿಮರ್ಶಕನಂತೆ ಪರಿಭಾವಿಸುತ್ತೇನೆ... ನಿರ್ದೇಶನವು ಒಂದು ನೋಟವಾದರೆ, ಸಂಯೋಜನೆಯು ಹೃದಯಬಡಿತವಿದ್ದಂತೆ' ಎಂದು ವಿವರಿಸಿದರು.

1960–70ರ ಆ ದಶಕದ ಹೊಸ ಅಲೆಯ ಸಿನಿಮಾದ ಮುಂಚೂಣಿಯಲ್ಲಿದ್ದ ಗೋದಾರ್ದ ಮತ್ತು ಆತನ ಒಡನಾಡಿಗಳು ಸಿನಿಮಾ ಜಗತ್ತಿಗೆ ಇದ್ದ ಎಲ್ಲಾ ಮಡಿವಂತಿಕೆಯ ಗಡಿಗಳನ್ನು ಕಿತ್ತು ಬಿಸಾಡಿದರು. 'ಹೊಸ ಅಲೆ ಸಿನಿಮಾವೆಂದರೆ ವಾಸ್ತವವನ್ನು ಅನುಕರಣೆ ಮಾಡುವುದಲ್ಲ, ವಾಸ್ತವವಾಗಿ ಚಿತ್ರೀಕರಿಸುವುದು' ಎಂದ ಗೋದಾರ್ದ ಇಲ್ಲಿ ಮುರಿಯದೆ ಹೊಸದನ್ನು ಕಟ್ಟಲು ಸಾದ್ಯವಿಲ್ಲ ಎಂದು ಗಾಢವಾಗಿ ನಂಬಿದ್ದರು. 1958ರಲ್ಲಿ ನಿರ್ದೇಶಕ ಟ್ರುಫೋ '400 ಬ್ಲೋಸ್' ಸಿನಿಮಾ ಮೂಲಕ ಈ ಹೊಸ ಅಲೆ ಚಳುವಳಿಗೆ ವಿಸ್ತಾರವಾದ ಅಡಿಪಾಯ ಹಾಕಿಕೊಟ್ಟರೆ ಗೋದಾರ್ದ, ವಾರ್ದ ಮುಂತಾದವರು ಅದನ್ನು ಕಟ್ಟುತ್ತಾ ಹೋದರು ಮತ್ತು ಹೊಸ ಸಂಚಲನ ಮೂಡಿಸಿದರು. ಸವಕಲಾದ ಮುಖ್ಯವಾಹಿನಿ ಸಿನಿಮಾವನ್ನುಡೆಡ್ ಎಂಡ್ ತಲುಪಿದ 'ಗುಣಮಟ್ಟದ ಪರಂಪರೆ' ಎಂದು ಟೀಕಿಸುವ ಎದೆಗಾರಿಕೆಯಿದ್ದ ಗೋದಾರ್ದ ಯುರೋಪಿಯನ್ ಸಿನಿಮಾದ ರೂಢಿಗತ ಸಿದ್ಧ ಮಾದರಿಯನ್ನು ವಿಗ್ರಹಭಂಜಕನಂತೆ ಒಡೆಯುತ್ತಾ ಹೊಸ ರಚನೆಗಳನ್ನು ಕಟ್ಟಿದರು. ಕತೆ ಹೇಳುವುದೆಂದರೆ ಕಲೆಗಾರಿಕೆಯಲ್ಲ, ನಾಜೂಕುತನವಲ್ಲ. ಬದಲಿಗೆ ಅಡ್ಡಾದಿಡ್ಡಿಯಾಗಿದ್ದರೂ ಸಹ ಅದು ದಿಟ್ಟತನದಿಂದ ಕೂಡಿರಬೇಕು, ತಾಜಾತನವಿರಬೇಕು ಮತ್ತು ಅರ್ಥಪೂರ್ಣವಾಗಿರಬೇಕು ಎಂದು ನಂಬಿದ ಗೋದಾರ್ದಮುರಿದು ಕಟ್ಟುವುದಕ್ಕೆ ಮಾದರಿ ನಿರ್ದೇಶಕನಾಗಿದ್ದರು. ಅಲ್ಲಿ ಬಂಡುಕೋರುತನವಿತ್ತು, ಒರಟುತನವಿತ್ತು, ಆಧುನಿಕತೆಯೂ ಇತ್ತು, ಕೇಂದ್ರದಿಂದ ಪಕ್ಕಕ್ಕೆ ಜರಗುವ ಹೊರಳುವಿಕೆಯೂ ನಿರಂತರವಾಗಿತ್ತು. ಮುಖ್ಯವಾಗಿ ಶ್ರೇಷ್ಠತೆಯ ವ್ಯಸನವಿರಲಿಲ್ಲ.

1960ರಲ್ಲಿ ಬಿಡುಗಡೆಯಾದ ಗೋದಾರ್ದನ 'ಬ್ರೆತ್‌ಲೆಸ್' ಸಿನಿಮಾ ನಿರ್ಮಾಣದ ಮತ್ತು ನೋಡುವ ವ್ಯಾಕರಣವನ್ನೇ ಬದಲಿಸಿಬಿಟ್ಟಿತು. 'ನಾನು ಏನನ್ನಾದರೂ ಹೇಳುತ್ತೇನೆ, ಆದರೆ ಅರ್ಥಪೂರ್ಣವಾಗಿರುತ್ತದೆ, ಅದನ್ನು ದಕ್ಕಿಸಿಕೊಳ್ಳುವುದು ನಿಮಗೆ ಬಿಟ್ಟಿದ್ದು' ಎಂಬಂತೆ ಈ ಸಿನಿಮಾ ಮೂಲಕ ತಿರುಗುಮುರುಗಾದ ಫಾರ್ಮ ಮತ್ತು ಅಸಂಪ್ರದಾಯಿಕ ದೃಶ್ಯಗಳನ್ನು ಕಟ್ಟಿದ ಗೋದಾರ್ದಒಂದಕ್ಕೊಂದು ಹೆಣಿಗೆಯಿಲ್ಲದ ನಿರೂಪಣೆಯ ಸರ್ರಿಯಲಿಸಂ ಶೈಲಿಯನ್ನು ಹುಟ್ಟು ಹಾಕಿದರು. ಆಧುನಿಕ ಬದುಕಿನ ಸಂಘರ್ಷವನ್ನು ಉಡಾಫೆಯಲ್ಲಿ ತೋರಿಸಿದಂತೆ ಕಂಡುಬಂದರೂ ಅದಕ್ಕೆ ನಿರಂತರತೆಯೇ ಇಲ್ಲ ಎಂದು ಕಥನ ಕಟ್ಟಿದರು. 'ಒಂದು ಸಿನಿಮಾಗೆ ಆರಂಭವಿರುತ್ತದೆ, ಮದ್ಯಂತರವಿರುತ್ತದೆ, ಕ್ಲೈಮಾಕ್ಸ್ ಇರುತ್ತದೆ. ಆದರೆ ಅದು ಅನುಕ್ರಮವಾಗಿರಬೇಕು ಎನ್ನುವ ನಿಯಮವಿಲ್ಲ' ಎಂದು ಹೇಳಿದ ಗೋಡಾರ್ಡ 'ಬ್ರೆತ್‌ಲೆಸ್' ಸಿನಿಮಾ ಮೂಲಕ 'ಜಂಪ್ ಕಟ್' ಎನ್ನುವ ಹೊಸ ಟ್ರೆಂಡ್ ಸೃಷ್ಟಿಸಿದರು. (ಒಂದು ಶಾಟ್‌ನ ಮಧ್ಯಭಾಗವನ್ನು ತುಂಡರಸಿ ಮೊದಲ ಮತ್ತು ಕಡೆಯ ಭಾಗವನ್ನು ಜೋಡಿಸುವುದು). ಇದಕ್ಕೂ ಮೊದಲು ಮೂವತ್ತು, ನಲವತ್ತರ ದಶಕದಲ್ಲಿ 'ಜಂಪ್ ಕಟ್' ಶೈಲಿಯನ್ನು ಅಪ್ರಬುದ್ಧ, ಅಸಂಬದ್ಧ ಎಂದು ತಿರಸ್ಕಾರಕ್ಕೆ ಗುರಿಯಾಗಿತ್ತು. ಗೋದಾರ್ದ ಅದನ್ನು ರೂಢಿಗತಗೊಳಿಸಿದ ನಂತರ ಸಿದ್ಧ ಮಾದರಿಗಳನ್ನು ಮುರಿಯುವ ಶೈಲಿಯೆಂದೇ ಖ್ಯಾತಿಯಾಯಿತು. ಅದೇ ವರ್ಷ ಇಟಲಿಯಲ್ಲಿ ಅಂಟೋನಿಯೋನಿಯ 'L'Avventura', ಫೆಡರಿಕೋ ಫೆಲಿನಿಯ 'La Dolce Vita'', ಭಾರತದಲ್ಲಿ ರುತ್ವಿಕ್ ಘಟಕ್ ನಿರ್ದೇಶನದ 'ಮೇಘಾ ಡಾಕೆ ತಾರಾ', ಸ್ವೀಡನ್‌ನಲ್ಲಿ ಇಂಗ್ಮರ್ ಬರ್ಗಮನ್ ನಿರ್ದೇಶನದ 'The Virgin Spring' ಎಂಬ ಹೊಸ ಸಂವೇದನೆ ಮತ್ತು ಹೊಸ ಅಲೆಯ ಸರ್ರಿಯಲಿಸಂ ಸ್ಪರ್ಶದ ಸಿನಿಮಾಗಳು ಬಿಡುಗಡೆಯಾದವು. ನಾವು ಬರುತ್ತಿದ್ದೇವೆ ಎನ್ನುವ ಹೇಳಿಕೆಯನ್ನು ನೀಡಿದರು. ಕ್ರಿಯಾಶೀಲ ನಿರ್ದೇಶಕರು ಏಕರೂಪದಲ್ಲಿ ಚಿಂತಿಸುವ ಈ ಬಗೆಯು ಕಾಕಾತಾಳಿಯವೇ?

1960ರ ದಶಕದಲ್ಲಿ ಸಾರ್ತ್ರೆಯ 'ಆಸ್ತಿತ್ವವಾದದ' ತತ್ವವನ್ನು ಅನುಸರಿಸಿದ ಗೋದಾರ್ದನ 1962ರಲ್ಲಿ ಬಿಡುಗಡೆಯಾದ Vivre sa vie ಸಿನಿಮಾ 12 ಎಪಿಸೋಡ್‌ಗಳ ಮೂಲಕ ನಿರೂಪಿತವಾಗಿದೆ. ಗೋದಾರ್ದನ ಮೊದಲ ಹೆಂಡತಿ ಅನ್ನಾ ಕರೀನಾ ಇಲ್ಲಿನ ಪ್ರೊಟಗಾನಿಸ್ಟ್. ಇಲ್ಲಿ ದುರಂತ ಪಾತ್ರಗಳನ್ನು ಅದ್ಭುತವೆನಿಸುವ ದೃಶ್ಯಗಳ ಮೂಲಕ ನಿರೂಪಿಸುತ್ತಾರೆ. 1963ರಲ್ಲಿ 'Le Petit Soldat (The Little Soldier) ಎನ್ನುವ ಪ್ರಭುತ್ವ ವಿರೋಧಿ ಸಿನಿಮಾ ನಿರ್ದೇಶಿಸಿದ. ತನ್ನದೇ ದೇಶ ಫ್ರೆಂಚ್ ವಸಾಹತುಶಾಹಿ ಪಕ್ಕದ ಅಲ್ಜೀರಿಯಾದ ಸಾರ್ವಭೌಮವನ್ನೇ ಧಿಕ್ಕರಿಸಿ ಅದರ ಸ್ವಾತಂತ್ರ್ಯವನ್ನು ನಿರಾಕರಿಸಿ ಯುದ್ಧ ನಡೆಸಿರುವುದನ್ನು ಟೀಕಿಸಿದ. ಆದರೆ ಇಲ್ಲಿ ವಸಾಹುತುಶಾಹಿ ವಿರೋಧಿ ಪ್ರಣಾಳಿಕೆಯಿಲ್ಲ ಎಂದು ವಿಮರ್ಶಕರು ಟೀಕಿಸಿದ್ದರು. ಆಗ ಫ್ರಾನ್ಸ್‌ನಲ್ಲಿ ಮೂರು ವರ್ಷಗಳ ಕಾಲ 'Le Petit Soldat ಸಿನಿಮಾವನ್ನು ನಿಷೇಧಿಸಿದ್ದರು. 1963ರಲ್ಲಿ ಬಿಡುಗಡೆಯಾದ 'ಕಂಟೆಂಪ್ಟ್' ಬಹುಶಃ ಗೋದಾರ್ದರ ಕಮರ್ಷಿಯಲ್ ಸಿನಿಮಾ ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಅದು ಬಿಗ್ ಬಜೆಟ್ ಸಿನಿಮಾ. ದುರಹಂಕಾರಿ ಅಮೇರಿಕನ್ ನಿರ್ಮಾಪಕ, ಪ್ರತಿಷ್ಠೆಯ ಯುರೋಪಿಯನ್ ನಿರ್ದೇಶಕ ಮತ್ತು ಭ್ರಮನಿರಸನಗೊಂಡ ಹೆಂಡತಿಯ ನಡುವೆ ಬಳಲುವ ಚಿತ್ರಕತೆಗಾರ ಇಲ್ಲಿನ ಪ್ರೊಟಗಾನಿಸ್ಟ್. ವೈವಾಹಿಕ ಬದುಕಿನ ಬಿರುಕುಗಳನ್ನು ನಿರೂಪಿಸುವ ಈ ಸಿನಿಮಾ ಗೋದಾರ್ದತನವನ್ನು ಬಯಸುವ ಅಭಿಮಾನಿಗಳಿಗೆ ಹುಬ್ಬೇರಿಸುವಂತೆ ಮಾಡಿದ್ದು ನಿಜ. ಸಿನಿಮಾವೆಂದರೆ ಅದು ಹೇಳುವ ಕತೆ ಮತ್ತು ಸ್ವತಃ ಸಿನಿಮಾ ಹೇಗೆ ನಿರ್ಮಾಣವಾಗಿದೆ, ಪ್ರೇಕ್ಷಕ ಹೇಗೆ ಸ್ವೀಕರಿಸಿದ್ದಾನೆ ಎನ್ನುವ ಕತೆ ಎರಡೂ ಸಹ ಎಂದು ನಂಬಿದ್ದ ಗೋದಾರ್ದ ತನ್ನ ಈ ನಂಬಿಕೆಗೆ ಬದ್ಧನಾಗಿ ಧ್ಯಾನಸ್ಥನಂತೆ ಪ್ರಯೋಗಗಳನ್ನು ಮಾಡಿದರು.

1964ರಲ್ಲಿ Bande a part (Band of Outsiders) ಎನ್ನುವ ಗ್ಯಾಂಗ್‌ಸ್ಟರ್ ಸಿನಿಮಾ ನಿರ್ದೇಶಿಸಿದರು. ಇದು ಒಡಿಲೆ, ಅರ್ಥುರ್, ಫ್ರಾಂಜ್ ನಡುವಿನ ಪ್ರೇಮವೂ ಹೌದು. ತ್ರಿಕೋನ ಪ್ರೇಮವೇ? ಹೌದು ಮತ್ತು ಇಲ್ಲ. 1960–65ರ ಅವಧಿಯಲ್ಲಿ 9 ಸಿನಿಮಾಗಳನ್ನು ನಿರ್ದೇಶಿಸಿದ, ತಮ್ಮ ಸಿನಿಮಾಗಳ ಮೂಲಕ ನಿರಂತರ ಪ್ರಯೋಗಕ್ಕೆ ಒಳಪಡಿಸಿಕೊಳ್ಳುತ್ತಿದ್ದ ಗೋದಾರ್ದ Pierrot le fou ಮೂಲಕ ಮತ್ತೊಂದು ದಿಕ್ಕಿಗೆ ಹೊರಳಿದರು. ಈ ಸಂದರ್ಭದಲ್ಲಿ ಮಾತನಾಡುತ್ತಾ 'ಈ ಬಾರಿ ನನ್ನ ಮೊದಲ ಸಿನಿಮಾ ಮಾಡುತ್ತಿದ್ದೇನೆ ಎನ್ನುವ ಅನುಭವವಾಗುತ್ತಿದೆ. ಹೊಸ ಪ್ರದೇಶವನ್ನು ಪ್ರವೇಶಿಸುತ್ತಿದ್ದೇನೆ' ಎಂದು ಹೇಳಿದ್ದರು. 1966ರಲ್ಲಿ

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**